# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಸಂಚಿಕೆ ೨೫ ಡಿಸೆಂಬರ್ ೨೦೧೯



## ಬೃಂದಾವನ ವಾಣಿಯ ಇಪ್ಪತ್ತೈದನೇ ವಿಶೇಷ ಸಂಚಿಕೆ

# ಸಂಪಾದಕೀಯ

**ಬೃಂದಾವನ ಕನ್ನಡ ಬಾಂಧವರೇ,**

ಅಬ್ಬಾ! ಅದೆಷ್ಟು ಬೇಗ ಈ ವರ್ಷ ಓಡಿ ಹೋಯಿತು? ಇತ್ತೀಚೆಗೆ ೨೦೧೯ ವರ್ಷ ಆರಂಭವಾಗಿದೆ ಎನ್ನುವಷ್ಟರಲ್ಲಿಯೇ ಹೊಸ ವರ್ಷ ಬರುವ ಸಮಯವಾಯಿತು ಎಂದರೆ ಸೋಜಿಗವೆನಿಸುತ್ತದೆ. ಕಾರ್ಮಿಕ ಬದುಕಿನಲ್ಲಿ ತೊಡಗಿಕೊಂಡು ಒಂದಿಷ್ಟು ಕಮ್ಯೂನಿಟಿಯ ಕೈಂಕರ್ಯದಲ್ಲಿ ತೊಡಗಿಕೊಂಡಿದ್ದರಂತೂ ಸಮಯ ಹೋಗಿದ್ದೇ ತಿಳಿಯದು. ಇನ್ನು ಚಳಿರಾಯನ ಪರಾಕ್ರಮಕ್ಕೆ ನಾವೆಲ್ಲ ಶರಣು ಹೋಗಿದ್ದೇವೆ ಎಂದು ಹೇಳಿಕೊಳ್ಳುತ್ತಾ ಮುಂಬರುವ ಎರಡು ಮೂರು ತಿಂಗಳುಗಳಷ್ಟು ಈ ಮೂಲಕ ಸ್ವಾಗತಿಸುತ್ತಿದ್ದೇವೆ, ಅಷ್ಟೇ!

ಈ ವರ್ಷದ ಬಗ್ಗೆ ಷರಾ ಬರೆಯುತ್ತಿರುವ ಹೊತ್ತಿನಲ್ಲಿ, ನಮಗೆಲ್ಲ ಈ ವರ್ಷ ಹೊತ್ತು ತಂದ ಎರಡು ಖೇದಕರ ವಿಷಯಗಳನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಫೆಬ್ರುವರಿಯಲ್ಲಿ ನಿಧನರಾದ ಸಂತೋಷ್ ಕಡ್ಲೇಬೇಳೆ ಮತ್ತು ನವೆಂಬರ್ ನ ಕೊನೆಯಲ್ಲಿ ಪ್ರೊ.ಎಂ.ಜಿ. ಪ್ರಸಾದ್ ಅವರನ್ನೂ ಕಳೆದುಕೊಂಡು ನಾವು ಬಡವರಾಗಿದ್ದೇವೆ. ಬೃಂದಾವನದ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ನಮ್ಮೆಲ್ಲರಿಗೂ ಆಧಾರಸ್ತಂಭದಂತಿದ್ದ ಈ ಇಬ್ಬರು ಚೇತನಗಳನ್ನು ಕಳೆದುಕೊಂಡದ್ದು ನಮಗೆಲ್ಲ ತುಂಬಲಾರದ ನಷ್ಟ. ಕಳೆದ ತಿಂಗಳು, ನಮ್ಮಿಂದ ದೂರವಾದ ಪ್ರಸಾದ್ ಅವರನ್ನು ನಾವು ಕಳೆದುಕೊಂಡಿದ್ದೇವೆ ಎನ್ನುವುದು ಇನ್ನೂ ಶಾಕಿಂಗ್ ವಿಚಾರವಾಗಿಯೇ ಉಳಿದಿದೆ. ಬೃಂದಾವನ ವಾಣಿಯ ಮೊದಲ ಸಂಚಿಕೆಯಿಂದಲೂ, ಆಧ್ಯಾತ್ಮ ಬೃಂದಾವನದ ಸಕ್ರಿಯ ಅಂಕಣಕಾರರಾಗಿ ನಮಗೆಲ್ಲ ಮಾರ್ಗದರ್ಶಕರಾಗಿದ್ದ ಪ್ರಸಾದ್ ಅವರನ್ನು ಕಳೆದುಕೊಂಡಿರುವುದು ನಮ್ಮ ದುರ್ವಿಧಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥಿಸುತ್ತೇವೆ.


ಕರ್ನಾಟಕದಲ್ಲಿ ಸೋನೆ ಮಳೆಯ ಜಟಾಪಿಟಿ ನಿಂತು ವಾತಾವರಣ ಒಂದು ಸಮಾಧಾನದ ಹಂತಕ್ಕೆ ಬಂದಿತೆನ್ನುವಂತೆ, ಇತ್ತೀಚೆಗೆ ನಡೆದ ಉಪಚುನಾವಣೆಯ ದೆಸೆಯಿಂದ, ಈಗಿನ ಸರ್ಕಾರ ಬಹುಮತದಲ್ಲಿ ಸ್ಥಿರವಾಗಿ ನಿಂತಿದೆ ಎನ್ನಬಹುದು. ಅಲ್ಪಮತ-ಬಹುಮತದ ಗೊಂದಲದಲ್ಲಿ ಪ್ರಜೆಗಳ ನಿದ್ರೆಯನ್ನು ಹಾಳುಮಾಡುತ್ತಿದ್ದ ಅವಕಾಶವಾದಿ ರಾಜಕಾರಣಿಗಳಿಗೆ ಸ್ವಲ್ಪ ಬಿಡುವು ನೀಡುವಂತೆ ಸಾರ್ವಜನಿಕರು ಆಡಳಿತ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿರುವುದರಿಂದ, ಎಲ್ಲರಿಗೆ ಒಂದು ರೀತಿಯಲ್ಲಿ ನಿರಾಳವೆನಿಸಿದೆ.

ಇನ್ನಾದರೂ ನಮ್ಮ ಸ್ಥಳೀಯ ಸರ್ಕಾರ, ಕೇಂದ್ರದ ಜೊತೆಗೆ ಕೈಗೂಡಿಸಿ ಹೆಚ್ಚು ಹೆಚ್ಚು ಅನುದಾನವನ್ನು ಪಡೆಯುವುದರ ಮೂಲಕ ಸರ್ವತೋಮುಖ ಪ್ರಗತಿಗೆ ಆದ್ಯತೆ ನೀಡಬೇಕು. ಇನ್ನೂ ಮೂರೂವರೆ ವರ್ಷವಾದರೂ ಅಧಿಕಾರಕ್ಕಾಗಿ ತಮ್ಮ ತಮ್ಮಲ್ಲೇ ಕಚ್ಚಾಡಿಕೊಳ್ಳದೇ ರಾಜ್ಯದ ಜನರ ಹಿತವನ್ನು ಮುಂದಿಟ್ಟುಕೊಂಡು ಎಲ್ಲರ ಏಳಿಗೆಗೆ ನಮ್ಮ ಕಾರ್ಯಾಂಗ ಶ್ರಮಿಸುತ್ತದೆ ಎನ್ನುವುದು ನಮ್ಮ ಆಶಯ.

ಈ ಬಾರಿಯ ದ್ವೈಮಾಸಿಕವನ್ನು ನಾವು ವಿಶೇಷವಾಗಿ ವಿನ್ಯಾಸಗೊಳಿಸಿದ್ದೇವೆ - ಈ ಮೂಲಕ ಬೃಂದಾವನ ವಾಣಿಯ ಇಪ್ಪತ್ತೈದನೇ ಸಂಚಿಕೆಯನ್ನು ಬಿಡುಗಡೆಗೊಳಿಸುತ್ತಿದ್ದೇವೆ ಎಂದು ತಿಳಿಸಲು ಸಂತೋಷವಾಗುತ್ತದೆ. ಈ ಸಂಚಿಕೆಯಲ್ಲಿ ಅನೇಕ ವೈಚಾರಿಕ–ಧಾರ್ಮಿಕ ಲೇಖನಗಳು, ಪ್ರಬಂಧ-ಪದ್ಯಗಳು ಹಾಗೂ ನಗೆ ತುಂಬಿದ ಹಾಸ್ಯ ಲೇಖನಗಳನ್ನೂ ಪ್ರಕಟಿಸುತ್ತಿದ್ದೇವೆ. ದಯವಿಟ್ಟು ನಿಮ್ಮ ಅಭಿಪ್ರಾಯವನ್ನು ಎಂದಿನಂತೆ ನಮ್ಮೊಡನೆ ಹಂಚಿಕೊಳ್ಳಿ.

ನಮ್ಮ ಮುಂದಿನ ಕಾರ್ಯಕ್ರಮ: ಸಂಕ್ರಾಂತಿ ಹಬ್ಬ ಆಚರಣೆ, ಜನವರಿ ೧೯ರ ಭಾನುವಾರ. ಶ್ರೀಮತಿ ಇಂದುಶ್ರೀ ರವೀಂದ್ರ ಅವರಿಂದ ಕುಟುಂಬದ ಎಲ್ಲ ಸದಸ್ಯರಿಗೂ ಮನರಂಜನೆಯ ಕಾರ್ಯಕ್ರಮವಿದೆ. ವಿವರಗಳನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದು. ತಾವೆಲ್ಲರೂ ತಪ್ಪದೇ ಭಾಗವಹಿಸಬೇಕಾಗಿ ವಿನಂತಿ... ಮತ್ತೆ ಸಿಗೋಣ.

ಮುಂಬರುವ ಹೊಸ ವರ್ಷ ಹಾಗೆಯೇ ಹೊಸ ದಶಕ ಎಲ್ಲರಿಗೂ ಮಂಗಳವನ್ನುಂಟು ಮಾಡಲಿ!



ಪ್ರಧಾನ ಸಂಪಾದಕ
**ಸತೀಶ್ ಹೊಸನಗರ**


ಸಂಪಾದಕ ಮಂಡಳಿ:

**ದಾಶರಥಿ ಘಟ್ಟು, ಅಜೇಯ ರಾವ್, ಲಕ್ಷ್ಮಿ ಕೋಲಾಲ, ಶ್ರೀವಿದ್ಯಾ ಪ್ರಶಾಂತ್, ರಘುರಾಂ ರಾಯಸಂ, ಮಮತಾ ನಾಗೇಂದ್ರ, ಶ್ರೀವತ್ಸ ಕುಲಕರ್ಣಿ**




**ಪ್ರಕಾಶಕರು:**

ಬೃಂದಾವನ ಕನ್ನಡ ಸಂಘ

501(3)(c) ಪಡೆದ ಚಾರಿಟಿ ಸಂಸ್ಥೆ

Karnataka Cultural Organization (KCO) Brindavana
New Jersy, USA

www.Brindavana.org

© 2019. All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ.  ಚಿತ್ರ ಕೃಪೆ ಅಂತರ್ಜಾಲ/ಲೇಖಕರು

ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ:**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ. ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.brindavana.org ಅನ್ನ್ ವಿಸಿಟ್ ಮಾಡಿ, ನಿಮ್ಮ ವಿವರಗಳನ್ನು ನೀಡಿ ಸದಸ್ಯತ್ವವನ್ನು ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org

೦೨ ಸಂಪಾದಕೀಯ



೧೦ ಎಂಜಿ ಪ್ರಸಾದ್ - ಶ್ರದ್ಧಾಂಜಲಿ




೧೪ ಬೃಂದಾವನ ಮಕ್ಕಳೋತ್ಸವ

೧೫ ಕನ್ನಡ ಶಾಲೆ ಕಾರ್ಯಕ್ರಮಗಳು

೨೦ ಮಕ್ಕಳೋತ್ಸವ ಚಿತ್ರ ಸ್ಪರ್ಧೆ

೨೨ ಬೃಂದಾವನ ಕನ್ನಡ ಶಾಲೆ



೦೬ ಬೃಂದಾವನ ವಾಣಿ ಬೆಳ್ಳಿ ಸಂಭ್ರಮ

೦೮ ಅಧ್ಯಕ್ಷರ ನುಡಿ

೨೪ ನವ ಜೆರ್ಸಿ ಕನ್ನಡ ರಾಜ್ಯೋತ್ಸವ

೨೬ ಧರ್ಮ, ಜೀವ ಮತ್ತು ಪ್ರಕೃತಿ

೨೭ ಕವನ– ಕನ್ನಡಾಂಬೆಗೆ ನಮನ



೨೮ ನಾನು ಹೋದರೆ ಹೋದೇನು






೨೧ ಹಾಸ್ಯ - ಬಿಡೇ

೨೪ ಕೃಷ್ಣ - ದ್ರೌಪದಿ ಸಂವಾದ

೨೭ ನನ್ನ ಸೌಭಾಗ್ಯ







೨೮ ಚಿಣ್ಣರ ಚಿತ್ರಗಳು

೨೯ ಪಾಕ ಶಾಸ್ತ್ರ



೪೦ ಆರೋಗ್ಯವೇ ಮಹಾಭಾಗ್ಯ

**ಹಿಂಪುಟ ಚಿತ್ರ:**

ನ್ಯೂ ಜೆರ್ಸಿಗೆ ಬಂದ early ಹಿಮ

# ಇಪ್ಪತ್ತೈದು ಸಂಚಿಕೆಗಳು, ಚೆಂದದ ಮುಖಪುಟಗಳು

































# ಅದೆಷ್ಟೋ ಬರಹಗಳು, ಕವನಗಳು, ಚಿತ್ರಗಳು, ನಾಟಕಗಳು

*ಅದೆಷ್ಟೋ ಹಾಸ್ಯ, ಚಿಂತನೆಗಳು, ದಾರ್ಶನಿಕಗಳು, ರಸಭರಿತ ಪಾಕಗಳು, ಸಂದರ್ಶನ, ಸಿನೆಮಾ ಸುದ್ದಿಗಳು*



# ಅಧ್ಯಕ್ಷರ ನುಡಿ



ಬೃಂದಾವನದ ಸರ್ವ ಸದಸ್ಯರಿಗೆ ನಮಸ್ಕಾರಗಳು.  ಮುಂಬರುವ ಹೊಸ ವರ್ಷದ ಶುಭ ಹಾರೈಕೆಗಳು ಮತ್ತು ಮುಂಬರುವ ಸಂಕ್ರಾಂತಿ ಹಬ್ಬದ ಶುಭಾಶಯಗಳು!


ಈ ವರ್ಷದ ಮಳೆಯೂ ಜೋರು ಹಾಗೂ ಛಳಿಯೂ ಜೋರು ಎನ್ನುವಂತೆ ಡಿಸೆಂಬರ್ ತಿಂಗಳ ಮೊದಲಿನಲ್ಲಿಯೇ ನ್ಯೂ ಜೆರ್ಸಿಯ ಉದ್ದಗಲಕ್ಕೂ ಹಿಮ ಉದುರಿಸಿ, ಮುಂಬರುವ ಧೀರ್ಘ ಚಳಿಗಾಲದ ಮುನ್ನೆಚ್ಚರಿಕೆಯನ್ನು ನಮಗೆಲ್ಲ ಮುಟ್ಟಿಸಿಯಾಗಿದೆ.  ಹೊತ್ತಿಗೆ ಸರಿಯಾಗಿ, ಇಲ್ಲಿ ಎಲ್ಲವೂ ಆಗುತ್ತದೆ, ನಿರಂತರ ಬದಲಾಗುವ ಸೀಜನ್ನುಗಳೂ ನಮ್ಮ ನ್ಯೂ ಜೆರ್ಸಿಯಲ್ಲಿ ತಲೆ ತಗ್ಗಿಸಿ ತಮ್ಮ ಕಾರ್ಯವನ್ನು ಹೇಳಿಕೊಟ್ಟ ಹಾಗೆ ಮಾಡುತ್ತವೆ ಎನ್ನುವಂತೆ ಎಲ್ಲವೂ ಇಲ್ಲಿ ಮಾಂತ್ರಿಕವಾಗಿ ನಡೆಯತೊಡಗುತ್ತದೆ.

ಡಿಸೆಂಬರ್ ಏಳರಂದು ಬೃಂದಾವನದ ವಾರ್ಷಿಕೋತ್ಸವ ಹಾಗೂ ಮಕ್ಕಳ ದಿನಾಚರಣೆಯನ್ನು ಬಹಳ ಅದ್ದೂರಿಯಿಂದ ನಡೆಸಿಕೊಡಲಾಯಿತು. ಮುಂಜಾನೆ ಸರ್ವ ಸದಸ್ಯರ ಸಭೆ, ಜೊತೆಯಲ್ಲಿ ಮಕ್ಕಳ ವಯೋಮಿತಿಗೆ ತಕ್ಕನಾಗಿ ಕನ್ನಡ ಕಸರತ್ತು ಮತ್ತು ಹಾಡಿನ ಸ್ಪರ್ಧೆಗಳು ನಡೆದವು. ಮಧ್ಯಾಹ್ನದ ಕಾರ್ಯಕ್ರಮ ಸಂಪೂರ್ಣವಾಗಿ ಬೃಂದಾವನದ ಸದಸ್ಯರ ಮತ್ತು ಶಾಲೆಯ ಮಕ್ಕಳ ಕಾರ್ಯಕ್ರಮಕ್ಕೆ ಮೀಸಲಾಗಿತ್ತು. ಈ ಹೊಸದಾಗಿ ಆರಂಭಿಸಿದ ಹಿಲ್ಸ್‌ಬೊರೋ ಶಾಲೆಯ ಮಕ್ಕಳಿಂದ ಹಿಡಿದು, ಸೌತ್ ಬ್ರನ್ಸ್‌ವಿಕ್, ಎಡಿಸನ್ ಹಾಗೂ ಈಸ್ಟ್ ವಿಂಡ್ಸರ್ ಶಾಲೆಯ ಮಕ್ಕಳಿಂದ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿತ್ತು.  ಅನೇಕ ಸ್ವಯಂ ಸೇವಕರುಗಳು ವಾರಗಟ್ಟಲೇ ಶ್ರಮಿಸಿ, ಸ್ಕ್ರಿಪ್ಟ್ ಬರೆದು, ಮಕ್ಕಳನ್ನು ತರಬೇತುಗೊಳಿಸಿ ಅವರಿಂದ ಅನೇಕ ನಾಟಕಗಳನ್ನು ಪ್ರಸ್ತುತ ಪಡಿಸಿ ಶ್ರೋತೃಗಳ ಮನ್ನಡೆ ಪಡೆದಿರುವುದು ಈ ಕಾರ್ಯಕ್ರಮದ ಒಂದು ಹೆಗ್ಗಳಿಕೆ ಎಂದರೆ ತಪ್ಪೇನಿಲ್ಲ. ಮಕ್ಕಳ ಪ್ರತಿಯೊಂದು ವಿಷಯ ವಸ್ತುವನ್ನು ಅದ್ಭುತವಾಗಿ ತಯಾರಿಸಲಾಗಿತ್ತು, ಅವುಗಳನ್ನು ಮಕ್ಕಳ ಪ್ರತಿಭೆಯ ಮೂಲಕ ಹೊರತಂದಿರುವುದು ನಿಜವಾಗಿಯೂ ಶ್ಲಾಘನೀಯವಾದುದು. ನಮ್ಮ ಮುಂದಿನ ಕಾರ್ಯಕ್ರಮ ಜನವರಿ ೧೯ ರಂದು ನಾವೆಲ್ಲರೂ ಅದ್ದೂರಿಯಾಗಿ ಸಂಕ್ರಾಂತಿ ಹಬ್ಬವನ್ನು ಆಚರಿಸೋಣ. ಸದ್ಯದಲ್ಲೇ ಇತರ ಎಲ್ಲ ವಿವರಗಳನ್ನು ಪ್ರಕಟಿಸಲಾಗುವುದು.  ದಯವಿಟ್ಟು ದಿನಾಂಕವನ್ನು ಕಾದಿಟ್ಟರಿ. ನಮ್ಮ ಸೌರಭ ತಂಡದ ವತಿಯಿಂದ ಆಚರಿಸುತ್ತಿರುವ ಈ ಮೊದಲ ಸಂಕ್ರಾಂತಿ ಕಾರ್ಯಕ್ರಮಕ್ಕೆ ನಿಮ್ಮೆಲ್ಲರಿಗೂ ಆತ್ಮೀಯವಾದ ಸ್ವಾಗತ.

ಈ ವರ್ಷದುದ್ದಕ್ಕೂ ನಮ್ಮ ಕರೆಗೆ ಓಗೊಟ್ಟು ಅನೇಕ ಶ್ರಮದಾನ ಮತ್ತು ದೇಣಿಗೆ ಸಂಗ್ರಹಣೆ ಕಾರ್ಯದಲ್ಲಿ ನೆರವಾದ ಎಲ್ಲ ಕಾರ್ಯಕರ್ತರಿಗೂ ಮತ್ತು ತಮ್ಮ ಕೈಲಾದ ಸಹಾಯವನ್ನು ಮಾಡಿದ ಎಲ್ಲ ದಾನಿಗಳಿಗೂ ನಮ್ಮ ವಂದನೆಗಳು.  ಭಾರತೀಯ ಸೈನಿಕರ ಸಹಾಯಾರ್ಥವಾಗಿ, ಕರ್ನಾಟಕದ ಅತಿವೃಷ್ಟಿಯಲ್ಲಿ ನೊಂದ ಸಂತ್ರಸ್ತರಿಗೆ ಮತ್ತು ಸ್ಥಳೀಯ ಸಂಸ್ಥೆಗಳ ಬೆಂಬಲಕ್ಕೋಸ್ಕರ ನೀವು ನಮ್ಮ ಕೈ ಜೋಡಿಸಿದ್ದೀರಿ.  ಇದೇ ರೀತಿ ನಿಮ್ಮ ಸಹಾಯ ಮತ್ತು ಅನುದಾನ ನಿರಂತರವಾಗಿ ಮುಂದುವರೆಯಲಿ.  ಅಲ್ಲದೇ, ನವೆಂಬರ್ ಕೊನೆಯಲ್ಲಿ ನಮ್ಮ ಬೃಂದಾವನದ ಆಧಾರ ಸ್ಥಂಭದಂತಿದ್ದ ಪ್ರೊ. ಎಂ.ಜಿ.ಪ್ರಸಾದ್ ಅವರನ್ನು ಕಳೆದುಕೊಂಡೆವು.  ಈ ಸಂದರ್ಭದಲ್ಲಿ ಪ್ರಸಾದ್ ಅವರ ಕೊಡುಗೆಯನ್ನು ಸೌರಭ ತಂಡ ವಿಶೇಷವಾಗಿ ನೆನೆಯುತ್ತದೆ.  ಮೃತರ ಆತ್ಮಕ್ಕೆ ಶಾಂತಿ ಕೋರುತ್ತಾ, ನೋವಿನಲ್ಲೂ ನಾವೆಲ್ಲ ಒಟ್ಟುಗೂಡಿದ್ದೇವೆ.

ಇಪ್ಪತ್ತೈದನೇ ವಿಶೇಷ ಸಂಚಿಕೆಯಾಗಿ ಈ ಬೃಂದಾವನ ವಾಣಿ ಬಹಳ ಚೆನ್ನಾಗಿ ಮೂಡಿ ಬಂದಿದೆ.  ಈ ದ್ವೈ ಮಾಸಿಕವನ್ನು ಬರಮಾಡಿಕೊಂಡು ನಿಮ್ಮ ಅನಿಸಿಕೆಗಳನ್ನು ತಪ್ಪದೇ ಹಂಚಿಕೊಳ್ಳಿ.  ಇಂತಹ ಸುಂದರವಾದ ಸಂಚಿಕೆಯನ್ನು ನಮ್ಮ ಮುಂದೆ ಪ್ರಸ್ತುತ ಪಡಿಸುತ್ತಿರುವ ಬೃಂದಾವನ ವಾಣಿ ತಂಡದ ಕಾರ್ಯಕರ್ತರಿಗೆಲ್ಲ ಹೃತ್ಪೂರ್ವಕ ವಂದನೆಗಳು.

ಮತ್ತೊಮ್ಮೆ, ಎಲ್ಲರಿಗೂ ಮುಂಬರುವ ಹೊಸ ವರ್ಷ ಮತ್ತು ಹೊಸ ದಶಕ ಹರ್ಷವನ್ನು ತರಲಿ!



ಸತೀಶ್ ಹೊಸನಗರ
ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ
ಸೌರಭ ತಂಡದ ಪರವಾಗಿ



# ಬೃಂದಾವನ ವಾಣಿಯ ಮೊದಲ ಸಂಚಿಕೆಯ ನೆನಪು

*ಮಲ್ಲಿಕ್ ಪ್ರಸಾದ್*

ಬೃಂದಾವನ ವಾಣಿ - ಬೆಳ್ಳಿ ಸಂಭ್ರಮಕ್ಕೆ ಶುಭಾಶಯಗಳು !

ಚೊಚ್ಚಲ ಬೃಂದಾವನ ವಾಣಿ ಬಿಡುಗಡೆ ಸಂಭ್ರಮ ಹೇಗಿತ್ತು ಗೊತ್ತೇ ? ನನಗಿನ್ನೂ ಚೆನ್ನಾಗಿ ನೆನಪಿದೆ... ೨೦೧೫ ರಲ್ಲಿ ಬೃಂದಾವನ ಸುತ್ತ ಮುತ್ತ ನಡೆಯುವ ಕನ್ನಡ ಮನಸ್ಸುಗಳ ಬಿಂಬಕ್ಕೆ ವಾಹಿನಿ ಇರಬೇಕೆಂಬ ಆಸೆ. ಆಗ ತಾನೇ ಆರಂಭವಾಗಿದ್ದ ಬೃಂದಾವನ ಅಕ್ಷರ ಭಂಡಾರ / ಸಾಹಿತ್ಯ ಬೃಂದಾವನದ ಉತ್ಸಾಹಿಗಳ ಜೊತೆ ಹಂಚಿಕೊಂಡಾಗ, ನಮ್ಮ ಮಿಲನ ತಂಡದಲ್ಲಿ ಸಾಹಿತ್ಯ ಜವಾಬ್ದಾರಿ ಹೊತ್ತ, ನಿರ್ದೇಶಕರಾದ - ಸತ್ಯ ಪ್ರಸಾದ್, ಖಂಡಿತಾ ಮಾಡುವ ! ಈ ಭಾನುವಾರ ನಮ್ಮ ಮನೆಯಲ್ಲಿ ಚಹಾ ಜೊತೆ ಚರ್ಚೆ ಮಾಡಿ ಅದಕ್ಕೆ ರೂಪ ರೇಖೆ ಕೊಡುವ ಎಂದು ಮನೆಗೆ ಆಹ್ವಾನಿಸಿದರು. ದಿವ್ಯಾ ಪ್ರಸಾದ್ ಅವರ ಆತಿಥ್ಯದಲ್ಲಿ ಘಮ ಘಮ ಚಹಾ / ಬಜ್ಜಿ ಸವಿಯುತ್ತ, ನಮ್ಮ ಸಣ್ಣ ಸೈನ್ಯ - ಸತ್ಯ ಪ್ರಸಾದ್, ಸರಿತಾ ನವಳಿ, ಅಹೀಶ್ ಭಾರದ್ವಾಜ, ಅಶೋಕ್ ಕಟ್ಟೆಮನಿ ಮತ್ತು ಕೇಶವ ಪ್ರಶಾಂತ್ ಜೊತೆ ಪ್ರಾರಂಭವಾಯಿತು ಬೃಂದಾವನ ವಾಣಿಯ ಪಯಣ. ಈ-ಪತ್ರಿಕೆ ಸುಧಾ, ತರಂಗ ಪತ್ರಿಕೆಗೆ ಸಮಾನವಾಗಿ ಇರಬೇಕೆಂಬ ಆಶಯ ಹೊತ್ತು ಸತ್ಯ - ಪ್ರಧಾನ ಸಂಪಾದಕರಾಗಿ, ಸರಿತಾ - ಸಂಪಾದಕರಾಗಿ ಬೃಂದಾವನ ವಾಣಿಯ ಚುಕ್ಕಾಣಿ ಹಿಡಿದರು. ಅಹೀಶ್ ತಮ್ಮ ಕುಶಲ ತೋರಿ ಟೆಂಪ್ಲೆಟ್ (template)ತಯಾರಿಸಿದರು, ಕನ್ನಡ ಬಣ್ಣಗಳ ಸುಮಧುರ ಸಂಯೋಜನೆ... ವಾಹ್ ! ಇನ್ನು ಕನ್ನಡ ಅಕ್ಷರಗಳು ತುಂಬುವುದೊಂದೇ ಬಾಕಿ - ಇಡೀ ಸಂಪಾದಕ ವರ್ಗ ಇಂತಹ ಹೊಸ ಸಾಹಸಕ್ಕೆ ಕೈ ಜೋಡಿಸಿ ಸೈ ಎನಿಸಿಕೊಂಡರು!

ಬೃಂದಾವನ ವಾಣಿಯ ಮೊದಲ ಸಂಚಿಕೆ ಬರಹಗಳ ಕರೆಗೆ ಒಳ್ಳೆ ಸ್ಪಂದನೆ ಸಿಕ್ಕಿತು, ಇಡೀ ಸಂಪಾದಕ ವರ್ಗದ ಹಲವು ವಾರಗಳ ಪರಿಶ್ರಮದ ಫಲ ನವೆಂಬರ್ ೧ ೨೦೧೫ ಸುಂದರ ೧೬ ಪುಟಗಳ ಬೃಂದಾವನ ವಾಣಿಯ ಜನನ... ಈ ದೊಡ್ಡ ಕಾರ್ಯಕ್ಕೆ ಕೈ ಜೋಡಿಸಿ ಹಲವಾರು ಮಿತ್ರರು ತಮ್ಮ ಬರವಣಿಗೆ ಕೌಶಲ್ಯ ತೋರಿದರು. ಹೊಸ ಕೈಂಕರ್ಯವನ್ನು ಹರಸಿ ಡಾ. ಚಂದ್ರಶೇಖರ ಕಂಬಾರ, ಶ್ರೀ. ಟಿ ಎನ್ ಸೀತಾರಾಮ್, ಶ್ರೀ. ಶ್ರೀನಿವಾಸ ಕಪ್ಪಣ್ಣ, ಶ್ರೀ. ಜೋಗಿ, ಶ್ರೀ. ಮೈಶ್ರೀ ನಟರಾಜ, ಶ್ರೀ. ಶ್ರೀವತ್ಸ ಜೋಶಿ ಅವರ ಶುಭ ಹಾರೈಕೆ ಬಂದಾಗ ಎಂತಹ ಆನಂದ.

ಮೊದಲ ವಾಣಿಯ ಹಲವಾರು ಒಳ್ಳೆ ಅಂಕಣಗಳ ಪೈಕಿ ನನಗೆ ತುಂಬಾ ಇಷ್ಟವಾದ ಒಂದೆರಡರ ಬಗ್ಗೆ ಹೇಳುತ್ತೇನೆ... ಮೊದಲನೆಯದಾಗಿ ಮುಖಪುಟ - ನಮ್ಮ ಶಿವಮೊಗ್ಗದ ಮೈತುಂಬಿ ಜಿಗಿಯುತ್ತಿರುವ ಜೋಗ ಜಲಪಾತ ಅತ್ಯಾಕರ್ಷಕವಾಗಿ ವಾಣಿಯನ್ನು ಮೂಡಿಸಿತು, "ಬೃಂದಾವನ ಸಂಘ ಅಮರವಾಗಲಿ" ಶೀರ್ಷಿಕೆಯ ಬಣ್ಣಗಳ ಕೈ ಬರಹದಲ್ಲಿ "ಅಮೇರಿಕ ಕನ್ನಡಿಗರ ಸುಂದರ ಬೃಂದಾವನ ಸಂಘ ಮಿನುಗಲಿ" ಶಿವಾಜಿ ತೇರದಾಳ್'ರ (ರೂಪ ತೇರದಾಳ್ ಅವರ ತಂದೆ) ಮೊದಲ ಅಕ್ಷರ ಸಾಲುಗಳ ಕವಿತೆ (Acrostic Poem)ತುಂಬಾ ಅರ್ಥ ಗರ್ಭಿತವಾಗಿತ್ತು. ಆರು ಚಿನ್ನದ ಪದಕ ವಿಜೇತೆ, ಕೇಂದ್ರ ಸಾಹಿತ್ಯ ಅಕಾಡೆಮಿ - ಯುವ ಪುರಸ್ಕಾರ ಪಡೆದ, ನಮ್ಮ ನ್ಯೂ ಜೆರ್ಸಿಗೆ ನವ ವಧುವಾಗಿ ಆಗಮಿಸಿದ್ದ ಕಾವ್ಯ ಕಡಮೆ ನಾಗರಕಟ್ಟೆ ಅವರ ವ್ಯಕ್ತಿ ಪರಿಚಯ ಅಂಕಣ ಕಾವ್ಯರನ್ನು ಸೊಗಸಾಗಿ ಪರಿಚಯಿಸಿತು.

ಇನ್ನೊಂದು ವಿಶೇಷವೆಂದರೆ ೨೫ ವಾಣಿ ಸಂಚಿಕೆಗಳು ಬೃಂದಾವನ ಅಂತರ್ಜಾಲ ವಾಸಸ್ಥಾನ brindavana.org - ವಾಣಿ ಭಾವಣಿಯಲ್ಲಿ ಯಾವಾಗಲೂ ಲಭ್ಯವಿರುತ್ತದೆ, ನೋಡ ಬೇಕೆನಿಸಿದಾಗ - ಕ್ಲಿಕ್ಕಿಸುವೋದೊಂದೇ ಕೆಲಸ ! ನಾಲ್ಕು ವರುಷದ ಸಂಪಾದಕರ / ಸಂಪಾದಕೀಯ ವರ್ಗದ ಉತ್ಸಾಹ ನೋಡಿದಾಗ ಬೃಂದಾವನ ವಾಣಿ ಸಂಚಿಕೆಗಳು ಹೀಗೆಯೇ ಹಲವು ಶತಕಗಳು ಯಶಸ್ವಿಯಾಗಿ ಮೂಡಿ ಬರುತ್ತದೆಂಬ ದೃಢ ನಂಬಿಕೆ ತರಿಸಿದೆ. ಬೃಂದಾವನ ವಾಣಿ - ಬೆಳ್ಳಿ ಸಂಭ್ರಮಕ್ಕೆ ಶುಭಾಶಯಗಳು!

ಶುಭ ಹಾರೈಕೆಗಳೊಂದಿಗೆ.
ಮಲ್ಲಿಕ್ ಪ್ರಸಾದ್

# ಭಾವಪೂರ್ಣ ಶ್ರದ್ಧಾಂಜಲಿ



## ಶ್ರೀ ಮಾರೇಹಳ್ಳಿ ಗೋಪಾಲನ್ ಪ್ರಸಾದ್

(೧೯೫೦ - ೨೦೧೯)

# ಏನೆಂದು ಸಂಬೋಧಿಸಲಿ ನಿಮ್ಮನ್ನು

*ವಸುಧಾ ಗಿರೀಶ್*

ಈ ಶ್ರದ್ಧಾಂಜಲಿಯನ್ನು ಹೇಗೆ ಶುರುಮಾಡಲಿ ಅಂತಗೊತ್ತಾಗುತ್ತಿಲ್ಲ. ನಮ್ಮನ್ನು ಅಗಲಿದ ನೆಚ್ಚಿನ ಮಾರೇಹಳ್ಳಿ ಗೋಪಾಲನ್ ಪ್ರಸಾದ್ ಅವರನ್ನು ಹೇಗೆ ಸಂಭೋದಿಸುವುದು ಅಂತ ಯೋಚನೆ ಮಾಡಿ ಮಾಡಿ ಕೊನೆಗೆ ಅದರ ಬಗ್ಗೆಯೇ ಬರೆಯೋಣ ಅಂತ ಅಂದುಕೊಂಡೆ.

ಸುಮಾರು ಇಪ್ಪತ್ತ್ಮೂರು ವರ್ಷಗಳ ಹಿಂದೆ ನ್ಯೂಜರ್ಸಿಯಲ್ಲಿ ಕೆಲವು ಕನ್ನಡ ಮಾತನಾಡುವ ಕುಟುಂಬದವರು ಪ್ರತಿ ಭಾನುವಾರ ಸೇರಿ ಶ್ರೀ ವಿಷ್ಣು ಸಹಸ್ರನಾಮವನ್ನುಪಠಿಸುತ್ತಿದ್ದೆವು. ವಿಶೇಷ ದಿನಗಳಲ್ಲಿ ಕೂಡ ಸೇರುತ್ತಿದ್ದೆವು. ಈ ವಿಶೇಷ ದಿನಗಳಂದು ಒಬ್ಬ ವಿಶಿಷ್ಟವಾದ "ಅತಿಥಿ" ಆ ವಿಶೇಷ ದಿನದ ವೈಶಿಷ್ಟ್ಯತೆಯ ಬಗ್ಗೆ ನಮಗೆ ತಿಳಿಸುತ್ತಿದ್ದರು. ಕೆಲ ವರ್ಷಗಳ ನಂತರ ನನ್ನ ಜೀವನದಲ್ಲಿ ಒಂದು ನಿರ್ಧಾರದ ಘಳಿಗೆ ಬಂದಿತು. ವೃದ್ಧರಾದ ಅತ್ತೆಮಾವಂದಿರನ್ನು ನೋಡಿಕೊಳ್ಳಲು ಮರಳಿ ಭಾರತಕ್ಕೆ ಹೋಗಬೇಕು, ಆದರೆ ಅತ್ತೆ ಮಾವನವರ ಜೊತೆ ಹೇಗೆ ಮನಸ್ತಾಪ ಬಾರದ ಹಾಗೆ ಇರುವುದು? ಆಗ ಈ ವಿಶಿಷ್ಟಅತಿಥಿ ಒಂದು ಮುತ್ತಿನಂತಹ ಮಾತನ್ನು ನುಡಿದರು, "ಶ್ರೀಲಕ್ಷ್ಮಿ ನಾರಾಯಣರ ಸೇವೆ ಮಾಡುವ ಅವಕಾಶ ಸಿಕ್ಕಿದೆ ನಿಮಗೆ". ಅರ್ಥಾತ್ ಅತ್ತೆ ಮಾವನವರನ್ನು ಲಕ್ಷ್ಮಿ ನಾರಾಯಣ ಅಂತ ಕಾಣಬೇಕು. ನಾನು ಹಾಗೆ ನಡೆದುಕೊಂಡಿದ್ದಕ್ಕೆ ನನ್ನ ಅತ್ತೆ ಮಾವನವರಿಗೆ ಸೊಸೆ ಆಗದೆ ಮಗಳಾಗಲೂ ಸಾಧ್ಯವಾಯಿತು.

ದೇವರ ಆಟ ಬಲ್ಲವರು ಯಾರು? ಹನ್ನೆರೆಡು ವರ್ಷಗಳ ನಂತರ ಅಮೆರಿಕಾಗೆ ಮರಳಿ ಬಂದೆವು. ನಮ್ಮ ಸ್ನೇಹಿತರಾದ  ನಾಗರಾಜ್ ಮತ್ತು ನಾಗಲಕ್ಷ್ಮಿ ಅವರ ಮನೆಯಲ್ಲಿ ಶ್ರೀಮದ್ಭಾಗವತದ ಪ್ರವಚನ ಎಂದು ಕರೆಯೋಲೆ ಬಂತು. ಅಲ್ಲಿ "ಗುರು" ಪ್ರಸಾದ್ ಅವರ ಸನಾತನ ಧರ್ಮದ ಉಳಿವಿಗಾಗಿ ನಿರತ ಸೇವೆಯ ಪ್ರತೀತವಾಗಿ ಪ್ರತಿ ಗುರುವಾರದಂದು ದೂರವಾಣಿಯ ಮುಖಾಂತರ ನಡೆಯುವ ಸತ್ಸಂಗದ ಬಗ್ಗೆ ತಿಳಿಯಿತು. ಅಂದಿನಿಂದ ಪ್ರತಿ ಗುರುವಾರ ತಪ್ಪದೆ ಸತ್ಸಂಗದಲ್ಲಿ ಭಾಗವಹಿಸ ತೊಡಗಿದೆ. ಇಲ್ಲಿ ನನಗೆ ಜೀವನದ ಎಷ್ಟೊಂದು ಅರ್ಥವಾಗದ ಪ್ರಶ್ನೆಗಳಿಗೆ ಉತ್ತರ ಸಿಗತೊಡಗಿದವು. ದೇವರಲ್ಲಿ ಅಚಲವಾದ ನಂಬಿಕೆ ಹುಟ್ಟಿತು.

ನನ್ನ ಆಸಕ್ತಿಯನ್ನು ಕಂಡು ಅವರು ಎಲ್ಲಿಯಾದರೂ ಮಾತನಾಡಿದರೆ ಅಥವಾ ಸತ್ಸಂಗವಿದ್ದರೆ ನನಗೆ ತಿಳಿಸುತ್ತಿದ್ದರು. ನನಗೆ ಹೋಗಲು ಆಗದಿದ್ದರೆ ಭಾಷಣದ/ಪ್ರವಚನದ ಧ್ವನಿಮುದ್ರಣವನ್ನು ಕಳಿಸುತ್ತಿದ್ದರು. ಮುಂದೆ ನಮ್ಮ ಸತ್ಸಂಗದ ಬಂಧುಗಳ ಕೋರಿಕೆಗೆ ಮಂಗಳವಾರವೂ ಶ್ರೀರಂಗ ಸದ್ಗುರುಗಳ ವಿಚಾರಧಾರೆಯನ್ನು ನಮಗೆ ತಿಳಿಸಲು ಒಪ್ಪಿದರು. ಮಗುವಿನ ಕೈ ಹಿಡಿದು ನಡೆಯುವುದನ್ನುಕಲಿಸುವ "ತಂದೆಯ" ಹಾಗೆ ಧರ್ಮದ ಪಥದಲ್ಲಿ ನಡೆಸುವ ದಾರಿದೀಪವಾದರು. ನನಗೆ ಏನೇ ಪ್ರಶ್ನೆ ಅಥವಾ ಮನಸ್ಸಿನಲ್ಲಿ ಧ್ವಂದ್ವ ಇದ್ದರೆ ಒಂದು ಮಿಂಚಂಚೆನ್ನು ಕಳಿಸಿದರೆ ಸಾಕು ಸಮಯ ಮಾಡಿಕೊಂಡು ಉತ್ತರ ಕೊಡುತ್ತಿದ್ದರು.

ತಂದೆ, ತಾಯಿ, ಮಾವನವರು.... ಈ ಎಲ್ಲ ಹಿರಿಯರನ್ನು ಕಳೆದುಕೊಂಡ ನಾನು ಕೆಲ ತಿಂಗಳಲ್ಲಿ ಅತ್ತೆಯವರನ್ನೂ ಕಳೆದುಕೊಂಡೆ. ಅಂದಿನಿಂದ ಮಮತೆಯನ್ನು ತೋರುವ "ತಾಯಿ" ಆದರು. ಉದಾಹರೆಣೆಗೆ: ಒಮ್ಮೆ ಶ್ರೀಮದ್ ಭಗವದ್ಗೀತೆಯ ಸತ್ಸಂಘದಲ್ಲಿ ನಾನು ಚಳಿಯಾಗುತ್ತಿತ್ತು ಅಂತ ಒಂದು ಶಾಲನ್ನು ಹೊದ್ದುಕೊಂಡೆ. ಅದನ್ನು ಗಮನಿಸಿ ಅವರು ತಾಪಮಾನ ಜಾಸ್ತಿ ಮಾಡಬೇಕೆ ಅಂತ ಕೇಳಿದರು. ಇನ್ನೊಮ್ಮೆ ನಾನು ಬೆಳಿಗ್ಗೆಯ ನಾಷ್ಟ ಮಾಡದೆ ಸತ್ಸಂಗಕ್ಕೆ ಬಂದಿದ್ದೇನೆ ಅಂತ ತಿಳಿದು ತಾಯಿಯ ಹಾಗೆ ಗದರಿದರು.

ನವೆಂಬರ್ ೨೫ರಂದು ಅವರನ್ನು ಕಳೆದುಕೊಂಡಾಗ ನನ್ನ ಮನಸ್ಸಿನಲ್ಲಿ ಮೂಡಿದ ಪ್ರಶ್ನೆಗಳು, "ಈಗ ನನಗೆ ಸಮಾಧಾನ ಮಾಡುವವರು ಯಾರು? ಈ ಕಷ್ಟವನ್ನು ಸಹಿಸುವ ಶಕ್ತಿ ಕೊಡುವವರು ಯಾರು? ಯಾರ ಬಳಿ ಈ ಪ್ರಶ್ನೆಗಳಿಗೆ ಉತ್ತರಗಳಿವೆ?". ಆಗ ನನಗೆ ಹೊಳೆಯಿತು... ನನ್ನ ಅರ್ಜುನ ನಂತಹ ಪ್ರಶ್ನೆಗಳಿಗೆ ಅವರು ಈ ಮೊದಲೇ ಶ್ರೀ ಕೃಷ್ಣನಂತೆ ಉತ್ತರಗಳನ್ನು ನಮಗೆ ನೀಡಿದ್ದಾರೆಂದು.

ಮಾತೃ ದೇವೋ ಭವ ಪಿತೃ ದೇವೋ ಭವ
ಆಚಾರ್ಯ ದೇವೋ ಭವ ಅತಿಥಿ ದೇವೋ ಭವ

ಹೇಗೆ ಅವರು ನನ್ನ ಜೀವನದಲ್ಲಿ ಅತಿಥಿಯಿಂದ ಆಚಾರ್ಯರಾಗಿ, ಪಿತೃವಾಗಿ, ಮಾತೃವಾಗಿ ಕೊನೆಗೆ ಶ್ರೀಕೃಷ್ಣನ ಉಚ್ಚ ಪಟ್ಟಕ್ಕೆ ಏರಿದರೋ ಗೊತ್ತಾಗಲೇ ಇಲ್ಲ. ಈಗ ನಿಮ್ಮೆಲ್ಲರಿಗು ನನ್ನ ಕಷ್ಟ ಅರ್ಥವಾಗಿರಬೇಕಲ್ಲವೇ? ಇಂತಹ ಮಹಾನುಭಾವರನ್ನು ಏನೆಂದು ಸಂಭೋದಿಸಲಿ?

ಇನ್ನು ಶ್ರದ್ಧಾಂಜಲಿ ಬರೆಯಲು ನನ್ನ ಹತ್ತಿರ ಶಬ್ದಗಳೇ ಇಲ್ಲ. ಅವರು ಶಬ್ದಗಳಿಗೆ ಮೀರಿದವರು. ಹಾಗೆಯೇ ನನ್ನಭಾವನೆಗಳನ್ನು ವ್ಯಕ್ತ ಪಡಿಸಲು ಶಬ್ದಗಳಿಲ್ಲ. ನನ್ನ ಕಣ್ಣೀರೇ ನನ್ನ ಶ್ರದ್ಧಾಂಜಲಿ.

ಕೊನೆಯದಾಗಿ... ಎಲ್ಲರ ಮನಸ್ಸಿನಲ್ಲಿರುವ ಒಂದು ದೊಡ್ಡಪ್ರಶ್ನೆ.. ಇಂತಹ ಸುಪುರುಷರನ್ನು ದೇವರು ಇಷ್ಟು ಬೇಗ ಯಾಕೆ ಕರೆದುಕೊಂಡರು? ಅದಕ್ಕೂ ಅವರೇ ಉತ್ತರಕೊಟ್ಟಿದ್ದಾರೆ. ಭೂಮಿ ಮೇಲೆ ಎಲ್ಲರು ಪುಣ್ಯ ಗಳಿಸಿ, ಬರುವ ಮುಂದಿನ ಜನ್ಮಗಳಲ್ಲಿ ದೇವರ ಸಾಕ್ಷಾತ್ಕಾರದ ಸಮೀಪ ಹೋಗಲಿ ಅಂತ ಭಗವಂತ ನಮಗೆ ಮಾನವ ಜನ್ಮನೀಡಿದ್ದಾನೆ. ಪ್ರಸಾದರವರ ೬೯ ವರ್ಷಗಳಲ್ಲೇ ಅವರು ಹತ್ತಾರು ಜನ್ಮಗಳ ಪುಣ್ಯವನ್ನು ಗಳಿಸಿ ಸಾಕ್ಷಾತ್ಕಾರವನ್ನುಪಡೆದಿದ್ದಾರೆ. ಇದರಲ್ಲಿ ನನಗೆ ಸಂಶಯವೇ ಇಲ್ಲ. ಏಕೆಂದರೆ ಅವರು ಯಾವಾಗಲೂ ಹೇಳುತ್ತಿದ್ದರು... ಪುರುಷಾರ್ಥಎಂದರೆ ಧರ್ಮ ಅರ್ಥ ಕಾಮ ಮೋಕ್ಷ ... ಅರ್ಥ ಮತ್ತು ಕಾಮ ಧರ್ಮದ ಮಾರ್ಗದಲ್ಲಿ ಇದ್ದರೆ ಮೋಕ್ಷ (ಪರಮಾನಂದ/ಸಾಕ್ಷಾತ್ಕಾರ) ದೊರೆಯುತ್ತದೆ. ಅವರು ನುಡಿದಂತೆ ನಡೆಯುತ್ತಿದ್ದರು. ಹಾಗಾಗಿ ಅವರು ಪರಬ್ರಹ್ಮನ ಪಾದವನ್ನೇ ಸೇರಿದ್ದಾರೆ.

# ಪ್ರಸಾದ್ ಅವರೇ.. ಹೋಗಿಬನ್ನಿ ಧನ್ಯವಾದಗಳು

*ಶ್ರೀಕಾಂತ ಬಾಬು*

ಪ್ರಿಯ ಪ್ರಸಾದ್,

ಅದೇಕೋ ಗೊತ್ತಿಲ್ಲ. ನಾವು ದಿನವೆಲ್ಲಾ ಜೀವನದ ಕ್ಷಣಿಕತೆ ಮತ್ತು ನಶ್ವರತೆಯ ಬಗ್ಗೆ ಮಾತನಾಡಿದರೂ, ಕೆಲವು ವಿಷಯಗಳನ್ನು ಉದಾಸೀನಮಾಡುತ್ತಾ ಮುಂದೆ ಹಾಕುತ್ತಾ ಹೋಗುತ್ತೇವೆ. ನಿಮ್ಮೊಡನೆ ನಿಮ್ಮನ್ನು ಕುರಿತು ಅಭಿಮಾನದಿಂದ ಕೆಲವು ಮಾತುಗಳನ್ನು ಹೇಳಬೇಕೆಂದು ಹಲವಾರು ಬಾರಿ ಅನ್ನಿಸಿದರೂ ಮುಂದೆ ಹೇಳಿದರಾಯಿತು ಎಂದು ಮುಂದೂಡುತ್ತಾ ಹೇಳಲಾರದೆ ಹೋದೆ. ಈಗ ನೋಡಿ, ನಾಳೆ ಎನ್ನುವುದು ನಿಶ್ಚಿತವಲ್ಲವೆನ್ನುವುದು ಮತ್ತೊಮ್ಮೆ ಸಾಬೀತಾಯಿತು ಅಲ್ಲವೆ?.

ನಾನು ಈ ದಿನ ನಿಮ್ಮ ಅಂತಿಮ ದರ್ಶನ ಮಾಡಿಕೊಂಡು ಮನೆಗೆ ಮರಳುವಾಗ ನನ್ನಲ್ಲಿ ನಿಮ್ಮನ್ನು ಕುರಿತಾಗಿ ಹಲವಾರು ಭಾವನೆಗಳು ಉಕ್ಕಿಬಂದವು. ಬಹುಶಃ ಅವು ನಿಮಗೆ ತಲುಪುವುದೆಂದು ಅವುಗಳನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ನನಗೆ ನಿಮ್ಮ ಪರಿಚಯವಾಗಿ ಸುಮಾರು ಎರಡು ದಶಕಗಳ ಮೇಲಾದರೂ, ಆರಂಭದಲ್ಲಿ ನಮ್ಮ ವಿಚಾರ ವಿನಿಮಯ ಪರಸ್ಪರ ಕುಶಲೋಪರಿಯಲ್ಲಿ ಮಾತ್ರ ಇರುತ್ತಿತ್ತು. ಆದರೆ ನಂತರದ ಇತ್ತೀಚಿನ ವರ್ಷಗಳಲ್ಲಿ ಪ್ರಸ್ತಾಪ ಮತ್ತು ಕನ್ನಡ ಸಾಹಿತ್ಯ ರಂಗದ ಮೂಲಕ ನಿಮ್ಮೊಡನೆ ಹಲವಾರು ಸಂದರ್ಭಗಳಲ್ಲಿ ಸಂಪರ್ಕಿಸುವ ಆನೇಕ ಅವಕಾಶಗಳು ಒದಗಿಬಂದವು.

ಭೌತಿಕವಾಗಿ ಹೇಳಬೇಕೆಂದರೆ, ನನ್ನ ಮನಸ್ಸಿನಲ್ಲಿ ನಿಮ್ಮ ಬಗ್ಗೆ ಎರಡೇ ಚಿತ್ರಗಳು ಅಚ್ಚೊತ್ತಿವೆ! ಒಂದು ನಸುನಗುವಿನ ಮುಖ ಮತ್ತು ಇನ್ನೊಂದು ದೊಡ್ಡ ಅಥವಾ ವಿಶಾಲ ನಗುವಿನ ಮುಖ! ಬೇರೇ ಭಾವನೆಗಳನ್ನು ನಿಮ್ಮ ಮುಖದಲ್ಲಿ ಎಂದೂ ನೋಡಿದ ನೆನಪಿಲ್ಲ. ಸದಾ ನಗುಮುಖವೇ ಆ ನಿಮ್ಮ ಹೆಗ್ಗುರುತು!

ಇನ್ನು ಮಾನಸಿಕವಾಗಿ ಹೇಳಬೇಕೆಂದರೆ, ಸಾದಾರಣವಾಗಿ ಬೇರೇ ಯಾರಲ್ಲೂ ಕಾಣದ ನಿಮ್ಮ ಒಂದು ಗುಣ ನನ್ನನ್ನು ಅತೀವವಾಗಿ ಆಕರ್ಷಿಸಿದ್ದು - 'ನಿಷ್ಠೆ'.

ನಿಮ್ಮನ್ನು ನಾನು ಒಬ್ಬಂಟಿಯಾಗಿ ನೋಡಿದ್ದು ಬಹಳ ಕಡಿಮೆ. ಯಾವುದೇ ಸಮ್ಮೇಳನ ಅಥವಾ ಕೂಟಗಳಲ್ಲಿ ನೀವು ಯಾವಾಗಲೂ ನಿಮ್ಮ ಕುಟುಂಬದ ಅಂದರೆ ಗೀತಾ, ವೀಣಾ, ಮೋಹನ್, ನಂದ ಮತ್ತು ಮಕ್ಕಳಿಂದ ಸುತ್ತುವರಿಯಲ್ಪಟ್ಟು ನಗುತ್ತಾ ಆನಂದ ವಾಗಿರುವ ದೃಶ್ಯವೇ ನನ್ನ ಕಣ್ಣಲ್ಲಿದೆ. ಕುಟುಂಬ ವ್ಯವಸ್ಥೆಯಲ್ಲಿದ್ದ ನಿಮ್ಮ ನಿಷ್ಠೆ ನಮ್ಮ ಇಲ್ಲಿನ ಸಮುದಾಯಕ್ಕೆ ಅನುಕರಣೀಯ!

ನಿಮ್ಮ ವೃತ್ತಿಯ ಬಗ್ಗೆ ನಿಮ್ಮ ನಿಷ್ಠೆಯನ್ನು ಹೇಳುವುದು ಅನಗತ್ಯ. ೩೭ ವರ್ಷಗಳು ಒಂದೇ ಕಾಲೇಜಿನಲ್ಲಿ ಅಧ್ಯಾಪನ ವೃತ್ತಿಮಾಡಿ ನಿಮ್ಮ ನಿಷ್ಠೆಯನ್ನು ಸಾಬೀತುಮಾಡಿದಿರಿ. ನೀವೊಮ್ಮೆ ಹೇಳಿದ ಸಂಗತಿ, ಸ್ಟೀವನ್ ಕಾಲೇಜಿನಲ್ಲಿ ಒಂದುಕಾಲದಲ್ಲಿ ನಿಮ್ಮ ವಿದ್ಯಾರ್ಥಿಯಾಗಿದ್ದವನ ಮಗನೂ ಸಹ ಮುಂದೆ ನಿಮ್ಮ ವಿದ್ಯಾರ್ಥಿಯಾಗಿದ್ದುದನ್ನು ಕೇಳಿ ನನಗೆ ಆಶ್ಚರ್ಯವನ್ನುಂಟುಮಾಡಿತ್ತು! ನಾನು ಇದನ್ನು ನಮ್ಮೂರಿನ ಪ್ರೈಮರಿ ಸ್ಕೂಲ್ ಮೇಷ್ಟ್ರುಗಳಿಂದ ಮಾತ್ರ ಈ ಮೊದಲು ಕೇಳಿದ್ದೆ! ಆದರೆ ಅಮೆರಿಕದಲ್ಲೂ ಇದು ಸಾಧ್ಯವೇ?

ಇನ್ನು ನಿಮ್ಮ ವೃತ್ತಿಯ ವಿಷಯ - ಶಬ್ದ ವಿಜ್ಞಾನವನ್ನು ಕುರಿತು ನಿಮ್ಮ ಜೀವನದುದ್ದಕ್ಕೂ ಸಂಶೋಧನೆಯನ್ನು ಮಾಡುತ್ತಲೇ ಹೋದಿರಿ. ನಿಮ್ಮ ವಿಷಯ ನಿಷ್ಠೆ ಅನನ್ಯವೇ ಸರಿ!

ನಿಮ್ಮ ಗುರುಗಳಾದ ವರದ ದೇಶಿಕಾಚಾರ್ಯರ (ಮುಂದೆ ಶ್ರಿರಂಗಪ್ರಿಯ ಸ್ವಾಮಿಗಳು) ಮತ್ತು ಅವರ ಗುರುಗಳಾದ ಶ್ರೀರಂಗ ಸದ್ಗುರುಗಳಿಂದ ಸನಾತನ ಧರ್ಮ ಯೋಗದ ಮಾರ್ಗದರ್ಶನದಿಂದ ನಿಮ್ಮ ನಿಷ್ಠೆ ಸನಾತನ ಧರ್ಮಕ್ಕೆ ತಿರುಗಿದ್ದು ಮತ್ತೆಂದೂ ಬೇರೆ ಕಡೆ ವಾಲಲಿಲ್ಲ.

ಸನಾತನ ಧರ್ಮದಲ್ಲಿರುವ ನಿಮ್ಮ ನಂಬಿಕೆ, ನಿಷ್ಠೆಗಳ ಮೂಲಕ ಅನೇಕ ಇತರ ಧರ್ಮಗಳನ್ನು ಸಮಾನವಾಗಿ ಗೌರವಿಸುವುದರ ಜೊತೆಗೆ ಅವುಗಳಲ್ಲಿ ಸಮಾನತೆಯನ್ನೂ ಕಂಡಿರಿ.

ನೀವು ಶ್ರೀ ವಿಶಿಷ್ಟಾದ್ವೈತದ ಪಂಥದವರಾದರೂ ನಿಮ್ಮ ಆಸಕ್ತಿಗಳು ಶ್ರೀ ಶಂಕರರ ಲಲಿತಾ ಸಹಸ್ರನಾಮದಲ್ಲಾಗಲೀ, ಭಜಗೋವಿಂದಂ ನಲ್ಲಾಗಲೀ, ವಚನ ಸಾಹಿತ್ಯದಲ್ಲಾಗಲೀ ಸಮಾನವಾಗಿದ್ದವು. ಕಳೆದ ಕೆಲ ವರ್ಷಗಳಲ್ಲಿ ನೀವು ವಚನ ಸಾಹಿತ್ಯದ ಅಭ್ಯಾಸ ಮಾಡಿ ವಚನರಶ್ಮಿಯ ಮೂಲಕ ವಚನಗಳ ಸುಧೆಯನ್ನು ನಮಗೆಲ್ಲಾಉಣಬಡಿಸಿದಿರಿ.

ಶಂಖವಾದನದಿಂದ ಆರಂಭವಾಗುವ ನಿಮ್ಮ ಉಪನ್ಯಾಸಗಳು ಸದಾ ಕರ್ಣಾಮೃತ ವಾಗಿರುತ್ತಿದ್ದವು.

ನೀವು ನಿಮ್ಮ ವಿಶ್ವ ಸಂದರ್ಶನಗಳ ಮೂಲಕ ನಮಗೂ ಅದನ್ನು ತೋರಿಸುತ್ತಿದ್ದಿರಿ - ಬಾಲಿ, ಕಾಂಬೋಡಿಯ , ಮಾಚು-ಪೀಚು, ಇತ್ಯಾದಿ. ಮತ್ತು ನೀವು ವಿಶ್ವದಲ್ಲೆಲ್ಲೇ ಇರಲಿ ನಿಮಗೆ ನಿಮ್ಮ ವಿಷ್ಣುವೇ ಗೋಚರಿಸಿತ್ತಿದ್ದ ಅಲ್ಲವೆ?

ಇನ್ನು ನಿಮಗೆ ಇಲ್ಲಿನ ಮಕ್ಕಳೆಂದರೆ ಅದೆಷ್ಟು ಕಳಕಳಿ? ಗಣಪತಿ ಪೂಜೆ, ಪಂಚಾಂಗ ಶ್ರವಣ, ನಾಟಕ, ಹಾಡು-ಡ್ಯಾನ್ಸ್ ಇತ್ಯಾದಿ ಕಾರ್ಯಕ್ರಮಗಳಲ್ಲಿ ಸದಾ ನಿರತರಾಗಿರುತ್ತಿದ್ದಿರಿ.

ಕನ್ನಡ ಸಾಹಿತ್ಯ ರಂಗದ ಪುಸ್ತಕಗಳಿಗೆ ನಿಮ್ಮ ಲೇಖನಗಳನ್ನು ತಪ್ಪದೇ ಕಳುಹಿಸುತ್ತಿದ್ದಿರಿ. ಕಳೆದ ಎರಡು ಸಮ್ಮೇಳನಗಳಿಗೆ ಬಂದು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತುಂಬಾ ಸಂತೋಷಪಟ್ಟಿದ್ದಿರಿ. ಹಾಗೆಯೇ ಅನೇಕ ಪ್ರಸ್ತಾಪ ಕಾರ್ಯಕ್ರಮಗಳಿಗೂ ಬಂದು ಮೆಚ್ಚುಗೆಯ ಮಾತುಗಳನ್ನಾಡಿದ್ದೀರಿ.

ನಿಮಗೆ ನೆನಪಿರಬಹುದು, ಕಳೆದ ವರ್ಷ ನಾನು ಮತ್ತು ನೀವು ಇಬ್ಬರೂ ಡಲ್ಲಾಸ್ ಕನ್ನಡ ಸಾಹಿತ್ಯ ಗೋಷ್ಠಿಗೆ ಅತಿಥಿಗಳಾಗಿ ಹೋಗುವ ಏರ್ಪಾಡಾಗಿತ್ತು.

ನಾನು ಮೊದಲೇ ಹೋಗಿ ತಲುಪಿದೆ ಆದರೆ ನಿಮ್ಮ ಫ್ಲೈಟ್ ರದ್ದಾಗಿ ನಿಮಗೆ ಬರಲಾಗಲಿಲ್ಲ. ನಾನು ಕನ್ನಡ ಲಿಪಿಯನ್ನು ಕುರಿತು ಮಾತನಾಡಿದೆ, ನೀವು ಸ್ಕೈಪ್ ಮುಖಾಂತರ ಜಾನಪದ ಸಾಹಿತ್ಯವನ್ನು ಕುರಿತು ಮಾತನಾಡಿದ್ದಿರಿ. ಆ ಬಾರಿ ನಿಮ್ಮೊಡನೆ ಇನ್ನೂ ಹೆಚ್ಚಿನ ಕಾಲವನ್ನು ಕಳೆಯುವ ಅವಕಾಶ ನನಗೆ ತಪ್ಪಿತು.

ನನಗೆ ವೈಯಕ್ತಿಕವಾಗಿ ಕಾಡುವ ವ್ಯಥೆಯಂದರೆ ನಾನು ಮತ್ತು ನೀವು ಹಲವಾರು ಬಾರಿ ನಿಮ್ಮದೊಂದು ಪ್ರಸ್ತಾಪ ಕಾರ್ಯಕ್ರಮ ಮಾಡುವ ಬಗ್ಗೆ ಮಾತನಾಡಿಕೊಂಡಿದ್ದರೂ ಕೂಡ ಅದನ್ನು ಮಾಡಲಾಗಲಿಲ್ಲವೆಂದು.

ನನ್ನ ಬಗ್ಗೆ ಕೂಡ ನಿಮಗೆ ಬಹಳ ವಿಶ್ವಾಸವಿತ್ತು. ಬದುಕು ಜಟಕಾ ಬಂಡಿ ಪುಸ್ತಕದಲ್ಲಿದ್ದ ನನ್ನ ಲೇಖನವನ್ನು ಓದಿ ನೀವು ತಕ್ಷಣ ನನಗೆ ಫೋನ್ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಿರಿ. ಪ್ರಸ್ತಾಪ ಕಾರ್ಯಕ್ರಮಗಳಲ್ಲೂ ನನ್ನನ್ನು ಪ್ರೋತ್ಸಾಹಿಸುತ್ತಿದ್ದಿರಿ. ನಾನು ಶ್ರೀ ಲಕ್ಷ್ಮೀಶ ತೋಳ್ಪಾಡಿಯವರನ್ನು ನಿಮ್ಮಮನೆಗೆ ಉಪನ್ಯಾಸಕ್ಕೆ ಒಮ್ಮೆ ಕರೆತಂದಾಗ ನೀವು ಮತ್ತು ಗೀತಾ ಅವರು ತೋರಿಸಿದ ಪ್ರೀತಿ, ವಾತ್ಸಲ್ಯಗಳನ್ನು ಮರೆಯಲಾರೆ. ಆ ದಿನ ನಿಮ್ಮ ಮನೆಯಲ್ಲಿದ್ದ ಶಂಖ ಮತ್ತು ಜಾಗಟೆಗಳ ಸಂಗ್ರಹ ನೋಡಿ ಬೆರಗಾಗಿದ್ದೆ. ನಾವು ಪರಸ್ಪರ ವಿನಿಮಯ ಮಾಡಿಕೊಂಡ ಮಿಂಚಿನೋಲೆ ಮತ್ತು ವಾಟ್ಸಾಪ್ ಮೆಸೇಜ್ ಗಳು ಇನ್ನು ಕೇವಲ ನೆನಪಿಗೆ ಮಾತ್ರ.

ನಿಮ್ಮ ಜೀವನ ತೆರೆದ ಕನ್ನಡಿಯಂತೆ ಅತ್ಯಂತ ನಿಷ್ಕಲ್ಮಷವಾಗಿತ್ತು. ಜೀವನದ ಪ್ರತಿನಿಮಿಷವನ್ನು ನಿಮಗೆ ಸಂತೋಷಕೊಡುವ ಮತ್ತು ಬೇರೆಯವರಿಗೂ ಉಪಯೋಗವಾಗುವಂತೆ ಕಳೆದಿರಿ. ನೀವು ನಮ್ಮೆಲ್ಲರ ನಡುವೆ ನಡೆದಾಡಿದ ಒಬ್ಬ ಧೀಮಂತ ವ್ಯಕ್ತಿ. ಬಹಳ ಸುಂದರವಾದ ಮತ್ತು ಉನ್ನತವಾದ ಆದರ್ಶಮಯವಾದ ಜೀವನ ನಿಮ್ಮದು. ನಿಮ್ಮ ಬಗ್ಗೆ ನಮಗೆಲ್ಲ ಬಹಳ ಹೆಮ್ಮೆ ಇದೆ. ನಿಮ್ಮ ನಿಷ್ಠಾವಂತ ಬದುಕು ನಿಮಗೆ ಮೋಕ್ಷದೊರಕಿಸುವಲ್ಲಿ ನನಗಂತೂ ಸಂದೇಹವಿಲ್ಲ.

ಈ ದಿನ ನಿಮ್ಮ ಸಂಸ್ಕಾರಕ್ಕೆ ನಿಮ್ಮ ಅಭಿಮಾನಿಗಳು ನೂರಾರು ಸಂಖ್ಯೆಯಲ್ಲಿ ಆಗಮಿಸಿ ನಿಮಗೆ ಗೌರವ ಸಲ್ಲಿಸಿದ್ದಾರೆ. ಎಲ್ಲರ ಮುಖದಲ್ಲೂ ಪ್ರಿಯರೊಬ್ಬರನ್ನು ಕಳೆದುಕೊಂಡ ನೋವಿತ್ತು! ಆದರೆ ನಿಮ್ಮ ಮೊಗದಲ್ಲಿ ಮಾತ್ರ ಸಂತೃಪ್ತಿಯ ಕಿರುನಗೆ ಕಾಣಿಸಿತು.

ಪ್ರಸಾದ್ ಅವರೇ ಹೋಗಿಬನ್ನಿ...ಧನ್ಯವಾದಗಳು.

ನಮಸ್ಕಾರ,
ಶ್ರೀಕಾಂತಬಾಬು
ನವೆಂಬರ್ ೨೭, ೨೦೧೯

## *ನೆಚ್ಚಿನ ಡಾ// ಎಂ ಜಿ ಪ್ರಸಾದರ ನೆನೆಯುತ್ತಾ*

*ಡಾ/ ಅಶೋಕ್ ಕಟ್ಟೆಮನಿ*

*ಕನ್ನಡ ಸಾಹಿತ್ಯ ಸಾರ ತಿಳಿದವರು*
*ವಚನಗಳ ಅರೆದು ಕುಡಿದವರು*
*ಜ್ಞಾನ ಭಂಡಾರದ ಕೀಲಿ ಕಂಡವರು*
*ನಮಗಾಗಿ ಬಿಡದಲೆ ಬರೆದವರು*

*ವೇದ, ವೇದಾಂತ, ಗೀತೆಗಳ ಜ್ಞಾನಿ*
*ಸಂಸ್ಕೃತ, ಇತಿಹಾಸ, ಪುರಾಣ, ಮಹಾಕಾವ್ಯ*
*ಪ್ರಾಚೀನ ಭಾರತ, ಶಬ್ದ ವಿಜ್ಞಾನ*
*ನಿಮ್ಮಯ ಶಂಖ, ಗೀತಾಚಾರ್ಯನ ಪಾಂಚಜನ್ಯ*

*ವಿನಯವಿರೆ ಜ್ಞಾನದಂಗಳದಿ*
*ಬಾಗಿ ನಡೆಯುವ ಪರಿಯ ತೋರಿದಿರಿ*
*ಹಿರಿಕಿರಿಯರೇನು, ಪುರುಷಮಹಿಳೆಯರೇನು*
*ಎಲ್ಲರಲಿ ಹರಿಸಿದಿರಿ ಪ್ರೀತಿಯ ನದಿ*

*ಪ್ರಾಚೀನ ಭಾರತದ ಹಿರಿಮೆಯ ಸಾರುತ*
*ಭಾರತೀಯರೆಲ್ಲರ ಒಂದುಗೂಡಿಸುತ*
*ಕನ್ನಡದ ಕೊಡುಗೆ ಪಸರಿಸುತ್ತ*
*ನಡೆದಿರಿ ಎಲ್ಲರಿಗೂ ಜ್ಞಾನ ಹಂಚುತ್ತಾ*

*ಇತ್ತ ಪ್ರಸಾದವ ನೀ ಹಿಂಪಡದರೇನಂತೆ*
*ತೊಟ್ಟುವೆವು ಪಣವ, ನಡೆಯಲು ಮುಂದೆ*
*ಅಂತರಾಳದ ಶಕ್ತಿ ತುಂಬುತಿರೆ ಪ್ರಸಾದ*
*ಶ್ರಮಿಸುವೆವು ನಿಮ್ಮಯ ಕನಸು ನನಸಾಗಿಸಲು*

*ಓಂ ಶಾಂತಿ, ಶಾಂತಿ....*



# ಮಕ್ಕಳೋತ್ಸವ–ವಾರ್ಷಿಕೋತ್ಸವ ಕಾರ್ಯಕ್ರಮ

*ಮಮತಾ ನಾಗೇಂದ್ರ*

ಪ್ರತಿ ವರ್ಷದ ಕೊನೆಯಲ್ಲಿ ನ್ಯೂಜೆರ್ಸಿಯ ಬೃಂದಾವನ ಬಳಗದಲ್ಲಿ ಏನೋ ಒಂದು ಸಡಗರ ಸಂಭ್ರಮ. ವರ್ಷದ ಕೊನೆಯ ಘಟ್ಟದಲ್ಲಿದ್ದರೂ, ಬೆಚ್ಚಗೆ ಹೊದ್ದು ಕೂರಬೇಕೆನಿಸುವ ಕೊರೆಯುವ ಚಳಿಯಿದ್ದರೂ
ನಮ್ಮ ಬಳಗದಲ್ಲಿ ಸದಾ
ಪುಟಿಯುವ ಉತ್ಸಾಹ. ಇದಕ್ಕೆಲ್ಲ ಒಂದೇ ಕಾರಣ -
ಅದುವೇ ಮಕ್ಕಳೊಂದಿಗೆ ಮಕ್ಕಳಾಗಿ ನಲಿವ ಮಕ್ಕಳೋತ್ಸವ.

"ಈ ವರ್ಷ ಸೌರಭ ತಂಡದ ಸಾರಥ್ಯದಲ್ಲಿ ಬಹಳ ಅದ್ದೂರಿಯಾಗಿ ಡಿಸೆಂಬರ್ ೭,೨೦೧೯ ರಂದು ಮಕ್ಕಳೋತ್ಸವ ಜರುಗಿತು.ಬೆಳಿಗ್ಗೆಯಿಂದ ರಾತ್ರಿಯವರೆಗೆ ಎಡಬಿಡದೆ ನಡೆದ ಎಲ್ಲಾ ಕಾರ್ಯಕ್ರಮಗಳೂ
ಎಲ್ಲರ ಸಹಕಾರದೊಂದಿಗೆ
ಅದ್ಭುತವಾಗಿ ಮೂಡಿಬಂದವು.

ಬೆಳಿಗ್ಗೆ ೧೦;೩೦ ಗಂಟೆಗೆ ವಾರ್ಷಿಕ ಸರ್ವ ಸದಸ್ಯರ ಸಭೆಯು ಪ್ರಾರಂಭವಾಯಿತು. ಇತ್ತೀಚೆಗೆ ನಮ್ಮನ್ನೆಲ್ಲಾ ಅಗಲಿದ ಹಿರಿಯ ಚೇತನ ಡಾ. ಎಂ. ಜಿ. ಪ್ರಸಾದ ಅವರನ್ನು ನೆನೆದು ಮೌನಾಚರಣೆಯನ್ನು ಸಲ್ಲಿಸಿ
ಸಂತಾಪ ಸೂಚಿಸಿದೆವು.
ಮಕ್ಕಳಿಗೆ 'ಬೃಂದಾವನ ಕೋಗಿಲೆ' ಹಾಗು 'ಕನ್ನಡ ಕಸರತ್ತು' ಸ್ಪರ್ಧೆಗಳು, ಯುವ ತಂಡದಿಂದ CPR ತರಬೇತಿ ಸಹ ಶುರುವಾದವು. ವಿವಿಧ ಕನ್ನಡ ಶಾಲೆಯ ಎಲ್ಲಾ ಮಕ್ಕಳು ಬಹಳ ಹುಮ್ಮಸ್ಸಿನಿಂದ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಹೀಗೆ ಒಂದಾದ ಮೇಲೆಒಂದರಂತೆ ಎಲ್ಲಾ ಚಟುವಟಿಕೆಗಳು ನಿಗದಿತ ಸಮಯದಲ್ಲಿ ನಡೆದು
ಮುಗಿಯುವ ಹೊತ್ತಿಗೆ ಸವಿಯಾದ ಮತ್ತು ರುಚಿಯಾದ ಔತಣವು
ಎಲ್ಲರಿಗಾಗಿ ಕಾಯುತಿತ್ತು.

ಮಧ್ಯಾಹ್ನದ ಸಾಂಸ್ಕೃತಿಕ ಕಾರ್ಯಕ್ರಮವ
ಅಧ್ಯಕ್ಷರಾದ ಸತೀಶ್ ಹೊಸನಗರ
ಅವರ ಸ್ವಾಗತ ಭಾಷಣ, ಸಂಕೇತ ಗೀತೆ ಮತ್ತು ರಾಷ್ಟ್ರಗೀತೆಯೊಂದಿಗೆ ಪ್ರಾರಂಭವಾಯಿತು. ಶ್ರೀಮತಿ ಸುಷ್ಮಾ ಹಾಗು ಶ್ರೀಮತಿ ವನಿತಾರವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ನಂತರ ವಿವಿಧ ಬೃಂದಾವನ ಕನ್ನಡ ಶಾಲೆಯ ಮಕ್ಕಳು ನಡೆಸಿಕೊಟ್ಟ ಮನೋರಂಜನಾ ಕಾರ್ಯಕ್ರಮಗಳು ಅಲ್ಲಿ ನೆರೆದವರ ಮನಸೂರೆಗೊಂಡವು. ಹಿಲ್ಸ್ಬರೋ ಕನ್ನಡ ಶಾಲೆಯ
ಮಕ್ಕಳು 'ಕೋಲಾಟ ಹಾಗು ನೃತ್ಯ' ಪ್ರದರ್ಶಿಸಿದರೆ, ಈಸ್ಟ್ ವಿಂಡ್ಸರ್ ಶಾಲೆಯು ಕಿರು ನಗೆನಾಟಕ 'ನೊಣ' ಹಾಗೂ ಗಿರೀಶ್ ಕಾರ್ನಾಡರಿಗೆ ಶ್ರದ್ಧಾಂಜಲಿಯಾಗಿ 'ಕುಸುಮಾಂಜಲಿ' ತಂದಿತ್ತರು.ಸೌತ್ ಬ್ರುನ್ಸ್ವಿಕ್ ಶಾಲೆಯ ಮಕ್ಕಳು 'ಗೊಂಬೆ ನಗರ' ಎಂಬ ಅತ್ಯುನ್ನತ ನಾಟಕವ ಪ್ರದರ್ಶಿಸಿದರೆ ಎಡಿಸನ್ ಶಾಲೆಯ ಮಕ್ಕಳು 'ವಿಕಟ ಕವಿ ತೆನಾಲಿ ರಾಮ' ಎಂಬ ನಾಟಕವನ್ನು ಪ್ರದರ್ಶಿಸಿದರು.

ಬಹಳ ಸುಂದರವಾಗಿ ಹಾಗು ಅಚ್ಚುಕಟ್ಟಾಗಿ ವೃತ್ತಿನಿರತ ಕಲಾವಿದರೇ ನಾಚುವಂತೆ ಪ್ರದರ್ಶನ ನೀಡಿದ ಮಕ್ಕಳು ಬಂದ ಸಭಿಕರನ್ನು ಆಶ್ಚರ್ಯಗೊಳಿಸಿದರು.

ಈ ನಮ್ಮ ಬೃಂದಾವನ ಕನ್ನಡ ಶಾಲೆಯ ಪ್ರಾರಂಭ ಹಾಗು ಅಭಿವೃದ್ಧಿಗೆ ಕಾರಣ ನಿರಂತರವಾಗಿ ಕಾರ್ಯನಿರ್ವಹಿಸಿದ ಎಲ್ಲಾ ಶಾಲೆಗಳ ಸ್ವಯಂ ಸೇವಕರನ್ನು ಮೋಕ್ಷ ಗುಂಡಂ ಶೇಷಾದ್ರಿಯವರು ಸನ್ಮಾನಿಸಿದರು. ನಂತರ ಸ್ಯಾಕ್ಸೋಫೋನ್ ಮಾಂತ್ರಿಕ ಡಾ.ಕದ್ರಿ ಗೋಪಾಲನಾಥ್ ಅವರಿಗೆ ಶ್ರದ್ಧಾಂಜಲಿ ನೀಡಿದ ಸಂಗೀತಕಾರ್ಯಕ್ರಮವು ಸಂಗೀತ ಪ್ರಿಯರಿಗೆ ರಸದೌತಣ ನೀಡಿತು.
ನಂತರ ಆಟಿಸಂ (ಸ್ವಲೀನತೆ) ಮಕ್ಕಳ ಕುರಿತಾದ ಒಂದು ಕಿರುನಾಟಕ " ನಿಮ್ಮೊಳಗೊಬ್ಬಳು" ನೋಡುಗರ ತುಂಬು ಹೃದಯದ ಭಾವನೆಗಳೊಂದಿಗೆ ಕಣ್ಣಾವಲಿಗಳನ್ನು ಒದ್ದೆ ಮಾಡಿತು. ಆಟಿಸಂ ಮಕ್ಕಳೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದು ಜಾಗೃತಿ ಮೂಡಿಸಿತು.

ಇದು ಮಕ್ಕಳ ಕಾರ್ಯಕ್ರಮಗಳಾದರೆ ನಂತರ ದೊಡ್ಡವರು
ಮಕ್ಕಳಾಗುವ ಸಮಯ. ಬೃಂದಾವನ ಎಲ್ಲಾ ವಯಸ್ಸಿನ ಸದಸ್ಯರಿಂದ 'ಕಿರಿಕ್ ಪಾರ್ಟಿ' ಹಾಗೂ 'ಸ್ನೇಹಲೋಕ' ನೃತ್ಯಗಳು ಭರಪೂರ ಮನೋರಂಜನೆಯನ್ನು ಸಭಿಕರಿಗೆ ನೀಡಿದವು. ನಂತರ ಸುಂದರ ಹೆಂಗಳೆಯರು 'ಫ್ಯಾಷನ್ ಶೋ' ನಲ್ಲಿ ಭಾರತದ ವಿವಿಧ ಸೀರೆಗಳ ಪ್ರದರ್ಶನ ನೀಡಿದರು. ಮಕ್ಕಳೋತ್ಸವದ ಕೊನೆಯಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಹಾಗು ವಂದನಾರ್ಪಣೆಯ ಮೂಲಕ ಉತ್ಸವಕ್ಕೆ ತೆರೆಬಿದ್ದಿತು. ಮತ್ತೊಂದು ಮರೆಯಲಾದ ದಿನಕ್ಕೆ ಸಾಕ್ಷಿಯಾಯಿತು.



# ರಂಗು ತಂದ ಚಿಣ್ಣರ ನಾಟಕ–ಗೊಂಬೆ ನಗರ

*ಶ್ರೀವಿದ್ಯಾ ಪ್ರಶಾಂತ್*

"ಗೊಂಬೆ"  ಎಂದೊಡನೆ ನಮ್ಮ ಕಣ್ಣಮುಂದೆ ಬರುವುದು ಬಾಲ್ಯ, ಆ ಮುಗ್ಧ ಮನಸ್ಸಿನ ಗೆಳೆಯರ ಬಳಗ, ಆಟದ ಸಮಯ...ಇದು ನಮ್ಮ ಮನುಷ್ಯ ಜೀವನದ ಅವಿಭಾಜ್ಯ ಅಂಗ, ಎಂದೂ ಮರೆಯಲಾಗದ-ಮರಳಿ ಬರಲಾರದ ಅವಿಸ್ಮರಣೀಯ ಮಜಲು.

ಈ ಬಾರಿಯ ಬೃಂದಾವನ ಮಕ್ಕಳೋತ್ಸವದ ಕಾರ್ಯಕ್ರಮದಲ್ಲಿ ಸೌತ್ ಬೃನ್ಸ್ವಿಕ್ ಕನ್ನಡ ಶಾಲೆಯ ಮಕ್ಕಳು,ಶ್ರೀಮತಿ ಸರಿತಾ ನವಲಿಯವರ ಸಾಹಿತ್ಯ ಮತ್ತು ವಿದುಷಿ ಶ್ರೀಮತಿ ಸುಪ್ರಿಯಾ ಹರಿಪ್ರಸಾದ್ ರವರ ನೃತ್ಯ ಸಂಯೋಜನೆ ಹಾಗೂ ನಿರ್ದೇಶನದಲ್ಲಿ ಅಪೂರ್ವವಾದ ನೃತ್ಯ-ನಾಟಕವನ್ನು ಪ್ರಸ್ತುತಪಡಿಸಿ ಪ್ರೇಕ್ಷಕ ವರ್ಗದ ಮೆಚ್ಚುಗೆಗೆ ಪಾತ್ರರಾದರು.

ಇಂದಿನ ಯುವಜನಾಂಗವು ಆಧುನಿಕ ಜೀವನ ಶೈಲಿಯನ್ನು ಅಳವಡಿಸಿಕೊಂಡು, ನಮ್ಮ ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರಗಳ ಬಗ್ಗೆ ಅಸಡ್ಡೆ ಹೊಂದಿರುವಂತಹ ವಿಷಮ ಸ್ಥಿತಿಯಲ್ಲಿದೆ. ಇಂತಹ ಸಂಧರ್ಭದಲ್ಲಿ, ಈ ಯುವ ಪೀಳಿಗೆಗೆ ಸರಿಯಾದ ಮಾರ್ಗದರ್ಶನವಿತ್ತು, ಹಿಂದಿನ ಕರ-ಕುಶಲ ಕಲೆ, ಅವುಗಳ ಸೌಂದರ್ಯ ಹಾಗೂ ವೈಭವದ ಬಗೆಗಿನ ಅರಿವು ಮೂಡಿಸುವಂತಹ ಜವಾಬ್ದಾರಿಯು ನಮ್ಮದಾಗಿದೆ. ಈ ನಿಟ್ಟಿನಲ್ಲಿ "ಗೊಂಬೆ-ನಗರ" ವೆಂಬ ನೃತ್ಯ-ನಾಟಕದ ಪರಿಕಲ್ಪನೆ ತುಂಬಾ ಅಪೂರ್ವವಾಗಿಯೂ, ಮನೋರಂಜಕವಾಗಿಯೂ ಹಾಗೂ ಸಲಹಾಪೂರ್ಣವಾಗಿಯೂ ಇತ್ತು.

ಇಂದು ಅಳಿವಿನ ಅಂಚಿನಲ್ಲಿರುವ ನಮ್ಮ ಕರ್ನಾಟಕದ ಚೆನ್ನಪಟ್ಟಣ, ಕಿನ್ನಾಳ, ರಾಜಸ್ಥಾನ ಮತ್ತು ಕೊಂಡಪಲ್ಲಿಯ ಕುಶಲಕರ್ಮಿಗಳ ಕಲಾತ್ಮಕತೆಯಿಂದ ರೂಪುಗೊಳ್ಳುವಂತಹ ಗೊಂಬೆಗಳಿಂದ ಆಗುವ ಪ್ರಯೋಜನ, ಅವುಗಳ ಪುನರುಜ್ಜೀವನ ಹಾಗೂ ಈ ಕಲೆಯನ್ನು ಪೋಷಿಸಿ-ಬೆಳೆಸುವ ಬಗೆಗಿನ ಅರಿವು ಮೂಡಿಸುವಲ್ಲಿ ಈ ನೃತ್ಯ-ನಾಟಕವು ಯಶಸ್ವಿಯಾಯಿತು . ಇಂತಹ, ಇನ್ನಷ್ಟು ಉತ್ತಮ ಸಂದೇಶಗಳೊಂದಿಗೆ ಸುಂದರ ಸಮಾಜವನ್ನು ನಿರ್ಮಿಸಲು ಪೂರಕವಾದಂತಹ ಕಾರ್ಯಕ್ರಮಗಳು ಮುಂದಿನ ದಿನಗಳಲ್ಲಿ ಮೂಡಿಬರಲಿ ಎಂದು ಹಾರೈಸೋಣ.









# ಶ್ರೀ ಗಿರೀಶ ಕಾರ್ನಾಡರಿಗೆ "ಕುಸುಮಾಂಜಲಿ"

*ಈಸ್ಟ್ ವಿಂಡ್ಸರ್ ಕನ್ನಡ ಶಾಲಾ ಶಿಕ್ಷಕ ವೃಂದ*

"ಪ್ರತಿಯೊಂದು ಕಾರ್ಯ ಪ್ರಾರ್ಥನೆಯಾಗಬೇಕು. ಪ್ರತಿಯೊಂದು ಪ್ರಾರ್ಥನೆ ಅರಿವಿನ ಮೆಟ್ಟಿಲಾಗಬೇಕು. ಪ್ರತಿಯೊಂದು ಮೆಟ್ಟಿಲೂ ದೇವರ ಸನಿಹಕ್ಕೆ ಒಯ್ಯಬೇಕು." "ಬೆಳಕಿಲ್ಲದ ಹಾದಿಯಲ್ಲಿ ನಡೆಯಬಹುದು, ಆದರೆ ಕನಸುಗಳಿಲ್ಲದ ಹಾದಿಯಲ್ಲಿ ನಡೆಯಲಿ ಹೇಗೆ?" ಇವು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಗಿರೀಶ್ ಕಾರ್ನಾಡರ ನಾಟಕಗಳಲ್ಲಿನ ಕೆಲವು ಅರ್ಥಗರ್ಭಿತ ಸಾಲುಗಳು. ಕಾರ್ನಾಡರು ಇದೇ ವರ್ಷ ಜೂನ್ ೧೦ ರಂದು ನಮ್ಮನ್ನು ಅಗಲಿದರು. ಅವರು ನಮ್ಮನ್ನಗಲಿದರೂ ಅವರು ಸಾಹಿತ್ಯಲೋಕಕ್ಕೆ ಹಾಗು ಸಿನಿಮಾ ಪ್ರಪಂಚಕ್ಕೆ ಕೊಟ್ಟ ಕೊಡುಗೆಯಿಂದ ಅಮರರಾಗಿರುತ್ತಾರೆ.

ಕಾರ್ನಾಡರು ಹುಟ್ಟಿದ್ದು ಮೇ ೧೯, ೧೯೩೮, ಮಹಾರಾಷ್ಟ್ರದ ಮಾಥೆರಾನ್ ಎಂಬ ಪುಟ್ಟ ಊರಿನಲ್ಲಿ. ಅವರೊಬ್ಬ ಶ್ರೇಷ್ಠ ನಾಟಕಕಾರ, ಖ್ಯಾತ ಚಲನಚಿತ್ರ ನಿರ್ದೇಶಕ, ಮತ್ತು ಸುಪ್ರಸಿದ್ಧ ನಟ. ನಿರ್ದೇಶನ ಮತ್ತು ನಟನೆಯಲ್ಲದೆ, ಕೆಲವು ಚಿತ್ರಗಳಿಗೆ ಚಿತ್ರಕಥೆ ಮತ್ತು ಸಂಭಾಷಣೆಯನ್ನು ಬರೆದಿದ್ದರು. ಅವರ ಸಾಧನೆಗೆ ಜ್ಞಾನಪೀಠ, ಪದ್ಮಭೂಷಣ, ಪದ್ಮಶ್ರೀ, ಕೇಂದ್ರ ಸಾಹಿತ್ಯ ಅಕಾಡೆಮಿ, ಸಂಗೀತ್ ನಾಟಕ್ ಅಕಾಡೆಮಿ, ಕಾಳಿದಾಸ್ ಸಮ್ಮಾನ್ ಹಲವಾರು ಪ್ರಶಸ್ತಿಗಳು ಅವರನ್ನು ಹುಡುಕಿ ಬಂದವು. ಕಾರ್ನಾಡರು ಸುಮಾರು ೧೫ ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು - ಯಯಾತಿ, ತುಘಲಕ್, ಹಯವದನ, ಅಂಜು ಮಲ್ಲಿಗೆ, ನಾಗಮಂಡಲ, ತಲೆದಂಡ, ಅಗ್ನಿ ಮತ್ತು ಮಳೆ. ಅವರ ನಾಟಕಗಳು ಹಲವಾರು ಭಾರತೀಯ ಭಾಷೆಗಳಿಗಲ್ಲದೆ ಜರ್ಮನ್, ಸ್ಪ್ಯಾನಿಷ್, ಪೋಲಿಷ್ ಹಾಗು ಹಂಗೇರಿಯನ್ ಭಾಷೆಗಳಿಗೂ ಅನುವಾದಗೊಂಡಿದೆ.

ಕಾರ್ನಾಡರು , ಸಂಸ್ಕಾರ ಸಿನಿಮಾದಲ್ಲಿ ನಟನೆ ಮತ್ತು ಚಿತ್ರಕಥೆ ಮೂಲಕ ಚಿತ್ರಪ್ರಪಂಚಕ್ಕೆ ಕಾಲಿಟ್ಟರು. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಕಾಡು, ಒಂದಾನೊಂದು ಕಾಲದಲ್ಲಿ, ಕಾನೂರು ಸುಬ್ಬಮ್ಮ ಹೆಗ್ಗಡಿತಿ - ಇವರು ನಿರ್ದೇಶಿಸಿದ ಕೆಲವು ಅತ್ಯುತ್ತಮ ಚಿತ್ರಗಳು. . ನಿರ್ದೇಶನ ಮಾತ್ರವಲ್ಲದೆ ನಟನೆಯಲ್ಲೂ ಇವರು ನಿಪುಣರು. ಸಂಸ್ಕಾರ, ಕಾಡು, ವಂಶ ವೃಕ್ಷ, ಆನಂದ ಭೈರವಿ, ಸಂತ ಶಿಶುನಾಳ ಶರೀಫ, ಇನ್ನು ಹಲವಾರು ಚಿತ್ರಗಳಲ್ಲಿ ತಮ್ಮ ನಟನಾ ಕೌಶಲ್ಯವನ್ನು ಮೆರೆದಿದ್ದಾರೆ.

ಕನ್ನಡ ಭಾಷಾ ಕಲಿಕೆಯಲ್ಲಿ ಭಾರತೀಯ ಸಂಸ್ಕೃತಿ , ಪುರಾಣ ಹಾಗು ಇತಿಹಾಸವನ್ನು ಮೇಳೈಸಿರುವ ಕನ್ನಡ ಸಾಹಿತ್ಯವನ್ನು ಮತ್ತು ಖ್ಯಾತ ಸಾಹಿತಿಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು ಈಸ್ಟ್ ವಿಂಡ್ಸರ್ ಶಾಲೆ ಕೆಲವು ವರ್ಷಗಳಿಂದ ನಿರಂತರವಾಗಿ ಮಾಡುತ್ತಿದೆ. ಇವರ ಕುವೆಂಪುರವರ "ನಮನ ' ಸಾಹಿತ್ಯ ವಸಂತೋಸ್ತ್ಸವದಲ್ಲಿ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಜ್ಞಾನಪೀಠ ವೈಭವದಿಂದ ಪ್ರಾರಂಭವಾದ ಇವರ ಈ ಪಯಣ ಇದುವರೆಗೆ ಚನ್ನವೀರ ಕಣವಿಯವರ 'ವಿಶ್ವ ವಿನೂತನ ' , ಕುವೆಂಪುರವರ ಬೆರಳ್ಗೆ ಕೊರಳ್, ಮಹಾರಾತ್ರಿ, ಜಲಗಾರ ' ಮುಂತಾದ ನಾಟಕಗಳನ್ನು ಬೃಂದಾವನ ವೇದಿಕೆಗೆ ತಂದಿದೆ. ಈ ಬಾರಿಯ ರಾಜ್ಯೋತ್ಸವದಲ್ಲಿ ಈಸ್ಟ್ ವಿಂಡ್ಸರ್ ಕನ್ನಡ ಶಾಲೆ, ಗಿರೀಶ್ ಕಾರ್ನಾಡರು ತಮ್ಮ ೨೩ನೇ ವಯಸ್ಸಿನಲ್ಲಿಯೆ ರಚಿಸಿದ ಮೊದಲ ನಾಟಕ "**ಯಯಾತಿ**" ಹಾಗು ಅವರು ನಟಿಸಿದ್ದ '**ಆನಂದ ಭೈರವಿ**' ಸಿನೆಮಾದ ಕೆಲವು ದೃಶ್ಯಾವಳಿಗಳನ್ನು ' ಕುಸುಮಾಂಜಲಿ' ನಾಟಕದಲ್ಲಿ ಪ್ರದರ್ಶಿಸಿ, ಕಾರ್ನಾಡರಿಗೆ , ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿತು.





# ನೊಣ

*ಈಸ್ಟ್ ವಿಂಡ್ಸರ್ ಕನ್ನಡ ಶಾಲಾ ಶಿಕ್ಷಕ ವೃಂದ*

ಕಥೆ ಹೇಳುವ ಮೌಖಿಕ ಸಂಪ್ರದಾಯಗಳು ಹಲವಾರು ನಾಗರಿಕತೆಗಳಲ್ಲಿ ಕಂಡುಬರುತ್ತವೆ. ಕಥೆಗಳು ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ಅಜ್ಜಿಯಿಂದ ಮೊಮ್ಮಗನಿಗೆ, ಹೀಗೆ ಬಾಯಿಂದ ಬಾಯಿಗೆ ಸಾಗಿದವು. ಅಂತಹ ಒಂದು ಮನರಂಜನೆಯ ಶತಮಾನದ ಹಿಂದಿನ ಕಥೆ ಈಗಿನ ಪೀಳಿಗೆಗೆ ಹೇಳಿದರೆ ಹೇಗಿರುತ್ತದೆ ಎಂದು ನೋಡುವ ಪ್ರಯತ್ನವೇ 'ನೊಣ' . ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ಪುಟಾಣಿಗಳು ತಾವು ಈ ಕಥೆ ಹೇಳುವುದನ್ನು ಕಲಿತಿದ್ದಲ್ಲದೇ, ಅವರವರ ವಸ್ತ್ರ ವಿನ್ಯಾಸಗಳನ್ನು , ರಂಗ ಸಜ್ಜಿಕೆಯನ್ನು ಅವರೇ ತಯಾರಿಸಿ, ತಮ್ಮ ಪ್ರತಿಭೆ ಹಾಗು ನಾವೀನ್ಯತೆ ಯನ್ನು ಪ್ರದರ್ಶಿಸಿದರು. ನಾಟಕದ ನಂತರ 'ಪುಟಾಣಿ ನೊಣ' ಹೇಳುವ ಸಾಲುಗಳು ಮಕ್ಕಳು , ದೊಡ್ಡವರೂ ಎನ್ನದೆ ಸಭಿಕರೆಲ್ಲರೂ ಪುನರುಚ್ಚರಿಸಿದ್ದು ಕಥೆ ಹೇಳುವ ಸಂಪ್ರದಾಯ ಎಷ್ಟು ಪರಿಣಾಮಕಾರಿ ಎಂದು ತೋರಿಸಿಕೊಡುವಲ್ಲಿ ' ನೊಣ ' ನಾಟಕ ಯಶಸ್ವಿಯಾಯಿತು.





# ಮನಗೆದ್ದ ಕೋಲಾಟ, ನೃತ್ಯ ಪ್ರದರ್ಶನಗಳು

*ಉಷಾ ಬಸ್ರೂರ್*

ಕೇವಲ 2 ತಿಂಗಳ ಹಿಂದಷ್ಟೇ ಆರಂಭಗೊಂಡ ಹಿಲ್ಸ್ಬರೋ ಕನ್ನಡ ಶಾಲೆ ಪ್ರಥಮ ಬಾರಿಗೆ ಬೃಂದಾವನ ಕನ್ನಡ ಕೂಟದ ಮಕ್ಕಳೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿತ್ತು. ಅತೀ ಕಡಿಮೆ ಸಮಯದಲ್ಲಿ ಹಾಡು, ನೃತ್ಯ, ಕೋಲಾಟವನ್ನು ಕಲಿತು, ಎಲ್ಲರಿಗೂ ಮೊದಲು ವೇದಿಕೆಯಲ್ಲಿ ಭಾರೀ ಉತ್ಸಾಹದಿಂದ ತಮ್ಮ ಕಲೆಯ ಪ್ರದರ್ಶನಗೈದ ಈ ಪುಟ್ಟ ಮಕ್ಕಳ ಬಗ್ಗೆ ಹೆಮ್ಮೆ ಎನಿಸುತ್ತದೆ! ಕವಿ ಚೆನ್ನವೀರ ಕಣವಿಯವರ ಭಾವಗೀತೆ ವಿಶ್ವ ವಿನೂತನ ವಿದ್ಯಾ ಚೇತನ ದೊಂದಿಗೆ ಮನೋರಂಜನ ಕಾರ್ಯಕ್ರಮ ಪ್ರಾರಂಭವಾಯ್ತು. ಜನಪ್ರಿಯ ಜಾನಪದ ಗೀತೆ ಘಲ್ಲು ಘಲ್ಲೆನುತ ಗೆಜ್ಜೆ ಗೆ ಪುಟ್ಟ ಪುಟಾಣಿಗಳಿಂದ ಕೋಲಾಟ ಹಾಗೂ ಉಘೇ ಉಘೇ ಎಂದು ಏಳು ಮಲೆಯ ಮೇಲೇರಿ ಕುಳಿತ ಮಾದೇವನನ್ನು ನಿದ್ದೆಯಿಂದೆದ್ದು ಬಾ ಎಂದು ಎದ್ದು, ಬಿದ್ದು , ಕುಣಿದು ಕುಪ್ಪಳಿಸಿ ಕರೆದರು. ಮೊದಲ ಪ್ರದರ್ಶನದಲ್ಲೇ ಸಭಿಕರ ಪ್ರಶಂಸೆ ಗಳಿಸಿದ ನಮ್ಮ ಮಕ್ಕಳು ಕಂಡು, ಕಲಿಯುವುದು ಬಹಳಷ್ಟಿದೆ, ಅದಕ್ಕಾಗಿಯೇ ನಂತರ ನಡೆದ ಎಲ್ಲಾ ಆಕರ್ಷಕ ನೃತ್ಯ ಗಳನ್ನೂ, ಮನೋಜ್ಞ ಅಭಿನಯದ ನಾಟಕಗಳನ್ನೂ ಆಸಕ್ತಿಯಿಂದ ಕುಳಿತು ನೋಡಿದರು. ಹೊರ ನಾಡಿನಲ್ಲಿ ಹುಟ್ಟಿ ಬೆಳೆದಿದ್ದರೂ ತಾಯ್ನಾಡ ಕಂಪನ್ನು ಪಸರಿಸಲು ಬದ್ಧರಾದ ಈ ನಮ್ಮ ಕಂದಮ್ಮಗಳಿಗೆ ಎಲ್ಲರ ಪ್ರೋತ್ಸಾಹ, ಆಶೀರ್ವಾದಗಳು ಎಂದೆಂದಿಗೂ ಹೀಗೇ ಇರಲಿ!





# ನಾವಾದೆವು "ತೆನಾಲಿ ರಾಮ"ನ ಕಥೆಯ ಪಾತ್ರಗಳು

*ರೋಹಿಣಿ ಮಹೇಶ್*

ಕಥೆ ಕೇಳುವುದೆಂದರೆ ಯಾರಿಗೆ ತಾನೇ ಇಷ್ಟ ಇರುವುದಿಲ್ಲ ! ಅದರಲ್ಲೂ ರಾಜರಾಣಿಯರ ಕಥೆ ಎಂದರೆ ಮಕ್ಕಳು ವಯಸ್ಕರಾದಿಯಾಗಿ ಖುಷಿ ಪಡುತ್ತೇವೆ. ಆ ಕಥೆಗಳಲ್ಲಿ ಹಾಸ್ಯಗಾರನಾದ , ಚತುರನಾದ , ಮಂತ್ರಿ ಇದ್ದರಂತೂ ಖುಷಿಗೆ ಪಾರವೇ ಇಲ್ಲದಂತಾಗುತ್ತದೆ ಅಲ್ಲವೇ ? ಒಂದು ವೇಳೆ ಅಂತಹ ಕಥೆಯಲ್ಲಿ ಬರುವ ಪಾತ್ರಗಳೇ ನಾವಾದರೆ? ಹೀಗೆಯೇ ಒಂದು ಅನುಭವವಾಯಿತು ನಮ್ಮ ಎಡಿಸನ್ ಶಾಲೆಯ ಮಕ್ಕಳಿಗೆ ..

ಈ ಸಲದ ಮಕ್ಕಳೋತ್ಸವದಲ್ಲಿ ಎಡಿಸನ್ ಶಾಲೆಯ ಪುಟಾಣಿಗಳು "ವಿಕಟಕವಿ ತೆನಾಲಿ ರಾಮ " ಎಂಬ ನಾಟಕವನ್ನು ಪ್ರಸ್ತುತ ಪಡಿಸಿದರು. ತಾವು ಓದಿದ ಕಥೆಗಳಲ್ಲಿ ಬರುವ ರಾಜ, ಮಂತ್ರಿ, ಪಂಡಿತರಾಗುವ ಅವಕಾಶ ನಮ್ಮ ಮಕ್ಕಳದ್ದಾಯಿತು ! ಅವರ ಖುಷಿಗೆ ಪಾರವೇ ಇರಲಿಲ್ಲ..! ಕತ್ತಿವರಸೆ ಇರುವುದೆ, ಯುದ್ಧ ಇರುವುದೆ , ನಮ್ಮ ಎದುರಾಳಿ ಯಾರು , ನಾವು ಕುದುರೆ ಮೇಲೆ ಬರುತ್ತೇವಾ ಅವರ ಪ್ರಶ್ನೆ ಒಂದೇ ಎರಡೇ !! ಮಕ್ಕಳ ಪ್ರಶ್ನೆಗಳು ಹೀಗಾದರೆ ಶಿಕ್ಷಕ ವೃಂದದವರಿಗೆ ಬೇರೆಯೇ ಪ್ರಶ್ನೆ ಎದ್ದಿತು. ಈಗ ತಾನೇ ಕನ್ನಡ ಮಾತನಾಡಲು ಕಲಿಯುತ್ತಿರುವ ಈ ಪುಟಾಣಿಗಳ ಹತ್ತಿರ ಗ್ರಾಂಥಿಕ ಭಾಷೆಯಲ್ಲಿ ಸಂಭಾಷಣೆ ಹೇಳಿಸುವುದು ಬಹುದೊಡ್ಡ ಸವಾಲಾದೀತು ಎಂದೆಣಿಸಿದ್ದೆವು. ಆದರೆ ಮಕ್ಕಳೆಲ್ಲರೂ ಸುಲಲಿತವಾಗಿ ಕಲಿತು ಹೇಳತೊಡಗಿದರು. ಇದರಲ್ಲಿ ಎಲ್ಲ ಪೋಷಕರ ಪ್ರಯತ್ನ ಎದ್ದು ಕಾಣಿಸುತ್ತದೆ. ಪ್ರತಿಯೊಂದು ಅಭ್ಯಾಸ ಅವಧಿ ಯಲ್ಲೂ ಮಕ್ಕಳೆಲ್ಲರೂ ತಮ್ಮಿ ಶಕ್ತಿ ಮೀರಿ ಪ್ರಯತ್ನ ಪಡುತ್ತಿದ್ದರು.. ಅವರ ಉತ್ಸಾಹ ಎಂತವರನ್ನೂ ಸಹ ಬೆರಗುಗೊಳಿಸುವಂತದ್ದು!! ೪ - ೯ ವರ್ಷದ ಒಳಗಿನ ಈ ಮಕ್ಕಳು , ಬೆಳಿಗ್ಗೆ ಯಿಂದ ಶಾಲೆಯಲ್ಲಿ ಕುಳಿತು ಪಾಠ ಕೇಳಿ, ನಂತರ ವಿವಿಧ ಶಾಲೇತರ ಚಟುವಟಿಕೆಗಳನ್ನೂ ಮುಗಿಸಿ ನಾಟಕ ಅಭ್ಯಾಸಕ್ಕೆ ಬರುತ್ತಿದ್ದರೂ , ಅವರ ಉತ್ಸಾಹ ಕಾರಂಜಿ ಸದಾ ಚಿಮ್ಮುತ್ತಿರುತ್ತಿತ್ತು !

ಉತ್ಸವದ ದಿನ ಹತ್ತಿರ ವಾದಂತೆ ಪುಟಾಣಿಗಳು ವೇಷಭೂಷಣ, ನಡೆ-ನುಡಿ ಎಲ್ಲದರಲ್ಲೂ ಪ್ರವೀಣರಾಗತೊಡಗಿದರು. ನಾಟಕಕ್ಕೆ ಬೇಕಾಗುವ ಹಿನ್ನೆಲೆ ಸಂಗೀತ , ನಿರೂಪಣೆ ರೆಕಾರ್ಡಿಂಗ್, ವಿಜಯನಗರ ವೈಭವವನ್ನು ಎದ್ದು ತೋರಿಸುವಂತಹ ರಂಗಪರಿಕರಗಳೂ ಸಹ ತಯಾರಾಗಿ ನಿಂತವು .

ಕೈ ಕೆಸರಾದರೆ ಬಾಯಿ ಮೊಸರು ಎನ್ನುವ ನಾಣ್ನುಡಿ ಮಕ್ಕಳೋತ್ಸವದಂದು ಪುನಃ ಸತ್ಯವಾಯಿತು ! ಎಲ್ಲರ ಪರಿಶ್ರಮ , ಶ್ರದ್ಧೆ, ರಂಗದಮೇಲೆ ಎದ್ದು ಕಾಣಿಸುತ್ತಿತ್ತು! ಪುಟಾಣಿಗಳು ತಮ್ಮ ಶಕ್ತಿಮೀರಿ ನಟಿಸಿ ಎಲ್ಲರ ಮನ ಗೆದ್ದಿದ್ದರು. ! ಎಲ್ಲರ ಬಾಯಲ್ಲೂ ನಮ್ಮ ಪುಟಾಣಿಗಳ ಗುಣಗಾನವೇ ಇದ್ದಿತು.. ಅಲ್ಪಾವಧಿಯ ಗುರಿ ಮುಟ್ಟಿದ್ದಾಯಿತು . ಧೀರ್ಘವಧಿಯ ಗುರಿ ಇನ್ನು ಸ್ವಲ್ಪದರಲ್ಲೇ ಮುಟ್ಟುತ್ತಾರೆ ನಮ್ಮ ಧೀರರು. ಈಗ ತಮ್ಮ ತಮ್ಮಲ್ಲಿ ಮಾತನಾಡುವಾಗ ಮಕ್ಕಳು ಗ್ರಾಂಥಿಕ ಭಾಷೆಯನ್ನೇ ಬಳಸಲು ಪ್ರಯತ್ನಿಸುತ್ತಿದ್ದಾರೆ! ಎಲ್ಲರೂ ಕ್ರಿಯಾಶೀಲರಾಗಿ ತಮಗೆ ತಿಳಿದಂತೆ ಕನ್ನಡದಲ್ಲಿ ಸಂಭಾಷಣೆ ಮಾಡುತ್ತಿದ್ದಾರೆ..! ಕನ್ನಡವೇ ಬಾರದ ಈ ಮಕ್ಕಳಲ್ಲಿ ಎಂತಹ ಪರಿವರ್ತನೆ! ಬೃಂದಾವನ ನಡೆಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಈ ಮಕ್ಕಳು ತಮಗೇ ಅರಿವಿಲ್ಲದಂತೆ ಮಕ್ಕಳಾಟಿಕೆಯಲ್ಲಿ ಜೀವನದ ಮೌಲ್ಯಗಳನ್ನು ಕಲಿಯುತ್ತಿದ್ದಾರೆ . ಗಾಯನ, ನಾಟಕ , ನೃತ್ಯ ಕಲಿಯುವುದೇ ಇರಲಿ , ಬಹುದೊಡ್ಡ ಸಭೆಯ ಎದುರು ಯಾವ ಅಂಜಿಕೆ ಇಲ್ಲದೆ ಲೀಲಾಜಾಲವಾಗಿ ಮಾಡುವುದೇ ಇರಲಿ , ಎಲ್ಲದಕ್ಕೂ ಸೈ ಎನಿಸಿಕೊಳ್ಳುತ್ತಿದ್ದಾರೆ. ಒಂದು ತಂಡವಾಗಿ ತಂಡದ ಸ್ಪೂರ್ತಿಯನ್ನು ಕಾಪಾಡಿಕೊಂಡು ಒಬ್ಬರನ್ನೊಬ್ಬರು ಉತ್ತೇಜಿಸುತ್ತ ,ಕಾಲೆಳೆಯುತ್ತಾ , ಕೀಟಲೆ ಮಾಡುತ್ತಾ , ತಮ್ಮ ಬಾಲ್ಯದ ನೆನಪಿನ ಬುತ್ತಿಯನ್ನು ತುಂಬಿಸಿಕೊಳ್ಳುತ್ತಿದ್ದಾರೆ .

# ಮಕ್ಕಳೋತ್ಸವದಲ್ಲಿ ಮಕ್ಕಳ ಚಿತ್ರಸ್ಪರ್ಧೆ

## ವಯಸ್ಸು ೬ ರಿಂದ ೮: ವಿಷಯ–**ನವಿಲು**




ಮೊದಲನೆ ಬಹುಮಾನ **ವಿಹಾನ್ ಆತ್ರೇಯಸ್**



ಎರಡನೆ ಬಹುಮಾನ **ಚಾರ್ವಿ ಮೋಹನ ಕುಮಾರ್**



ಮೂರನೇ ಬಹುಮಾನ **ದಿಯಾ ರಜನೀಶ**


## ವಯಸ್ಸು ೯ ರಿಂದ ೧೨: ವಿಷಯ–**ಕರ್ನಾಟಕದ ಸ್ಮಾರಕಗಳು**



ಮೊದಲನೆ ಬಹುಮಾನ **ಅಕ್ಷರ ಭಾರ್ಗವ**



ಎರಡನೆ ಬಹುಮಾನ **ಸಾರ್ಥಕ್ ರಾವ್**




ಮೂರನೇ ಬಹುಮಾನ **ಸಾಹಿತಿ ಗುಪ್ತ**

## ವಯಸ್ಸು ೩ ರಿಂದ ೫: ವಿಷಯ–ನಮ್ಮ ಧ್ವಜ



ಮೊದಲನೆ ಬಹುಮಾನ **ಸಾನ್ವಿ ದೇವಾಡಿಗ**



ಎರಡನೆ ಬಹುಮಾನ

**ವಿದಿಶಾ ವಿವೇಕ**




ಮೂರನೇ ಬಹುಮಾನ

**ಅದಿತಿ ಕುಪ್ಪಡ**

## ವಯಸ್ಸು ೧೩ ರಿಂದ ಮೇಲೆ: ವಿಷಯ–ಸ್ವಚ್ಚ ಭಾರತ



ಮೊದಲನೆ ಬಹುಮಾನ **ಇಂಚರ ಹೊಸನಗರ**




ಎರಡನೆ ಬಹುಮಾನ **ಅದಿತಿ ಮಲ್ಲಿಕ್**



# ಕನ್ನಡ ಶಾಲೆಯ ಬಳ್ಳಿಯಲ್ಲಿ ಇನ್ನೊಂದು ಹೂವು

*ಸಂಧ್ಯಾ ಮಲ್ಲಿಕ್*

ಬೃಂದಾವನ ಕನ್ನಡ ಶಾಲೆಯು ಈ ನವಂಬರ್ ತಿಂಗಳಿಗೆ ನಾಲ್ಕು ವರ್ಷವನ್ನು ಯಶಸ್ವಿಯಾಗಿ ಮುಗಿಸಿ ಐದನೆಯ ವರ್ಷಕ್ಕೆ ಕಾಲಿಡುತ್ತಿದೆ ! ನಮ್ಮ ನಾಲ್ಕನೇ ಶಾಲೆಯ ಉದ್ಘಾಟನೆಯ ಫ್ಲೈಯರ್ ಗಳು ಹಲವು ಕನ್ನಡ ಸಂಘಟನೆಗಳ ಗಮನ ಸೆಳೆಯಿತು. ನನಗೆ ಆಸ್ಟ್ರೇಲಿಯಾ - ಸಿಡ್ನಿ, ಮಸ್ಕಟ್ ಮತ್ತು ನಮ್ಮ ಅಮೆರಿಕಾದ ರಿಚ್ಮಂಡ್, ಅಟ್ಲಾಂಟಾ, ಫಿಲಡೆಲ್ಫಿಯಾ ದಿಂದ ನಮ್ಮ ಈ ಶಾಲಾ ಯಶಸ್ಸಿನ ಬಗ್ಗೆ ಕುತೂಹಲ ಮತ್ತು ನಡೆಸುವ ರೀತಿಯ ಬಗ್ಗೆ ಹಲವು ಪ್ರಶ್ನೆಗಳು ಬಂದವು… ಎಲ್ಲರಿಗೂ ನಮ್ಮ ಬೃಂದಾವನ ಕನ್ನಡ ಕಲಿಸೋಣ - ಶಾಲೆಗಳ ಕಾರ್ಯ ವೈಖರಿಯ ಬಗ್ಗೆ ಖುಷಿಯಿಂದ ತಿಳಿಸಿದೆ.

ನಮ್ಮ ಯಶಸ್ಸಿನ ಗುಟ್ಟು ಏನು ಗೊತ್ತೇ - ನಮ್ಮ ಯಾವುದೇ ಶಾಲೆಯು ಒಬ್ಬರ ಮೇಲೆ ಅವಲಂಬಿತವಾಗಿಲ್ಲ. ಪ್ರತಿಯೊಂದು ಶಾಲೆಯ ಹಿಂದೆಯೂ ಸ್ವಯಂಸೇವಕರ ಒಂದು ಬಲವಾದ ಗುಂಪಿದೆ, ಒಬ್ಬರಿಗೆ ಸಮಯದ ಅಭಾವವಾದಾಗ ಇನ್ನೊಬ್ಬರು ಅಧ್ಯಾಪಕರು ಶಾಲೆಯ ಜವಾಬ್ದಾರಿ ಹೊತ್ತು, ಒಬ್ಬರಿಗೆ ಇನೊಬ್ಬರು ಹೆಗಲು ಕೊಟ್ಟು ಪೂರ್ಣ ವರುಷ ಶಾಲೆಯನ್ನು ನಡೆಸುತ್ತಾರೆ! ಸ್ವಯಂ ಸೇವಕರ ಸಾಮರಸ್ಯಕ್ಕೆ ನಮ್ಮ ಅಭಿನಂದನೆಗಳು. ಹಲವರು ಮೊದಲನೆಯ ಶಾಲೆಯ ಆರಂಭದ ದಿನಗಳಿಂದಲೂ ನಮ್ಮ ಜೊತೆಗೂಡಿ ನಾಲ್ಕು ವರ್ಷಗಳಿಂದ ಸತತವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದೇ ಬೃಂದಾವನ ಶಾಲೆಯ ಶಕ್ತಿಯೂ ಕೂಡ!

ಮೊದಲನೆಯ ಕನ್ನಡ ಶಾಲೆಯಿಂದಲೂ ಸ್ವಯಂಸೇವಕಿಯಾಗಿ ಕಾರ್ಯನಿರ್ವಹಿಸುತ್ತಿರುವ ನನಗೆ, ಶಾಲೆಯ ಮೇಲೆ ಅಪಾರವಾದ ಪ್ರೀತಿ ಮತ್ತು ಹೆಮ್ಮೆ, ಹಾಗಾಗಿ ಈ ಬಾರಿ ನಮ್ಮ ಕನ್ನಡ ಶಾಲೆಯ ವಿಸ್ತರಣೆಯ ಕನಸು ಕಂಡು ಸೌರಭ ತಂಡದಲ್ಲಿ ಬೃಂದಾವನ ಶಾಲೆಯ ಜವಾಬ್ದಾರಿ ವಹಿಸುತ್ತಿದೇನೆ ! ಶಾಲೆ ಶುರು ಮಾಡುವ ಆರಂಭದ ದಿನಗಳಲ್ಲಿ ಪಠ್ಯ ಪುಸ್ತಕಗಳನ್ನು ಮನೆಯಲ್ಲೇ ಮುದ್ರಿಸುತ್ತಿದ್ದೆವು. ಹಲವು ಸ್ವಯಂಸೇವಕರು ನಮ್ಮ ಮನೆಯಲ್ಲಿ ಒಟ್ಟಿಗೆ ಸೇರಿ ಹಲವು ಘಂಟೆಗಳ ಕಾಲ ಮುದ್ರಣ, ಬೈಂಡಿಂಗ್ ಕೆಲಸ ನಿರ್ವಹಿಸುತ್ತಿದ್ದೆವು. ಉಪ್ಪಿಟ್ಟು, ಮಸಾಲೆ ದೋಸೆ, ಚಹಾದ ಜೊತೆಗೆ ಹರಟೆ ಮತ್ತು ಕೆಲಸ ಎಲ್ಲವೂ ನಡೆಯುತ್ತಿದ್ದವು,

ಹೀಗೆ ಆರಂಭಗೊಂಡು ಇಂದು ಐದನೆಯ ಶಾಲೆ ಆರಂಭಿಸಲು ತಯಾರಿ ನಡೆಸುತ್ತಿದ್ದೇವೆ. ನಮ್ಮ ಶಾಲೆಯಲ್ಲಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ನಾವು ಪ್ರೋತ್ಸಾಹಿಸುತ್ತೇವೆ. ಪ್ರತಿಯೊಂದು ಶಾಲೆಯಲ್ಲಿ ೧೦ ರಿಂದ ೩೦ ವಿದ್ಯಾರ್ಥಿಗಳು ಇದ್ದಾರೆ ಮಕ್ಕಳು ಕನ್ನಡ ಓದುವುದು ಬರೆಯುವುದು ಮತ್ತು ಮಾತಾಡುವುದರ ಜೊತೆಗೆ ಕನ್ನಡದ ಸಂಸ್ಕೃತಿ, ಕವಿಗಳು, ದಾಸರು, ವಚನಕಾರರು, ಮಹಾಪುರುಷರು, ಹೀಗೆ ಹಲವಾರು ವಿಷಯಗಳ ಬಗ್ಗೆ ಕಾರ್ಯಕ್ರಮಗಳನ್ನು ನೀಡಿ ತಾವು ಕಲಿತು ಇತರರಿಗೂ ತಿಳಿಯಪಡಿಸಿದ್ದಾರೆ.






ಹಿಲ್ಸ್ ಬರೋ ಕನ್ನಡ ಶಾಲೆಯ ಉಧ್ಘಾಟನೆಗೆ ರಾಷ್ಟ್ರ ಕವಿ ಕುವೆಂಪುರವರ ಮಗಳು ತಾರಿಣಿ ಚಿದಾನಂದ ಮತ್ತು ಪ್ರೊಫೆಸರ್ ಚಿದಾನಂದ ಗೌಡರು ಮುಖ್ಯ ಅತಿಥಿಯಾಗಿ ಆಗಮಿಸಿದ್ದು ನಮ್ಮ ಅದೃಷ್ಟ. ಇವರ ಜೊತೆಗೆ ಸೊಮರ್ಸೆಟ್ ಕೌಂಟಿಯ ಅನೇಕ ಗಣ್ಯರು ಆಗಮಿಸಿದ್ದರು. ಮಾಂಟೆಗೊಮರಿ ಮೇಯರ್ - ಸದಫ್ ಜಾಫರ್, ಸೊಮರ್ಸೆಟ್  ಫ್ರೀಹೊಲ್ಡರ್ - ಸಾರಾ ಸೂಯ್, ನಿವೃತ್ತ ಪೊಲೀಸ್ ಮುಖ್ಯಸ್ಥರು - ಡ್ಯಾರೆನ್ ರುಸ್ಸೊ , ನಿವೃತ್ತ  ಗ್ರೀನ್ ಬ್ರೂಕ್ ಮೇಯರ್  - ಮೆಲೋನಿ ಮರಾನೊ ಇವರೆಲ್ಲರ ಉಪಸ್ಥಿತಿಯಲ್ಲಿ ಅರ್ಥಪೂರ್ಣವಾಗಿ ಆರಂಭಗೊಂಡಿತು. ಇವರೆಲ್ಲರೂ ನಮ್ಮ ಭಾಷೆಯನ್ನು  ಮತ್ತು ಸಂಸ್ಕೃತಿಯನ್ನು  ಕಲಿಯುವುದು ಮಕ್ಕಳಿಗೆ ಎಷ್ಟು ಮುಖ್ಯವೆಂದು ತಿಳಿಸಿ ಹೇಳಿದರು. ನಮ್ಮ ಕೆಲಸವನ್ನು ಶ್ಲಾಘಿಸಿ ನಮಗೆ ಪ್ರಶಸ್ತಿ ಪತ್ರವನ್ನು ನೀಡಿ  ಉತ್ತೇಜಿಸಿದರು. ಕರ್ನಾಟಕ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಮಂತ್ರಿ - ಶ್ರೀ ಸಿ.ಟಿ ರವಿಯವರು ನಮಗೆ ಶುಭ ಕೋರಿ ವೀಡಿಯೋ ಸಂದೇಶವನ್ನು ಕೂಡಾ ಕಳುಹಿಸಿದ್ದಾರೆ.




ಜನವರಿ ಹನ್ನೊಂದರಂದು ಐದನೆಯ ಕನ್ನಡ ಶಾಲೆಯ ಉದ್ಘಾಟನಾ ಸಮಾರಂಭವು ಮಾರ್ಲ್ಬಾರೋ ನಗರದ ಗುರುವಾಯೂರಪ್ಪನ ದೇವಸ್ಥಾನದಲ್ಲಿ ನಡೆಯಲಿದೆ. ನಂತರ ಪ್ರತಿ ಶನಿವಾರ ಅದೇ ಪ್ರಾಂಗಣದಲ್ಲಿ ಕನ್ನಡ ಶಾಲೆಯು ನಡೆಯುತ್ತದೆ. ನ್ಯೂ ಜೆರ್ಸಿಯಲ್ಲಿ ಹೀಗೆ ಇನ್ನೂ ಹಲವು ಶಾಲೆಗಳನ್ನು ತೆರೆಯಬೇಕು, ಹೆಚ್ಚು ಮಕ್ಕಳು ಕನ್ನಡ ಕಲಿಯಬೇಕೆಂಬುದು ನಮ್ಮ ಹಂಬಲ. ನಿಮ್ಮೆಲ್ಲರ ಸಹಾಕಾರದೊಂದಿಗೆ ನಾವು ಈ ಕನಸ್ಸನ್ನು ನನಸು ಮಾಡುತ್ತೇವೆಂಬ ವಿಶ್ವಾಸವಿದೆ.





# ಧರ್ಮ, ಜೀವ ಮತ್ತು ಪ್ರಕೃತಿ

*ಬಿ ಜಿ ನಾಗೇಶ ರಾವ್*

**"ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯ**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಃ ಚ್ಛಿ ದುಃಖ ಭಾಗ್ ಭವೇತ್:"**
ಎಲ್ಲರೂ ಸುಖವಾಗಿರಬೇಕು, ಎಲ್ಲರೂ ಆರೋಗ್ಯವಾಗಿರಬೇಕು, ಎಲ್ಲರೂ ಒಳಿತನ್ನು ನೋಡುವಂತಾಗಬೇಕು, ಯಾರೂ ದು:ಖಿಗಳಾಗಬಾರದು. ಇದೇ ಧರ್ಮದ ಎಲ್ಲ ಕಾಲದ ಆಶಯ. ಇದೇ ಮಾನವ ಧರ್ಮ

ಆದರೆ ಈ ಕಾಲದಲ್ಲಿ ನಾವು ಕಾಣುತ್ತಿರುವುದೇನು? ಎಲ್ಲರೂ ಸುಖವಾಗಿದ್ದೇವೆಯೇ? ಎಲ್ಲರೂ ಆರೋಗ್ಯವಾಗಿದ್ದೇವೆಯೇ? ನಾವು ಎಲ್ಲರ, ಉಳಿದವರೆಲ್ಲರ ಒಳಿತನ್ನು ಆಶಿಸುತ್ತೇವೆಯೇ?
ಈ ಕಾಲದಲ್ಲಿ ನಾವು ಈ ಶಾಂತಿ ಮಂತ್ರದ ನಿಜವಾದ ಅರ್ಥ ಹುಡುಕುವುದು ಹೇಗೆ, ಸರಿತಪ್ಪುಗಳ , ಎಲ್ಲರ ಸುಖ, ದು:ಖಗಳ ಗಡಿಯ ನಿರ್ಧರಿಸುವುದು ಹೇಗೆ? ನಾವು ಎಲ್ಲಾ ಜೀವಿಗಳ ಗೌರವಿಸಿ ಬದುಕುತ್ತೇವೆಯೇ?ಪ್ರಕೃತಿಯೊಂದಿಗೆ ಸಹಬಾಳ್ವೆ ಹೇಗೆ ?
ಇದು ಅನಾದಿಕಾಲದಿಂದಲೂ ನಮ್ಮ ಜಿಜ್ಞಾಸೆ - ಜೀವಿಗಳೆಂದರೆ ಯಾರು? ಮನುಷ್ಯರು ಮಾತ್ರ ಜೀವಿಗಳೇ? ಸಹಬಾಳ್ವೆಯ ಈ ಮೂಲ ಮಂತ್ರದಲ್ಲಿ ಪ್ರಾಣಿಗಳನ್ನು ಸಸ್ಯಗಳನ್ನೂ ಸೇರಿಸಬೇಕೆ? ನಮ್ಮ ಧರ್ಮವು ಈವಿಚಾರಗಳ ಬಗ್ಗೆ ಏನು ಹೇಳುತ್ತದೆ ಎಂಬ ಮಂಥನವೆ ಈ ಲೇಖನ.

ವಿಜ್ಞಾನವೇ ಹೇಳುವಂತೆ ಜಗತ್ತಿನ ಪಂಚಭೂತಗಳ ಅವಲಂಬಿಸಿ ಸಸ್ಯಗಳು ಬೆಳೆದರೆ, ಸಸ್ಯಗಳನ್ನು ಅವಲಂಬಿಸಿ ಪ್ರಾಣಿಗಳು ಬದುಕುತ್ತವೆ. ಸಸ್ಯ , ಪ್ರಾಣಿಗಳನ್ನು ಅವಲಂಬಿಸಿ ಮನುಷ್ಯ ಹಾಗೂ ಉಳಿದ ಪ್ರಾಣಿಗಳು ಬದುಕಿರುವುವಾದರೂ,
ಈ ಜಗತ್ತೂ ಸಹ ಜಡವಾಗಿಲ್ಲ. ಪರ್ವತ, ಜಲಪಾತ, ಹಿಮ, ಸಾಗರ, ಮರುಭೂಮಿ, ಕಾನನ, ಕಂದರಗಳನ್ನೊಳಗೊಂಡ ಈ ಜಗತ್ತೇ ಒಂದು ಜೀವ, ಅದೂ ತನ್ನ ಉಳಿವು ಬೆಳೆವಿಗೆ ಈ ಜೀವಿಗಳನ್ನು ಅವಲಂಬಿಸಿದೆ ಎಂದು ನಮ್ಮ ಗ್ರಂಥಗಳು ಹೇಳುತ್ತವೆ. ಜೀವಿಗಳು ಸಹಬಾಳ್ವೆಯ ಮರೆತಾಗ, ದುರಾಸೆ ಹೆಚ್ಚಾಗಿ ಪ್ರಕೃತಿಯ ಶೋಷಿಸಿದಾಗ ಜಗತ್ತು ವಿಕೋಪಗಳೆಡೆಗೆ ಸಾಗುತ್ತದೆ, ಯುಗಾಂತರಗಳಾಗುತ್ತವೆ ಎಂದು ವೇದಗಳು ಹೇಳುತ್ತದೆ.

ಪಾಶ್ಚಿಮಾತ್ಯ ವಿಜ್ಞಾನವು ವಿಶ್ವದ ಉಗಮವು ಬಿಗ್ ಬ್ಯಾಂಗ್ನಿಂದ ಆಯಿತೆನ್ನುತ್ತದೆ. ವಿಶ್ವದ ಕೇಂದ್ರದಲ್ಲಿ ಒಂದು ಅಪಾರವಾದ ದ್ರವ್ಯರಾಶಿಯಿತ್ತು. ಅದು ಅದರ ಒತ್ತಡಕ್ಕೆ ಮಣಿದಾಗ ಒಂದು ಮಹಾ ಸ್ಫೋಟವಾಯಿತು..ನಕ್ಷತ್ರ ಮಂಡಲ,ಗ್ರಹಮಂಡಲಗಳು, ಗ್ರಹ-ಉಪಗ್ರಹಗಳು ಉಂಟಾದವು..

ವಿಶ್ವವು ಹೀಗೆ ತಾನೇ ತಾನಾಗಿ ಸೃಷ್ಟಿಯಾಯಿತು ಎಂದು ವಿಜ್ಞಾನವು ಹೇಳಿದೆ. ನಮ್ಮಲ್ಲಿ ಇದಕ್ಕೆ ಸಮನಾಗಿ "ಆತ್ಮಾನಾಂ ಇದಂ ಏಕಂ ಅಸೀತ್", ಮೊದಲು ಅನಂತವಾದ ಆಕಾಶದಲ್ಲಿ ಭಗವಂತನೊಬ್ಬನೇ ಇದ್ದನು.

**"ಆಕಾಶಾದ್ ವಾಯು: ವಾಯೋರಿತಿ ಅಗ್ನಿ: ಅಗ್ನೇರಿತಿ ಜಲಂ ಜಲೇರಿತಿ ಸ್ಥಲಂ"** ಎಂದರೆ, ಭಗವಂತನಿಂದ ಮೊದಲು ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ನೀರೂ ಹಾಗೂ ನೀರಿನ ನಂತರ ಸ್ಥಳವೂ ಸೃಷ್ಟಿಯಾಯಿತೆನ್ನುತ್ತಾರೆ.

ಪಂಚಭೂತಗಳೊಂದೆಡೆಯಾದರೆ, ಜೀವ ಎನ್ನುವುದೇ ಒಂದು ವಿಶೇಷ ಶಕ್ತಿ.. ಜೀವ ಹೇಗೆ ಸೃಷ್ಟಿಯಾಯಿತೆಂದು ಹೇಳಲು ವಿಜ್ಞಾನಕ್ಕೂ ಸಾಧ್ಯವಾಗಿಲ್ಲ.

ಏಕಕೋಶ ಜೀವಿಗಳಿಂದ ಹಿಡಿದು, ಜಟಿಲ ದೇಹ ಪ್ರಕೃತಿಯ ಮಾನವರ ವರೆಗೆ, ಈ ಜೀವ ಸಂಕುಲ ವ್ಯಾಪಿಸಿದೆ. ಜೀವ ಎನ್ನುವುದು ಅತ್ಯಂತ ವಿಶೇಷವಾದ ಶಕ್ತಿ.. ಎಷ್ಟೇ ಶಕ್ತಿಯುತ ದೇಹವಾದರೂ ಜೀವ ಎಂಬುದು ಕ್ಷಣಮಾತ್ರಕ್ಕೆ ನಶಿಸಿ ಹೋದಲ್ಲಿ.. ದೇಹವು ಜಡವೇ, ಜೀವವಿಲ್ಲದಿದ್ದಲ್ಲಿ ದೇಹ ವ್ಯವಸ್ಥೆ ತತ್ ಕ್ಷಣ ನಶಿಸಲಾರಂಭಿಸುತ್ತದೆ. ಸಸ್ಯಗಳಲ್ಲೂ ಅಷ್ಟೇ, ಜೀವ ನಶಿಸಿದಾಗ ಅವೂ ಕೊಳೆಯಲಾರಂಭಿಸುತ್ತವೆ, ಬಾಡುತ್ತವೆ, ಒಣಗುತ್ತವೆ.

ಪಾಶ್ಚಿಮಾತ್ಯ ವಿಜ್ಞಾನವು ಇದೆಲ್ಲವೂ ತಾನೇತಾನಾಗಿ ಉಂಟಾಯಿತೆಂದರೆ, ನಮ್ಮ ವೇದೋಪನಿಶತ್ತುಗಳು, ಯಾವುದೂ ಕಾರಣವಿಲ್ಲದೆ ನಡೆಯುವುದಿಲ್ಲ, ನಿರೀಂದ್ರಿಯವಾದ ಭೌತಿಕ ಜಗತ್ತೂ, ಅದರಿಂದ ಮಾಡಲ್ಪಟ್ಟ ಸೇಂದ್ರಿಯವಾದ ಜೀವ ಜಗತ್ತೂ ಎರಡೂ ಸಹ ಭಗವಂತನ ಸೃಷ್ಟಿ. ಇವೆರಡನ್ನು ನಿರ್ವಹಿಸುವ, ನಿಯಂತ್ರಿಸುವ ಶಕ್ತಿ ಭಗವಂತನದೇ ಎನ್ನುತ್ತದೆ.

ಹೇಗೆ ಜೀವವಿಲ್ಲದ ದೇಹವು ನಶಿಸಲಾರಂಭಿಸುತ್ತದೋ, ಜಗತ್ತಿನಲ್ಲೂ ಸಹ ಒಂದು ಜೀವವಿದೆ..ಅದೇ ಪ್ರಕೃತಿ, ನಾವೆಲ್ಲರೂ ಅದರ ಭಾಗ. ಸಹಬಾಳ್ವೆ ಧರ್ಮ ಎನ್ನುವ ಜೀವದ ಮೇಲೆ ಈ ಪ್ರಕೃತಿಯು ಬದುಕಿದೆ. ಹೀಗೆ ಸೃಷ್ಟಿಯಾದ ಈ ಜಗತ್ತೂ ಸಹ ಸಹಸ್ರಾರು ಜೀವ ಲೋಕಗಳಿಂದ ತುಂಬಿದ್ದು ಪ್ರತಿಯೊಂದು ಲೋಕವೂ ಭಗವಂತನ ಸೃಷ್ಟಿಯೇ, ಭಗವಂತನೆಡೆಗೆ ಸಾಗುವುದೇ ಈ ಲೋಕದ ವಿಕಾಸ ಎಂದೆನ್ನುತ್ತದೆ.

ಅಧರ್ಮ, ದುರಾಸೆ ತುಂಬಿ ಸಹಬಾಳ್ವೆ ಕೊನೆಯಾದಾಗ ಪ್ರಕೃತಿಯು ನಶಿಸಿ ಲೋಕಗಳೇ ವಿಕೋಪಗಳೆಡೆಗೆ ಸಾಗುತ್ತವೆಂದು ನಮ್ಮ ಧರ್ಮ ಹೇಳುತ್ತದೆ. ಪ್ರಕೃತಿ ನಶಿಸಿದಾಗ ಜಗತ್ತುಗಳ ಮರುಸೃಷ್ಟಿಯೂ ಭಗವಂತನದೇ ಜವಾಬ್ದಾರಿ ಎನ್ನುತ್ತದೆ.

ವಿಶ್ವವೆಲ್ಲವನ್ನೂ ಈ ಜೀವ ಮಾಯೆ ಆವರಿಸಿದೆ. ಈ ಜೀವಕ್ಕೆ ಆದಿ ಅಂತ್ಯ ಇಲ್ಲ, ಆದರೆ ಜೀವವು ಬೆಳೆಯಲು ದೇಹವು ಸಹಕರಿಸದ ಪರಿಸ್ಥಿತಿ ತಲುಪಿದಾಗ ಜೀವ ದೇಹದಿಂದ ಹೊರಹೋಗುತ್ತದೆ.

ಸನಾತನ ಧರ್ಮ,ಗುರುಕುಲಗಳೆಲ್ಲವೂ ಈ ಪ್ರಕೃತಿಯನ್ನೂ ಜೀವದಂತೆ ತಿಳಿದು ಅದರೊಂದಿಗೆ ಸಹ ಜೀವನ ನಡೆಸುವ ಪರಿಯ ತಿಳಿಸಿದ್ದಾವೆ. ಈ ಗುರಿ ಹಿಂದೆಲ್ಲಕ್ಕಿಂತಲೂ ಈಗ ಇನ್ನೂ ಮುಖ್ಯವಾಗಿದೆ. ವಿಜ್ಞಾನದ ಪ್ರಗತಿಯೊಂದಿಗೆ ಮಾನವರು ಅತಿಮಾನವರಾಗಿ ಬೇರೆಲ್ಲ ಜೀವ ಪ್ರಕಾರಗಳಿಗಿಂತ ಶಕ್ತಿಯುತರಾಗಿದ್ದಾರೆ.

ಈ ಶಕ್ತಿಯೊಂದಿಗೆ ನಮ್ಮಲ್ಲಿ ಎರಡು ಆಯ್ಕೆಗಳಿವೆ. ಕೆಲವರು ಜಗತ್ತನ್ನು ಜಡವೆಂದು ತಿಳಿದು ಅನಾದಿ ಕಾಲದಿಂದಲೂ ತಮ್ಮ ಪಾಶವೀ ಶಕ್ತಿಯಿಂದ ವಶಪಡಿಸಿ ಅತ್ಯುಪಯೋಗ, ದುರುಪಯೋಗ ಮಾಡಲೆತ್ನಿಸಿದರೆ, ಕೆಲವರು ಪ್ರಕೃತಿಯ ಚೇತನವೆಂದು, ಶಾಶ್ವತವೆಂದು ಆನಂದವೆಂದು ತಿಳಿದು ಪ್ರೀತಿಸುತ್ತಾ, ಪೂಜಿಸುತ್ತಾ ಮಿತಿ ಉಪಯೋಗಿಸುತ್ತಾ ಬೆಳೆಸುತ್ತಾ ಬಂದಿದ್ದಾರೆ.

ಜಗತ್ತಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ, ಆದರೆ ಪ್ರಕೃತಿಯು ಜೀವ ಹೀನವಾದಂತೆ, ಜಗತ್ತು ಪ್ರಳಯದೆಡೆಗೆ,ಮರುಸೃಷ್ಟಿಯೆಡೆಗೆ ಸಾಗುತ್ತದೆ ಎಂದು ನಮ್ಮ ಧರ್ಮ ಹೇಳುತ್ತದೆ. ಹೀಗಾಗಿ ಪ್ರಕೃತಿ ಸಾಯುವುದಿಲ್ಲ, ಪ್ರಕೃತಿಯ ದುರುಪಯೋಗಿಸಿದರೆ, ನಾವೇ ನಾಶವಾಗುತ್ತೇವೆ ಎಂದು ತಿಳಿಯಲ್ಪಡುತ್ತದೆ.

ಇಂದು ಪ್ರಕೃತಿ ಮಲಿನತೆ, ಅರಣ್ಯ, ಪ್ರಾಣಿಸಂಕುಲ ನಾಶದ ಅಪಾಯವನ್ನು ಹಿಂದೆಂದಿಗೂ ಹೆಚ್ಚಾಗಿ ಎದುರಿಸುತ್ತಿದೆ. ಉಸಿರಾಡುವ ಗಾಳಿ,ಕುಡಿಯುವ ನೀರು, ಬೆಳೆಯುವ ಬೆಳೆಯೇ ಜೀವ ಹೀನವಾಗುತ್ತಿದೆ. ಇಂದಿನ ಲಾಭಕ್ಕೆ ಜನರು ಮುಂದಿನ ಪೀಳಿಗೆಗಳ ಬುನಾದಿಯನ್ನೇ ಕೀಳುತ್ತಿದ್ದಾರೆ.

ನಾವೀಗ ೨೧ನೇ ಕಲಿಯುಗದ ಮೊದಲ ಭಾಗದಲ್ಲಿದ್ದೇವೆಂದರೂ, ಪ್ರಕೃತಿಯ ಪೋಷಿಸಿ ಬೆಳೆಸದಿದ್ದಲ್ಲಿ, ಪ್ರಕೃತಿಯೊಂದಿಗೆ ಸಹಬಾಳ್ವೆ ನಡೆಸದಲ್ಲಿ, ನಾವು ಈ ಕಲಿಯುಗದ ಯುಗಾಂತ್ಯದೆಡೆಗೆ ವೇಗವಾಗಿ ಪ್ರಯಾಣ ಬೆಳೆಸುವುದು ಖಂಡಿತ.





# ನವೆಂಬರ್ ೧ರಂದೇ ರಾಜ್ಯೋತ್ಸವ

ಲಕ್ಷ್ಮಿ ಕೋಲಾಲ

ಕನ್ನಡ ರಾಜ್ಯೋತ್ಸವ ಅಥವಾ ಕರ್ನಾಟಕ ರಾಜ್ಯೋತ್ಸವ ಪ್ರತಿ ವರ್ಷದ ನವೆಂಬರ್ ೧ ರಂದು ಆಚರಿಸಲಾಗುತ್ತದೆ. ಮೈಸೂರು ರಾಜ್ಯವು(ಈಗಿನ ಕರ್ನಾಟಕ) ೧೯೫೬ರ ನವೆಂಬರ್ ೧ ರಂದು ನಿರ್ಮಾಣವಾದುದರ ಸಂಕೇತವಾಗಿ ಈ ರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ. ದಕ್ಷಿಣ ಭಾರತದ ಎಲ್ಲಾ ಕನ್ನಡ ಭಾಷೆ-ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸಿ ಒಂದು ರಾಜ್ಯವನ್ನು ಘೋಷಣೆ ಮಾಡಿದ ಈ ದಿನವನ್ನು ಕನ್ನಡಿಗರು ನಾಡಹಬ್ಬವನ್ನಾಗಿ ಆಚರಿಸುತ್ತಾರೆ. ರಾಜ್ಯೋತ್ಸವ ದಿನವನ್ನು ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ರಜಾದಿನವೆಂದು ಪಟ್ಟಿ ಮಾಡಲಾಗಿದೆ ಮತ್ತು ವಿಶ್ವದಾದ್ಯಂತ ಕನ್ನಡಿಗರು ಇದನ್ನು ಆಚರಿಸುತ್ತಾರೆ.

ನವೆಂಬರ್ ೧ ಶುಕ್ರವಾರದ ಸಂಜೆ ನ್ಯೂಜೆರ್ಸಿ ಕನ್ನಡಿಗರಿಗೆಲ್ಲ ಒಂದು ಸಂಭ್ರಮದ ದಿನವಾಗಿತ್ತು. ಕನ್ನಡ ರಾಜ್ಯೋತ್ಸವದ ಆಚರಣೆ ಎಡಿಸನ್ ನಲ್ಲಿರುವ ಅಕ್ಬರ್ ಎಂಬ ರೆಸ್ಟೋರೆಂಟ್ನಲ್ಲಿ ಆಚರಿಸಲಾಯಿತು. ಬೃಂದಾವನ ಕನ್ನಡ ಕೂಟದ ಅಧ್ಯಕ್ಷರಾದ ಸತೀಶ್ ಹೊಸನಗರ ಅವರ ಆಮಂತ್ರಣಕ್ಕೆ ಓಗೂಡಿ ಹಲವಾರು ಕನ್ನಡಿಗರು ಅಲ್ಲಿ ಸೇರಿದ್ದರು .

ಹೊರದೇಶದಲ್ಲಿ ಹೊಸದಾಗಿ ಹಮ್ಮಿಕೊಂಡ ಈ ರಾಜ್ಯೋತ್ಸವದ ಆಚರಣೆ ಎಲ್ಲರಿಗೂ ಸಂತಸ ತಂದಿತು.

ರಾಷ್ಟ್ರಗೀತೆ ಮತ್ತು ನಾಡಗೀತೆಗಳ ಗಾಯನದಿಂದ ಪ್ರಾರಂಭವಾದ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ ಮೋಕ್ಷಗುಂಡಂ ಶೇಷಾದ್ರಿಯವರು ಕನ್ನಡ ಬಾವುಟವನ್ನು ಹಾರಿಸಿ ಹಾರೈಸಿದರು ಹಾಗೂ ಸರ್. ಎಂ. ವಿಶ್ವೇಶ್ವರಯ್ಯ ಅವರ ಸರಳ ಸುಸಂಸ್ಕೃತ ಜೀವನದ ಹಲವು ತುಣುಕುಗಳನ್ನು ಎಲ್ಲರೊಂದಿಗೆ ವಿಸ್ತಾರವಾಗಿ ಹೇಳಿದರು.

ಬೃಂದಾವನ ಬಳಗದವರಾದ ಪ್ರಸನ್ನ ಕುಮಾರ್, ಡಾ!! ರಾಮ್ ಬೆಂಗಳೂರ್ ಇನ್ನು ಹಲವಾರು ಕನ್ನಡಿಗರು ತಮ್ಮ ಕನ್ನಡ ಅಭಿಮಾನ ಮತ್ತು ಅಭಿವೃದ್ಧಿಯ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಿದರು.

ನಂತರ ಪುಷ್ಕಳವಾದ ಊಟ ಮತ್ತು ಮನರಂಜನಾ ಕಾರ್ಯಕ್ರಮಗಳು ಅದ್ಭುತವಾಗಿತ್ತು. ನೆರೆದಿದ್ದ ಪ್ರತಿಯೊಬ್ಬರೂ ಕರೋಕೆ (Karaoke) ಸಂಗೀತದೊಂದಿಗೆ ಭಾವಗೀತೆ, ಭಕ್ತಿಗೀತೆಗಳು ಹಾಗೂ ಹಲವಾರು ಕನ್ನಡ ಚಲನಚಿತ್ರಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಆನಂದಿಸಿದರು.

ಪ್ರಥಮ ಬಾರಿಗೆ ನವೆಂಬರ್ ೧ ರಂದೇ ನೆರವೇರಿದ ರಾಜ್ಯೋತ್ಸವ ಆಚರಣೆಗೆ ಕನ್ನಡಾಂಬೆಯ ಆಶೀರ್ವಾದ ದೊರಕಿರುವುದು ಸತ್ಯ. ಇನ್ನು ಮುಂದೆಯೂ ಈ ಆಚರಣೆಯು ಬೆಳಗಲಿ ಎಂಬುದೇ ನಮ್ಮ ಆಶಯ



# ಕನ್ನಡಾಂಬೆಗೆ ನನ್ನ ನಮನ

ಶ್ರೀ ವಿದ್ಯಾ ಪ್ರಶಾಂತ್



*ಕನ್ನಡಮ್ಮ ನಿನ್ನ ಮಡಿಲಲಿ*
*ಅರಳಿ ಬಂದ ಕುಸುಮ ನಾನು*
*ಮಮತೆ ತೋರಿ ದಯವ ಬೀರಿ*
*ಪೊರೆಯುತಿರುವ ತಾಯಿ ನೀನು*

*ನಿನ್ನ ನುಡಿಯು ಜೇನ ಹನಿಯು*
*ಸ್ವಾತಿ ಮಳೆಯು ಹೃದಯಕೆ*
*ನಿನ್ನ ಪದಗಳ ಪಾಡುತಿರಲು*
*ನಲಿವುದೆಮ್ಮಯ ನಾಲಿಗೆ*

*ನೀ ಎಮಗೆ ಸ್ಪೂರ್ತಿ*
*ಈ ಬಾಳಿಗೆ ಕೀರ್ತಿ*
*ಇರದು ಎಂದಿಗೂ ಭೀತಿ*
*ನಾಡ ಪ್ರಜ್ವಲಿಪ ಜ್ಯೋತಿ*

*ಚಿರರುಣಿಯು ನಾನು*
*ಎಂದೆಂದೂ ನಿನಗೆ*
*ಪುಟಿದೇಳಲಿ ಸದಾ*
*ಕನ್ನಡಮ್ಮ ನಿನ್ನಯ ಕೀರ್ತಿ ಪತಾಕೆ.*





# ನಾನು ಹೋದರೆ ಹೋದೇನು

ಅನಿಲ್ ಭಾರದ್ವಾಜ್

ಒಮ್ಮೆ ಧಾರ್ಮಿಕ ಸಮಾವೇಶವೊಂದರಲ್ಲಿ ವ್ಯಾಸರಾಜರು ನೆರೆದಿದ್ದ ಶಿಷ್ಯವೃಂದವನ್ನು ಕುರಿತು ಕೇಳಿದರು: 'ಇಲ್ಲಿರುವವರಲ್ಲಿ ಯಾರು ಮೋಕ್ಷ ಸೇರುತ್ತಾರೆ?'.ಅದಕ್ಕೆಒಬ್ಬೊಬ್ಬರು ಒಂದೊಂದು ರೀತಿಯ ಉತ್ತರ ಕೊಟ್ಟರಂತೆ. ನಂತರ ಕನಕದಾಸರ ಸರದಿ ಬಂದಾಗ ಅವರು ಸಾದಾವಾಗಿ ನುಡಿದರು , 'ಇಲ್ಲಿ ಯಾರು ಮೋಕ್ಷ ಸೇರುವುದಿಲ್ಲ!' ದಂಗುಬಡಿದಂತಾದ ಶಿಷ್ಯರು 'ಅಹುದೋ ಕನಕ? ನಿನ್ನ ಪ್ರಕಾರ, ವ್ಯಾಸರಾಜರು ಹೋಗುತ್ತಾರೋ ಇಲ್ಲವೋ?' ಕ್ಷೋಭಿತರಾಗಿ ಕೇಳಿದರಂತೆ. ಅದಕ್ಕೆ ಕನಕದಾಸರು, 'ಇಲ್ಲ. ಆದರೆ, ನಾನು ಹೋದರೆ ಹೋದೇನು,' ಎಂದರಂತೆ. ಕನಕದಾಸರ ಈ ಉದ್ಧಟನಕ್ಕೆ ಜನಸಮೂಹ ಕುಪಿತಗೊಂಡರಂತೆ. ಆದರೆ ತಮ್ಮ ಪಟ್ಟ ಶಿಷ್ಯನ ಮನಸ್ಸು ಹಾಗೂ ತಿಳುವಳಿಕೆಯ ಆಳ ಚೆನ್ನಾಗಿ ಅರಿತಿದ್ದ ವ್ಯಾಸರು ಮೆಲುನಗುವಿನಿಂದ ಕನಕರನ್ನು ವಿವರಿಸಲು ಸೂಚಿಸಿದರು. ಆಗ ಕನಕದಾಸರು ಅವರ ಗಾಢವಾದ ಅರ್ಥ ಹೇಳಿದರು. "ನಾನು, ನನ್ನದು ಎಂಬ ಅಹಂಕಾರ 'ಹೋದರೆ ' ಮಾತ್ರ ಮನುಷ್ಯನು ಮೋಕ್ಷಪಥದಲ್ಲಿ ಇದ್ದಾನೆ ಎಂದು. ಇಲ್ಲವೇ, ಎಲ್ಲವೂ ಶುದ್ಧ ವ್ಯರ್ಥ!'

ಇದು ಕನಕದಾಸರ ಶೈಲಿ. ಇದನ್ನು ಅವರು ತಮ್ಮ ಕೃತಿಗಳಲ್ಲಿ ಹಾಗು ದೈನಂದಿನ ಕಾರ್ಯಗಳಲ್ಲಿ ರೂಢಿಗೊಳಿಸಿಕೊಂಡದ್ದು ಕಂಡುಬರುತ್ತದೆ. ವ್ಯಾಸತೀರ್ಥರಿಂದ ಗುರೂಪದೇಶ ಪಡೆದಿದ್ದ ಕನಕದಾಸರು , ಪುರಂದರದಾಸರ ಸಮಕಾಲೀನರಾಗಿದ್ದರು. ಇಬ್ಬರು ಹರಿದಾಸಶ್ರೇಷ್ಠರೂ ಹರಿಸರ್ವೋತ್ತಮತ್ವವನ್ನು, ಹರಿನಾಮ ಕೀರ್ತನೆಯನ್ನು ಹಾಗೂ ಸಮಾಜಕ್ಕೆ ನೈತಿಕ ಸಂದೇಶವನ್ನು ತಮ್ಮದೇ ವಿವಿಕ್ತ ಶೈಲಿಗಳಲ್ಲಿ ಪ್ರಸ್ತುತಿಪಡಿಸಿದ್ದಾರೆ. ಪುರಂದರರು ತಮ್ಮ ಸರಳ ಮತ್ತು ಸಂಕ್ಷಿಪ್ತವಾದ ರೀತಿಯಲ್ಲಿ ಸಂದೇಶ ಸಾರಿದರೆ, ಕನಕರದು ದೀರ್ಘ, ಗೂಢ, ಅನ್ವಯಾರ್ಥಗಳುಳ್ಳ ರಚನೆಗಳೇ ಹೆಚ್ಚು. ಅವರ ಕೃತಿಗಳಲ್ಲಿ ಎದ್ದುನಿಲ್ಲುವ ಮತ್ತೊಂದು ವಿಚಾರವೆಂದರೆ ಸಮಾಜ ಸುಧಾರಣೆಯ ಸಂದೇಶ ಮತ್ತು ಪ್ರತಿಭಟನಾ ಧ್ವನಿ. ಇದೆಲ್ಲವನ್ನೂ  ಸದ್ವೈಷ್ಣವ ಮಾರ್ಗದ ಪಾಲನೆಯ ಸಂದೇಶದೊಂದಿಗೆ ಸೂಕ್ಷ್ಮವಾಗಿ ಕೂಡಿಸಿದ್ದದ್ದು ಅವರ ವೈಶಿಷ್ಟ್ಯ.

ಅವರ ಮೂಲ ಹೆಸರು ತಿಮ್ಮಪ್ಪ ನಾಯಕ; ಪಾಳೇಗಾರರ ವಂಶಸ್ಥರಾದ ಬೀರಪ್ಪ ಮತ್ತು ಬಚ್ಚಮ್ಮ ಅವರಿಗೆ ವಿಜಯನಗರದ ಬಾಡ ಗ್ರಾಮದಲ್ಲಿ, ಕ್ರಿ.ಶ 1509 ನವೆಂಬರ್ ತಿಂಗಳಿನಲ್ಲಿ ಜನಿಸಿದರು ಎಂದು ಮಾಹಿತಿಗಳು ತಿಳಿಸುತ್ತದೆ. ಅವರು ಸುಮಾರು ೧೦೦ ವರ್ಷಗಳ ಕಾಲ ಬಾಳಿದ್ದರು ಎನ್ನಲಾಗಿದೆ. ಅಂದರೆ ಕಳೆದ ನವೆಂಬರ್ ನಲ್ಲಿ ಅವರ ೫೧೦ನೇ ಜಯಂತಿ ನಡೆದಿತ್ತು. ಈ ಸುಸಂದರ್ಭದಲ್ಲಿ ಹರಿದಾಸ ಸಾಹಿತ್ಯಕ್ಕೆ ಹಾಗೂ ಸಮಾಜ ಸುಧಾರಣೆಗೆ ಅವರು ಮಾಡಿರುವ ಕೊಡುಗೆಯ ಒಂದು ಬಹಳ ಕಿರುಪರಿಚಯ ಇಲ್ಲಿದೆ.

*(ಹಿಂದಿನ ಪುಟದಿಂದ...)*

ಕನಕದಾಸರಿಗೂ, ಉಡುಪಿ ಶ್ರೀಕೃಷ್ಣನಿಗೂ ಬಹಳ ವಿಶಿಷ್ಟವಾದ ನಂಟು. ಗುರುಗಳ ಆದೇಶದ ಮೇಲೆ ಒಮ್ಮೆ ಉಡುಪಿಗೆ ಬಂದಿದ್ದರು. ಬ್ರಾಹ್ಮಣೇತರ ಜಾತಿಯವರಾದ್ದರಿಂದ ಅವರಿಗೆ ದೇವಸ್ಥಾನದ ಒಳಗೆ ಹೋಗಲು ಅವಕಾಶ ದೊರೆಯಲಿಲ್ಲ. ಖಿನ್ನರಾದ ಕನಕರು ಅಲ್ಲೇ ಹೊರಗೆ ಬಿಡಾರ ಹೂಡಿ, ಸುಮಾರು ವಾರಗಳು, ನಿರ್ಮಲ ಭಕ್ತಿಯಿಂದ ಕೃಷ್ಣನ ಆರಾಧನೆ ಮಾಡಿದರು. ಹತ್ತಾರು ಕೃಷ್ಣನ ಮೇಲಿನ ಕೃತಿಗಳನ್ನು, ದೇವರ ಮೇಲಿನ ಭಕ್ತಿಗೆ ಜಾತಿ-ಮತದ ಪ್ರತಿಭಂಧಗಳಿಲ್ಲ ಎಂದು ಸಮಾಜ ಸುಧಾರಣೆಯ ಸಂದೇಶ ನೀಡುವ ಪದಗಳನ್ನು ಅಲ್ಲೇ ರಚಿಸಿದ್ದು ಎಂದು ಇತಿಹಾಸಕಾರರು ಹೇಳುತ್ತಾರೆ. ಈ ಸಮಯದಲ್ಲೇ ಆದ ಪವಾಡದಿಂದ, ದೇವಸ್ಥಾನದ ಗೋಡೆ ಸೀಳಾಗಿ, ಶ್ರೀಹರಿಯು ಅವರಿಗೆ ಸಾಕ್ಷಾತ್ ದರ್ಶನ ಕೊಟ್ಟನು. ಅಂದಿನಿಂದ ಗೋಡೆಯಲ್ಲಿದ್ದ ಸೀಳು 'ಕನಕನ ಕಿಂಡಿ' ಎಂದೇ ಪ್ರಸಿದ್ಧವಾಗಿ, ಈಗಲೂ ಶ್ರೀಕೃಷ್ಣನ ದರ್ಶನಕ್ಕೆ ಬರುವ ಭಕ್ತರು ಕಿಂಡಿಯಿಂದ ಮೊದಲ ದರ್ಶನ ಮಾಡಿ ಮುನ್ನಡೆಯುತ್ತಾರೆ. ದೇವರನ್ನು ಮೆಚ್ಚಿಸಲು ಅವನ ಮೇಲೆ ಅಚಲವಾದ ಭಕ್ತಿಯೊಂದೇ ಸಾಕು, ಜಾತಿ-ಮತಗಳ ಕ್ಷುಲ್ಲಕ ಸೀಮೆಗಳಿಂದ ಅತೀತವಾದದ್ದು ದೈವಭಕ್ತಿ ಎಂಬ ಮಹತ್ವದ ಸಂದೇಶ ಸಾರುವ ಸಂಕೇತವಾಗಿದೆ ಆ ಕನಕನ ಕಿಂಡಿ.

***ಇಷ್ಟು ದಿನ ಈ ವೈಕುಂಠ ಎಷ್ಟು ದೂರವೊ ಎನ್ನುತಲಿದ್ದೆ***
***ದೃಷ್ಟಿಯಿಂದಲಿ ನಾನು ಕಂಡೆ ಸೃಷ್ಟಿಗೀಶನ ಶ್ರೀರಂಗಶಾಯಿ ।ಪ।***

ಈ ರಚನೆಯಲ್ಲಿ ಭಕ್ತಿಯ ದೃಷ್ಟಿಯಿಂದ ನೋಡಿದರೆ ವೈಕುಂಠವಾಸಿ ಶ್ರೀರಂಗನು ಅಲ್ಲೇ ದರ್ಶನ ಕೊಡುತ್ತಾನೆ ಎಂದು ಹೇಳಿದ್ದಾರೆ. ಮುಂದೆ ಈ ಹಾಡಿನಲ್ಲಿ ಬರುವ ಚರಣಗಳ ಒಳಾರ್ಥವನ್ನು ಪಂಡಿತರೊಬ್ಬರು ಸುಮಾರು ಒಂದು ಗಂಟೆಗಳ ಕಾಲ ವಿವರಿಸಿರುವ ಪ್ರವಚನಗಳಿವೆ . ಅದು ಕನಕದಾಸರ ಶಾಸ್ತ್ರ ಪಾಂಡಿತ್ಯದ ಆಳದ ಒಂದು ಸಣ್ಣ ನಿದರ್ಶನ. ಕೆಳಗೆ ಅದರ ಒಂದು ಚರಣ:

***ಎಂಟು ಏಳನು ಕಳೆದುದರಿಂದೆ***
***ಬಂಟರೈವರ ತುಳಿದುದರಿಂದೆ***
***ಕಂಟಕನೊಬ್ಬನ ತರಿದುದರಿಂದೆ***
***ಬಂಟನಾಗಿ ಬಂದೆನೊ ಶ್ರೀರಂಗಶಾಯಿ ।ಚ।***

ಅದೇ ನಾರಾಯಣ ಸರ್ವಾಂತರ್ಯಾಮಿ ಎಂಬ ವಿಷಯವನ್ನು ಇನ್ನೊಂದು ಕೃತಿಯಲ್ಲಿ ಬಹಳ ಸುಂದರವಾಗಿ ವರ್ಣಿಸಿದ್ದಾರೆ.

***ಎಲ್ಲಿ ನೋಡಿದರಲ್ಲಿ ರಾಮ ಇದ ಬಲ್ಲ ಜಾಣರ ದೇಹದೊಳಗೆ ನೋಡಣ್ಣ ।ಪ।***

***ಬೊಮ್ಮ ಮಾಡಿದ ತನುಬಿಟ್ಟು ವಿಶ್ವ ಕರ್ಮನು ಮಾಡಿದ ಬೊಂಬೆಯನಿಟ್ಟು***
***ಸುಮ್ಮನೆ ಕೂಗುಗಳಿಟ್ಟು ಅದ ನಂಬುವನೆಂಬೋನು ಹೋಹ ಕಂಗೆಟ್ಟು ।ಚ।***

ರಾಮದೇವರು ಎಲ್ಲೆಲ್ಲೂ ಇರುವನು ಎಂಬ ಮರ್ಮವನ್ನರಿತಿರುವ ಬುದ್ಧಿವಂತರಲ್ಲಿ ಅವನನ್ನು ನೋಡು ಎಂದಿದ್ದಾರೆ. ಬ್ರಹ್ಮ ಸೃಷ್ಟಿಸಿದ ಸ್ವದೇಹದಲ್ಲಿ ಬಿಂಬರೂಪಿ ಪರಮಾತ್ಮನು ಸರ್ವಕಾಲ ಇರುವನೆಂಬ ಅರಿವಿಲ್ಲದೆ, ಶಿಲ್ಪಿಯೊಬ್ಬ ಮಾಡಿದ ರಾಮದೇವರ ಬೊಂಬೆಯನ್ನಿಟ್ಟುಕೊಂಡು ವೃಥಾ ಮಂತ್ರ-ಸ್ತೋತ್ರಗಳ ಗದ್ದಲ ಮಾಡಿದರೆ, ಆ ಪರಮಾತ್ಮನು ನಂಬುವನು ಎನ್ನುವ ಮನುಷ್ಯನು ಪರಮಾರ್ಥದ ಗುರಿಮುಟ್ಟದೆ ದಿಕ್ಕು-ದೆಸೆ ಇಲ್ಲದೆ ತಿರುಗುವನು.

ಕನಕದಾಸರು ಶ್ರೀಕೃಷ್ಣಲೀಲೆಯ ಮೇಲೆ ಹತ್ತಾರು ಸೊಗಸಾದ ಹಾಡುಗಳನ್ನು ರಚಿಸಿದ್ದಾರೆ. ***'ಇಂದು ಸೈರಿಸಿರಿ ಕೃಷ್ಣನ ತಪ್ಪ', 'ಈತನೀಗ ವಾಸುದೇವನು ಲೋಕದೊಡೆಯ ', 'ಎಂಥ ಟವಲಿಗಾರನಮ್ಮ ನಂದಗೋಪ್ಯಮ್ಮ', 'ಗೊಲ್ಲರಾಮನೆಯ ಪೊಕ್ಕು ಗುಲ್ಲು ಮಾಡುವುದೇನಲ ', 'ನೋಡು ನೋಡು ಗೋಪಿ ನಿನ್ನ ಮಗನ ಲೂಟಿಯ ', 'ಮಗುವು ಕಾಣೆರಯ್ಯ ಮಾಯದ ಮಗುವು ಕಾಣೆರಯ್ಯ ', 'ಸೈಯೇ ಇದು ಸೈಯೇ ಗೋಪಿ ',*** ಇತ್ಯಾದಿ. ಇದರಲ್ಲಿ ಬಹಳ ಆಕರ್ಷಕ ಹಾಗು ಸ್ವಾರಸ್ಯಕರವಾದ ಒಂದು ಹಾಡು ***'ನೆರೆದು ಗೋಪಿಯರೆಲ್ಲರು'***. ಇದರಲ್ಲಿ ಒಂದು ಚರಣದಲ್ಲಿ ಗೋಪಿಕಾಸ್ತ್ರೀಯರು ಯಶೋಧೆಯಲ್ಲಿ ಕೃಷ್ಣನ ಮೇಲೆ ದೂರಿಡುವುದಾದರೆ , ಅದರ ಮುಂದಿನ ಚರಣದಲ್ಲಿ ಮುದ್ದು ಕೃಷ್ಣ ಅದಕ್ಕೆ ಪ್ರತ್ಯುತ್ತರವಾಗಿ, ಆ ಕೃತ್ಯಗಳನ್ನು ಚಿಕ್ಕ ಬಾಲಕ ನಾನು ಹೇಗೆ ಮಾಡಬಲ್ಲೆ ಎಂದು ಅಮ್ಮನನ್ನೇ ಕೇಳುತ್ತಾನೆ.

***ನೆರೆದು ಗೋಪಿಯರೆಲ್ಲರು -ಕೃಷ್ಣಯ್ಯನ ಕರವನು ಪಿಡಿದುಕೊಂಡು***
***ಭರದಿಂದ ಬಂದು ಯಶೋದೆಗೆ ಚಾಡಿಯ ಅರುಹಿದರತಿವೇಗದಿ ।ಪ।***

***ಬಲುಕಳ್ಳ ನಿನ್ನ ಮಗ ತಾಟಕನಿವ ಬಲು ಕದ್ದ ನವನೀತವ***
***ತೊಲೆಗೆ ನಿಚ್ಚಣಿಕೆಯ ಹಾಕದೆ ಕುಡಿವನು ನೆಲುವಿನ ಪಾಲ್ಮೊಸರ ।೧।***

***ಅಮ್ಮಯ್ಯ ಇಲ್ಲ ಕಾಣೆ ಇವಳು ಎನ್ನ ಸುಮ್ಮನೆ ದೂರುವಳೆ***
***ಹಮ್ಮಿಂದ ನಾನವಳ ಅಟ್ಟಕ್ಕೆ ನೆಗೆಯಲು ಬೊಮ್ಮ ಜಟ್ಟಿಗನಲ್ಲವೆ ? ।೨।***

'ನಿನ್ನ ಕಳ್ಳ, ದುಷ್ಟನಾದ ಮಗ, ಛಾವಣಿಯ ತೊಲೆಗೆ ಕಟ್ಟಿದ್ದ ಹಸನಾದ ಹಾಲು-ಮೊಸರನ್ನು, ಏಣಿಯೂ ಹಾಕಿಕೊಳ್ಳದೆ, ಅದು ಹೇಗೋ ಕುಡಿದುಹಾಕಿಬಿಡುತ್ತಾನೆ,' ಎಂದು ಗೋಪಿಯರು ಹೇಳಿದರೆ, 'ಇಲ್ಲ ಅಮ್ಮ, ಇವಳು ಸುಮ್ಮನೆ ದೂಷಿಸುತ್ತಿದ್ದಾಳೆ, ದೊಡ್ಡ ಆಕಾರ ಧರಿಸಿ ಅವಳ ಅಟ್ಟದ ಮೇಲೆ ಹಾರಲು ನಾನೇನು ಬ್ರಹ್ಮನೇ? (ದೇವರೇ?) ಇಲ್ಲವೇ ಪೈಲವಾನನೇ?,' ಎಂದು ನವನೀತಚೋರ ಕೃಷ್ಣ ಚತುರತನದಿಂದ ತನ್ನ ತಾಯಿಯನ್ನೇ ಪ್ರಶ್ನಿಸುತ್ತಾನೆ. ಹೀಗೆ ಆ ಕೃತಿಯಲ್ಲಿ ವಾದ-ವಿವಾದ ಅಂದವಾಗಿ ಬಹಳಷ್ಟು ಮುಂದುವರೆಯುತ್ತದೆ.

*(ಮುಂದಿನ ಪುಟದಲ್ಲಿ)*

*(ಹಿಂದಿನ ಪುಟದಿಂದ...)*

ಬದುಕುವ ರೀತಿಯನ್ನು ತಿಳಿಸುವ ಅವರ ಒಂದೆರಡು ಕೃತಿಗಳು:

***ಅಹುದಾದರಹುದೆನ್ನಿ ಅಲ್ಲವಾದರಲ್ಲವೆನ್ನಿ***
***ಬಹುಜನರು ನೆರೆ ತಿಳಿದು ಪೇಳಿ ಮತ್ತಿದನು /ಪ /***

***ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸು***
***ನಿರ್ಮಲಿಲ್ಲದ ಮನಸು ತಾ ಕೊಳಚೆ ಹೊಲಸು***
***ಕರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು***
***ಮರ್ಮವಿಲ್ಲದ ಮಾತು ಒಡಕು ಮಡಕೆಯ ತೂತು /ಚ /***

ನ್ಯಾಯ, ಧರ್ಮ ಪಾಲಿಸದ ರಾಜ, ಕಾಲು ಮುರಿದ ಸುಪ್ಪತ್ತಿಗೆಯಂತೆ, ನಿರ್ಮಲವಾಗಿಲ್ಲದ ಮನಸ್ಸು ಕೊಳಚೆಯಂತೆ, ಉದ್ಯೋಗವಿಲ್ಲದ ಪುರುಷನು ಬರೀ ಒನಕೆಯ ತುಂಡಿನಂತೆ ಹಾಗು ಹೃದಯ ಅಥವಾ ತಿರುಳಿಲ್ಲದ ಮಾತುಗಳು ಒಡೆದ ಮಡಿಕೆಯ ತೂತಿನಂತೆ.ಎಲ್ಲವೂ ಉಪಯೋಗಕ್ಕೆ ಬಾರದ ವ್ಯರ್ಥವಾದ ವಸ್ತುಗಳಾಗುತ್ತವೆ.ಒಪ್ಪಿದರೆ ಒಪ್ಪಿ, ಇಲ್ಲವಾದರೆ ಇಲ್ಲ ಎನ್ನಿ, ಎಂದು ಪದವನ್ನು ಕೇಳಿದವರು  ಆಲೋಚಿಸಲು ಬಿಡುತ್ತಾರೆ.

ಕನಕದಾಸರು  ಜ್ಞಾನ, ಭಕ್ತಿ, ಮತ್ತು ವೈರಾಗ್ಯಗಳ ಕ್ರಮಗಳನ್ನು ಬಹಳ ಸುಂದರವಾಗಿ, ಮನಸ್ಸಿಗೆ ನಾಟುವಂತೆ ಬರೆದಿದ್ದಾರೆ.

***ಈ ಸಿರಿಯ ನಂಬಿ ಹಿಗ್ಗಲು ಬೇಡ***
***ವಾಸುದೇವನ ಭಜಿಸೋ ಒರಟು ಜೀವನವೆ /ಪ/***

***ಮಡದಿ ಮಕ್ಕಳು ಎಂಬ ಮಾಯಾ ಸಂಸಾರಕ್ಕೆ***
***ಸಡಗರವಗೊಂಡು ಬರಿದೆ ಭ್ರಮಿಸಲೇಕೆ***
***ಬಿಡದೆ ಯಮನಾಳುಗಳು ಬಾರೆಂದು ಎಳೆವಾಗ***
***ಮಡದಿ ಮಕ್ಕಳು ಬಹರೆ ಭಂಡ ಜೀವನವೆ /ಚ/***

ಪ್ರಪಂಚದ ಸಿರಿ-ಸಂಪತ್ತುಗಳು, ಸಂಸಾರ ಸುಖಗಳಲ್ಲಿ ಮಗ್ನನಾಗಿರದೆ, ಹೆಚ್ಚಿನ ಐಶ್ವರ್ಯವನ್ನು ಬಡಬಗ್ಗರಿಗೆ ಹಂಚಿ, ಕಾಗಿನೆಲೆಯಾದಿ ಕೇಶವನ ಭಜಿಸು ಭ್ರಷ್ಟ ಜೀವನವೆ ಎಂದು ಗದರಿಸಿಯೇ ಹೇಳಿದ್ದಾರೆ.

***ಆರಿಗಾರಿಲ್ಲ ಆಪತ್ಕಾಲದೊಳಗೆ***
***ವಾರಿಜಾಕ್ಷನ ನಾಮ ನೆನೆ ಕಂಡ್ಯ ಮನವೇ  /ಪ/***

***ಪಂಥದಲಿರುವಾಗ ಪದವಿ ತಪ್ಪಿರುವಾಗ***
***ದಂತಿ ಮದವೇರಿ ಬೆನ್ನಟ್ಟಿದಾಗ***
***ಕಂತುಪಿತ ಕಾಗಿನೆಲೆಯಾದಿಕೇಶವನ***
***ನಿ ಶ್ಚಿಂತೆಯಿಂದಲಿ ನೀನು ನೆನೆಕಂಡ್ಯ ಮನವೆ /ಚ/***

ಬದುಕಿನಲ್ಲಿ ಕಷ್ಟಗಳು ಬಂದಾಗ, ಆಪತ್ಕಾಲದಲ್ಲಿದ್ದಾಗ ನರೇತರರನ್ನು ಅವಲಂಬಿಸದೆ, ಹರಿನಾಮ ಸ್ಮರಣೆ ಮಾಡುವುದು ಉತ್ತಮ ಎಂದಿದ್ದಾರೆ.

ನಿಂದಾಸ್ತುತಿಗಳು

***ಯಾವ ಸಿರಿಯಲಿ ನೀನು ಎನ್ನ ಮರೆತೆ ?***
***ದೇವ  ಜಾನಕಿರಮಣ ಪೇಳು  ರಘುಪತಿಯೆ? /ಪ/***

***ಭೂಮಿಯನು ಮೂರಡಿಯ ಮಾಡಿದೆನೆಂಬ ಸಿರಿಯೆ***
***ಕಾಮ ನಿನ್ನ ಸುತನಾದನೆಂಬ ಸಿರಿಯೆ***
***ಆ ಮಹಾಲಕುಮಿ ನಿನ್ನ ಸತಿಯಾದಳೆಂಬ ಸಿರಿಯೆ***
***ಪ್ರೇಮದಲಿ ಹೇಳೆನಗೆ ಸ್ವಾಮಿ ಅಚ್ಯುತನೆ  /ಚ/***

***ನೀನಾರ ಭಾಂದವನೋ ನಿಖಿಳ ಯಾದವರೊಳಗೆ***
***ಮಾನಾಭಿಮಾನ ಇನಿತಿಲ್ಲ ನಿನ್ನೊಳಗೆ /ಪ/***

***ದೇವಕಿದೇವಿಯುದರದಿ ಜನಿಸಿ ಬಾಲ್ಯದಲಿ***
***ಓವಿ ಮೊಲೆಯೂಡಿದವಳಸುವ ಸೆಳೆದು***
***ಮಾವಕಂಸನ ಕೊಂದು ಮನುಜ ವೇಷದಲಿ ಗಾಂ -***
***ಡೀವಿಯಾ ರಥದ ಬಂಡಿಯ ಬೋವನಾದೆ /ಚ/***

ಇನ್ನು ಯಮಾಂಶ ಸಂಭೂತರಾದ ಕನಕದಾಸರ ಕೆಲವು ಸುಪ್ರಸಿದ್ಧ ಹಾಡುಗಳಾದ, ***'ನಮ್ಮಮ್ಮ ಶಾರದೆ ಉಮಾಮಾಹೆಶ್ವರಿ', ,'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ ', 'ಕುಲ ಕುಲ ಕುಲವೆಂದು ಹೊಡೆದಾಡದಿರಿ', 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ ', 'ತಲ್ಲಣಿಸದಿರು ಕಂಡ್ಯಾ ತಾಳು ಮನವೆ', 'ತೊರೆದು ಜೀವಿಸಬಹುದೇ ಹರಿ ನಿನ್ನ ಚರಣವ', 'ನಿನ್ನ ನೋಡಿ ಧನ್ಯನಾದೆನೋ ಹೇ ಶ್ರೀನಿವಾಸ',  'ಸತ್ಯವಂತರ ಸಂಗವಿರಲು ತೀರ್ಥವೇತಕೆ?'*** ಇತ್ಯಾದಿ ಕನ್ನಡಿಗರ, ಸಂಗೀತಪ್ರಿಯರ ಮನೆಮನೆಗಳಲ್ಲಿ ರಾರಾಜಿಸಿ, ಅವರ ಮನಗಳಿಗೆ ಬಹಳ ಕಾಲದಿಂದ ಸುಖ ಸಂತೋಷ ಉಣಬಡಿಸುತ್ತಿದೆ.

ಯಮಾಂಶಸ್ಯ ಪರಾ ಭಕ್ತ್ಯಾ ಸುಪ್ರಸನ್ನೋ ಹರಿ: ಸ್ವಯಂ ।
ಯಸ್ಯಾಚಾರ್ಯೋ ವ್ಯಾಸರಾಜ: ತಂ ವಂದೇ ಕನಕಾಭಿದಂ ।।



ರಚನೆ : ಜಿಯಾ ಹುಲಿಕೆರೆ



ರಚನೆ : ಮನಸ್ವಿ ಸೋಮಯಾಜಿ




ರಚನೆ : ಸನ್ಮಯಿ ಸೋಮಯಾಜಿ



ರಚನೆ: ಸಾನ್ವಿ ಕಮಲೇಶ್






# ಬಿಡೇ !!!

ಸುಬ್ರಹ್ಮಣ್ಯ (ಸುಬ್ಬು) ಸೋಮಯಾಜಿ

ಏನಿದು "ಬಿಡೇ" ಅಂತ ಶೀರ್ಷಿಕೆ. ಏನು ಬಿಡೋದು ಎನ್ನುವ ಕುತೂಹಲವೆ ? ಹಾಗೇ  ಓದಿ … .

ಅಮೆರಿಕಕ್ಕೆ ಮೊದಲು ಬಂದಾಗ ಟಾಯ್ಲೆಟ್ಟಿನಲ್ಲಿ ತೊಳೆದುಕೂಳ್ಳಲು ನೀರು ಇಲ್ಲದೆ , ಕಾಗದ (toilet ಪೇಪರ್) ಉಪಯೋಗಿಸುವಾಗ ಆದ ಅನುಭವ ನೆನಪಿರಬಹುದು. ರೂಢಿಯಾಗಲು ಬಹಳ ದಿನಗಳೇ ಹಿಡಿಯಿತು. ಅನೇಕರು ಬೇರೆ ಬೇರೆ ಉಪಾಯಗಳನ್ನು ಮಾಡಿಕೊಂಡಿದ್ದಿದೆ. ಕೆಲವರು ಪ್ರಾತಃಕಾರ್ಯ ಆದ ಕೂಡಲೇ ಸ್ನಾನ ಮಾಡಿದ್ರೆ , ಇನ್ನು ಕೆಲವರು ಚೊಂಬು /ಮಗ್, ಒದ್ದೆ ಕಾಗದ ಇತ್ಯಾದಿ ಮೊರೆ ಹೋಗಿದ್ದುಂಟು. ಭಾರತದಿಂದ ಬಂದ ಹಿರಿಯರಿಗಂತೂ ಬಹಳ ಕಷ್ಟ . ಅಮೆರಿಕಕ್ಕೆ ಬರುವವರಿಗೆ "*ಏನ್ರೀ ಅಲ್ಲಿ ಬರೀ ಒಸ್ಕೊಳ್ಳುವುದಂತೆ , ತೊಳ್ಕೊಳ್ಳುವುದಿಲ್ಲವಂತೆ!*" ಎಂದು ತಮಾಷೆ ಮಾಡಿದ್ದೂ ಇದೆ.

ನೀರಿನಲ್ಲಿ ತೊಳೆಯದೆ ಶುಚಿಯ ಅನುಭವ ಆಗದವರಿಗೆ ಒಂದು ಆಶಾಕಿರಣ “ಬಿಡೇ"(bidet). ಬಿಡೇ ಬಗ್ಗೆ ಮೊದಲು ಒಂದಿಷ್ಟು ಮಾಹಿತಿ.

*ಬಿಡೇ ಶೌಚಾಲಯಕ್ಕೆ (ಟಾಯ್ಲೆಟ್) ಜೋಡಿಸಿದ ಒಂದು ಉಪಕರಣವಾಗಿದೆ. ಬಿಡೇ ಮಾಡುವ ಕೆಲಸ ನೀರನ್ನು ಸಿಂಪಡಿಸಿ ಪೃಷ್ಠ ಭಾಗವನ್ನು ಶುಚಿಗೊಳಿಸುವುದು. ಭಾರತದಲ್ಲಿ ಕಮೋಡ್ ಟಾಯ್ಲೆಟ್ಟಿಗೆ ಪ್ರತ್ಯೇಕ ಸ್ಪ್ರೇ ಗನ್ ಅಳವಡಿಸಿರುತ್ತಾರೆ. ಆದರೆ ಅದನ್ನು ಕೈಯಲ್ಲಿ ಹಿಡಿದುಕೊಳ್ಳಬೇಕು. ಅದರಿಂದ ಕೈ ಒದ್ದೆ, ನೆಲದ ಮೇಲೆಲ್ಲಾ ನೀರು, ಬಟ್ಟೆ ಒದ್ದೆಯಾಗುವ ಸಾಧ್ಯತೆ.*

*ಯುರೋಪ್, ಜಪಾನ್ ದೇಶಗಳಲ್ಲಿ ಶೇ ೭೦ ಕ್ಕಿಂತಲೂ ಹೆಚ್ಚು ಜನರು ಬಿಡೇ ಉಪಯೋಗಿಸುತ್ತಾರೆ. ಅಮೇರಿಕಾದಲ್ಲಿ ಇತ್ತೀಚೆಗೆ ಬಿಡೇ ಬಳಕೆ ಹೆಚ್ಚುತ್ತಿದೆ. ತೊಳೆಯುವುದರಿಂದ ಶುಚಿತ್ವ ಹೆಚ್ಚಿ, ಅರೋಗ್ಯಕ್ಕೂ ಉಪಯೋಗ. ಕಾಗದ ಬಳಕೆ ಕಡಿಮೆಯಾಗಿ ಪ್ರಕೃತಿಗಗೂ ಕಡಿಮೆ ಹಾನಿ, ಹಣ ಉಳಿತಾಯ ಕೂಡ. ಕಡಿಮೆ ಬೆಳೆಯ ಟಾಯ್ಲೆಟ್ ಜೋಡಣೆಯಿಂದ (ಅಟ್ಯಾಚ್ಮೆಂಟ್) ಹಿಡಿದು, ಸಾವಿರಾರು ಡಾಲರ್ ಬೆಳೆಯ ಐಷಾರಾಮಿ ಬಿಡೇ ವಿನ್ಯಾಸಗಳು ಲಭ್ಯ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: https://en.wikipedia.org/wiki/Bidet*

ಅಷ್ಟರಲ್ಲಿ ನಮ್ಮ ಟೆಕ್ನಾಲಜಿ ಎಕ್ಸ್ಪರ್ಟ್ ಮಿತ್ರರು "**ಅಲೆಕ್ಸಾ ಬಿಡೇ** " ಎಂದು ಘೋಷಿಸಿದರು. ..

ಕನ್ನಡದಲ್ಲಿ "**ಅಲೆಕ್ಸಾ, ಬಿಡೇ ಬಿಡೇ ನೀರ್ ಬಿಡೇ**" ಎಂದು ಹೇಳಿದರೆ ಹೇಗೆ..

ಯಾರಾದ್ರೂ ಹ್ಯಾಕ್ ಮಾಡಬಹುದಾ …

ಎಲ್ಲಾ ಬಿಟ್ಟು ಬಿಡೇ ಬಗ್ಗೆ ಏಕೆ ಲೇಖನ ಅಂತೀರಾ? ಇದಕ್ಕೊಂದು ತಮಾಷೆಯ ಹಿನ್ನೆಲೆ ಹೀಗಿದೆ. ಡಿಸೆಂಬರ್ ೭ರ ಬೃಂದಾವನ ಕನ್ನಡ ಕೂಟದ ಮಕ್ಕಳೋತ್ಸವ

ಕಾರ್ಯಕ್ರಮದಲ್ಲಿ ಗೀತಾ ಮೋಹನ್ ಅವರ ನೃತ್ಯ  ನಿರ್ದೇಶನದಲ್ಲಿ ನಾವು ಸ್ನೇಹಿತರು ಒಟ್ಟಾಗಿ ಸ್ನೇಹಲೋಕ ನೃತ್ಯ ಮಾಡಿದ್ದೆವು (ಮೊಟ್ಟೆ ಡಾನ್ಸ್ ನಿಮಗೆಲ್ಲಾ ನೆನಪಿರಬಹುದು). ಅದರ ನೆನಪಿಗಾಗಿ ನಮ್ಮ ಮನೆಯಲ್ಲಿ ಪಾಟ್ ಲಕ್ ಔತಣ ಏರ್ಪಾಡಾಗಿತ್ತು. ಎಲ್ಲರೂ ರುಚಿ ರುಚಿಯಾದ ಅಡಿಗೆ ಮಾಡಿ ತಂದಿದ್ದರು. ಊಟದ ಜೊತೆಗೆ ಪುರುಷರ, ಮಹಿಳೆಯರ ಮತ್ತು ಮಕ್ಕಳ ನೃತ್ಯ ಕುಣಿದಾಟ. ಇದರ ಮಧ್ಯೆ ಅತಿಥಿಗಳಿಗೆ ಮನೆ ತೋರಿಸುವಾಗ ಇತ್ತೀಚೆಗಷ್ಟೇ ಜೋಡಿಸಿದ್ದ ಬಿಡೇ ಉಪಕರಣದ ರಟ್ಟಿನ ಡಬ್ಬ ಎಲ್ಲರ ಕಣ್ಣಿಗೆ ಬಿತ್ತು. ನಮ್ಮ ಮೋಹನ್ ಕೇಳ್ಬೇಕಲ್ಲ. ಅವರ ಮನೆಯ ಬಿಡೇ ಕಥೆ ಹೇಳಲು ಶುರು ಮಾಡಿದ್ರು. ಎಲ್ಲರ ಕುತೂಹಲ ಹೆಚ್ಚಿತು. ಹಲವಾರು ಪ್ರಶ್ನೆಗಳು, ಜೋಕುಗಳು, ವಿಪರೀತ ಊಹೆಗಳು, ಹೀಗೆ ಸುಮಾರು ಅರ್ಧ ಗಂಟೆ ಬರೀ ಬಿಡೇ ಬಿಡೇ ಎಂದು ಹೊಟ್ಟೆ ಹುಣ್ಣಾಗುವಷ್ಟು ನಕ್ಕಿದ್ದೇ. ಒಬ್ಬರು ಅದು ನೋಡಲು ಹೇಗಿರುತ್ತೆ ಅಂದ್ರೆ , ಮತ್ತೊಬ್ಬರು ಅದರಲ್ಲಿ ಬಿಸಿನೀರು ಬರುತ್ತಾ ಅಂತ ಪ್ರಶ್ನೆ . ಗಾಳಿ ಬೀಸಿ ನೀರನ್ನು ಒಣಗಿಸುತ್ತಾ ಅನ್ನುವ ಕುತೂಹಲ ಇನ್ನೊಬ್ಬರಿಗೆ. ಮಹನೀಯರೊಬ್ಬರು ಕೇಳಿದ್ರು ಅದರಲ್ಲಿ ಸೆಂಟ್ ಸ್ಪ್ರೇ ಆಗುತ್ತಾ ಅಂತ. ನಾನು ಒಂದೊಂದೇ ವಿವರಣೆ ಕೊಟ್ಟೆ. ಹೇಗೆ ಅದರಲ್ಲಿ ಬಿಸಿ ಸೀಟ್ ಇದೆ, ಬಿಸಿನೀರು ಬರುತ್ತೆ, ಗಾಳಿ ಬೀಸುತ್ತೆ, ಲೈಟ್ ಬರುತ್ತೆ, ಮಕ್ಕಳಿಗೆ ಬೇರೆ ಸೆಟ್ಟಿಂಗ್ಸ್ ಇದೆ. ಎಲ್ಲವನ್ನು ರಿಮೋಟ್ ಕಂಟ್ರೋಲ್ ನಿಂದ ಚಲಿಸಬಹುದು. ಕೈಯಲ್ಲಿ ಮುಟ್ಟುವ ಕೆಲಸವಿಲ್ಲ. ಕಾಗದ ಬೇಕಿಲ್ಲ. ಜೋಡಿಸುವುದು ತುಂಬಾ  ಸುಲಭ ಇತ್ಯಾದಿ. ಅಷ್ಟರಲ್ಲಿ ನಮ್ಮ ಟೆಕ್ನಾಲಜಿ ಎಕ್ಸ್ಪರ್ಟ್ ಮಿತ್ರರು "**ಅಲೆಕ್ಸಾ ಬಿಡೇ** " ಎಂದು ಘೋಷಿಸಿದರು. ಎಲ್ಲರಿಗೂ ಅಲೆಕ್ಸಾ ಧ್ವನಿ ನಿಯಂತ್ರಿತ ಬಿಡೇ ಇದ್ರೆ ಹೇಗೆ, ಕನ್ನಡದಲ್ಲಿ "ಅಲೆಕ್ಸಾ, ಬಿಡೇ ಬಿಡೇ ನೀರ್ ಬಿಡೇ" ಎಂದು ಹೇಳಿದರೆ ಹೇಗೆ ಎಂಬ ಕಲ್ಪನೆ. ಬೇರೆ ಯಾರಾದ್ರೂ ಹ್ಯಾಕ್ ಮಾಡಬಹುದಾ ಅಂತ ಅನುಮಾನ. ರಿಮೋಟ್ ಬ್ಯಾಟರಿ ಅಥವಾ ಕರೆಂಟ್ ಕೈ ಕೊಟ್ರೆ, ಕಾಗದ ಇಲ್ಲದಿದ್ರೆ ಅವಸ್ಥೆ  ಏನು  ಅನ್ನುವ ಹೆದರಿಕೆ. ಎಲ್ಲರಿಗೂ ಬಿಡೇ ತೋರಿಸಿದ್ದಾಯ್ತು.

ಆದರೆ ಅದು ಹೇಗೆ ಕೆಲಸ ಮಾಡುತ್ತೆ ಅನ್ನುವ ಪ್ರಶ್ನೆಗೆ ಉತ್ತರ ಕೊಡೋದೇ ಫಜೀತಿ. ಅದರ ಮೇಲೆ ಕುಳಿತರೆ ಮಾತ್ರ ಬಿಡೇ ಕೆಲಸ ಮಾಡೋದು - ಪ್ರಾತ್ಯಕ್ಷಿಕೆ (ಡೆಮೋ) ಹೇಗೆ ತೋರಿಸೋದು? ಇದೊಂದು ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು (**ಸಧ್ಯ !!**)

ಅನಿರೀಕ್ಷಿತವಾಗಿ ನುಸುಳಿದ ಬಿಡೇ ವಿಷಯ ಎಲ್ಲರಿಗೂ ಸಾಕಷ್ಟು ಮನರಂಜನೆ ಹಾಗೂ ಮಾಹಿತಿ ನೀಡಿತು. ಇದೊಂದು ಮರೆಯಲಾಗದ ತಮಾಷೆ ಅನುಭವ.

ಚಿಕ್ಕಂದಿನಲ್ಲಿ ತಂಬಿಗೆ ಹಿಡಿದು ತೋಟದ ಕಡೆ ಓಡುವುದರಿಂದ ಶುರುವಾಗಿ ಈಗ ಮನೆಯಲ್ಲೇ ಬಿಸಿ ಟಾಯ್ಲೆಟ್  ಸೀಟಿನ ಮೇಲೆ ಕುಳಿತು ರಿಮೋಟ್ ಕಂಟ್ರೋಲ್ನಿಂದ ಬಿಸಿನೀರು ಸಿಂಪಡಿಸಿ ತೊಳೆದು ಕೊಳ್ಳುವ ವರೆಗೆ ಬಂದಿದೆ ಜೀವನ. ಇನ್ನು ಮುಂದೆ ಏನೇನು ಆಗೋದು ಇದೆಯೋ :)






PS: Costco ದಲ್ಲಿ ಹಲವಾರು ಬಿಡೇ ಮಾಡೆಲ್ ಗಳಿವೆ, ಕೆಲವಕ್ಕೆ ಒಳ್ಳೆ ಡಿಸ್ಕೌಂಟ್ ಸಹ ಇದೆ. ನಿಮಗೆ ಆಸಕ್ತಿ ಇದ್ದರೆ  ಇಲ್ಲಿ ನೋಡಿ: https :// www.costco.com/CatalogSearch?dept=All&keyword=bidet







# *ಶ್ರೀ ಕೃಷ್ಣ ದ್ರೌಪದಿ ಸಂವಾದ*

*ರಘು ರಾಯಸಂ ಮತ್ತು ದೀಪ್ತಿ ಗಡ್*

ಪಾಂಡವರು ವನವಾಸದಲ್ಲಿ ಇದ್ದಾಗ, ಒಂದು ದಿನ ಶ್ರೀಕೃಷ್ಣ ಪರಮಾತ್ಮನು ಯೋಗ ಕ್ಷೇಮವನ್ನು ವಿಚಾರಿಸಲು ಪಾಂಡವರ ಮನೆಗೆ ಬಂದನು. ದ್ರೌಪದಿ ಕೃಷ್ಣನನ್ನು ಪರಾಮರ್ಶಿಸಲು ಬರಲೇ ಇಲ್ಲ. ಆಗ ಶ್ರೀಕೃಷ್ಣನು ನೀರು ಕುಡಿಯುವ ನೆಪದಲ್ಲಿ ಅಡುಗೆ ಮನೆಗೆ ಧಾವಿಸಿ ನೋಡಿದರೆ, ದ್ರೌಪದಿ , ಶ್ರೀಕೃಷ್ಣ ಪರಮಾತ್ಮನನ್ನು ನೋಡಿ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಳು. ಸರ್ವಾಂತರ್ಯಾಮಿಯಾದ ಶ್ರೀಕೃಷ್ಣ ಪರಮಾತ್ಮನಿಗೆ ಎಲ್ಲಾ ಅರ್ಥವಾದರೂ ಅವಳ ಬಾಯಿಂದಲೇ ಕೇಳಬೇಕು ಎಂದು, "*ಯಾಕೆ ತಂಗಿ ಏನಾಯಿತಮ್ಮ ಯಾಕೆ ಅಳುತ್ತಿರುವೆ*" ಎಂದು ಕೇಳಿದಾಗ

ದ್ರೌಪದಿ ಹೇಳಿದಳು "*ಹೇ ವಾಸುದೇವ , ವನವಾಸದಲ್ಲಿ ಗಂಡರೊಡನೆ ಹಾಯಾಗಿ ವನಭೋಜನವ ಮಾಡುತ್ತಾ, ವೆಕೇಷನ್ ಮಾಡಬಹುದು ಎಂದು ನಾನು ವನವಾಸಕ್ಕೆ ಬರಲು ಒಪ್ಪಿದೆ, ಆದರೆ ನಾವು ಇಲ್ಲಿ ವನವಾಸದಲ್ಲಿ ಬಹಳ ಕಷ್ಟ ಪಡುತ್ತಿದ್ದೇವೆ ಎಂದು ನಮ್ಮನ್ನು ನೋಡಲು ಅನೇಕ VIP ಗಳು, ಸಾಧುಗಳು , ರಾಜರು, ಮಂತ್ರಿಗಳು ಹೀಗೆ ಎಲ್ಲಾ ಗಣ್ಯಾತಿ ಗಣ್ಯರು ನಮ್ಮ ಯೋಗಕ್ಷೇಮ ವಿಚಾರಿಸಲು ಧಾವಿಸುತ್ತಿದ್ದಾರೆ. ಬಂದವರಿಗೆಲ್ಲಾ ಅತಿಥಿ ಸತ್ಕಾರ ಮಾಡಲು ಅಡುಗೆ ಮಾಡಿ ಮಾಡಿ ಮಾಡಿ ಸುಸ್ತಾಗಿದೆ.*"

"*ಬಂದವರೆಲ್ಲರ ಜೊತೆ ಕಂಪನಿ ಕೊಡಲು ಭೀಮನು ಊಟಕ್ಕೆ ಕೂತ್ಕೋತಾನೆ. ನಿನಗೆ ಗೊತ್ತಲ್ಲವೇ ಭೀಮ ಎಷ್ಟು ಎಷ್ಟು ತಿಂತಾನೆ ಅಂತಾ. ಬೆಳಿಗ್ಗೆ ಇಂದ ರಾತ್ರಿವರೆಗೂ ಒಂದೇಸಮನೆ ಅಡುಗೆ ಮಾಡ್ತಾನೆ ಇರ್ಬೇಕು. ನಾನೇನು ಮನುಷ್ಯಳೋ ಅಥವಾ ಮಿಷನ್ನೋ?. ಭೀಮ ಬೇರೆ ಸುಮ್ನೆ ಇರಲಾರದೆ ಬಂದವರಿಗೆಲ್ಲಾ "ನನ್ ಹೆಂಡ್ತಿ ಸೂಪರ್ ಆಗಿ ಅಡುಗೆ ಮಾಡ್ತಾಳೆ " ಅಂತ ಎಲ್ರಿಗೂ ಹೇಳಿ , "ನೆಕ್ಸ್ಟ್ ಟೈಮ್ ಬರ್ಬೇಕಾದ್ರೆ ಹೆಂಡ್ತಿ ಮಕ್ಕಳ್ನ ಸಹ ಕರ್ಕೊಂಡ್ ಬನ್ನಿ " ಅಂತ ಬೇರೆ ಹೇಳ್ತಾನೆ. ಇನ್ನು ಮನೇಲಿ ಗ್ಯಾಸ್ ಸ್ಟವ್ ಬೇರೆ ಇಲ್ಲಾ. ಸೌದೆ ಒಲೆ. ಈ ಒಲೆ ಊದಿ ಊದಿ ಆ ಹೊಗೆ ಇಂದ ಕೆಮ್ಮು ಸಹ ಬೇರೆ ಪ್ರಾರಂಭವಾಗಿದೆ.*

"*ಆಪದ್ ಬಾಂಧವ , ಅನಾಥರಕ್ಷಕ ಕಷ್ಟ ನಿವಾರಕ ಶ್ರೀಕೃಷ್ಣ ಪರಮಾತ್ಮ. ಕಷ್ಟದಲ್ಲಿದ್ದಾಗ ಸೀರೆಯನ್ನು ಧಯಪಾಲಿಸಿ ನನ್ನ ಮಾನವನ್ನು ಕಾಪಾಡಿದವ ನೀನು , ಈಗ ನನ್ನನ್ನು ಈ ಕಷ್ಟದಿಂದ*

**ದ್ರೌಪದಿಯು**

"*ಹೇ ವಾಸುದೇವ- ಅನಾಥ ರಕ್ಷಕಾ ಆಪದ್ಬಾಂದವಾ!! ಇಲ್ಲಿ ವನವಾಸದಲ್ಲಿ ನಾವೆಲ್ಲಾ ಬಹಳ ಕಷ್ಟ ಪಡುತ್ತಿದ್ದೇವೆ. ಅನ್ನಕ್ಕಾಗಿ ದಿನವೂ ನಮಗೇ ಪರದಾಟ, ನಮ್ಮನ್ನು ನೋಡಲು ಬಂದ ಋಷಿ ಮುನಿಗಳ, ಸಾಧು ಸಂತರ ಸಂತೃಪ್ತರನ್ನಗಿಸಲು ಬಲು ಕಷ್ಟವಾಗಿದೆ* "

**ಎಂದಾಗ**

ಪಾರು ಮಾಡಲು ನೀನೆ ದಿಕ್ಕು , ದಯವಿಟ್ಟು ನನ್ನನು ಈ ಸಂಕಷ್ಟ ದಿಂದ ಪಾರು ಮಾಡು", ಎಂದು ದ್ರೌಪದಿ ಕೃಷ್ಣನ ಮೊರೆ ಕೇಳಿದಳು .

ಶ್ರೀ ಕೃಷ್ಣ ಪರಮಾತ್ಮನು ದ್ರೌಪದಿಯ ಅಳಲನ್ನು ಕೇಳಿ ಕನುಕರಿಸಿ , ಅವಳಿಗೆ ತನ್ನ ಮಾಯಾ ಶಕ್ತಿಯಿಂದ ಒಂದು **Instant ಪಾಟ್** ಅನ್ನು ವರವಾಗಿ ಕರುಣಿಸಿದನು.

"ಹೇ ಶ್ರೀ ಕೃಷ್ಣ ಪರಮಾತ್ಮ ಏನಿದು , ಪಾತ್ರೆ , ಇದರಿಂದ ನನಗಾಗುವ ಉಪಯೋಗವಾದರೂ ಏನು. ನನ್ನ ತೊಂದರೆ, ಕಷ್ಟ ಕಾರುನ್ಯಗಳು ಹೇಗೆ ನಿವಾರಣೆಯಾಗುತ್ತವೆ" ಎಂದು ಆಶ್ಚರ್ಯ ಚಕಿತಳಾಗಿ ದ್ರೌಪದಿ ಕೇಳಲು, ಶ್ರೀಕೃಷ್ಣನು ಹೇಳಿದ , "ತಂಗಿ ಇದನ್ನು ಇನ್ಸ್ಟಂಟ್ ಪಾಟ್ ಎನ್ನುವರು. ಇದನ್ನು IP ಎಂದು ಸಹ ಕರೆಯಬಹುದು. ಇದು ಕಲಿಯುಗದಲ್ಲಿ ಬಹಳ ಪ್ರಖ್ಯಾತವಾಗುವಂತಹ ಪಾತ್ರೆ. ಇದರಲ್ಲೇ ಎಷ್ಟೇ ಜನ ಬಂದರು ಬಹಳ ಬೇಗ ಅನೇಕ ಬಗೆಯ ಭಕ್ಷ್ಯ ಭೋಜ್ಯಗಳನ್ನು ಮಾಡಬಹುದು" ಎಂದನು.

"ಹೇ ಪರಮಾತ್ಮ ಇದರಲ್ಲಿ ಏನೇನು ಅಡುಗೆ ಮಾಡಬಹುದು , ಇದರ ಬಗ್ಗೆ ಇನ್ನಷು ವಿವರಣೆ ಯನ್ನು ನೀಡಿ ನನ್ನನು ಕೃತಾರ್ತಳನ್ನಾಗಿ ಮಾಡು" ಎಂದು ಕೇಳಲು

ಶ್ರೀಕೃಷ್ಣನು IP ಬಗ್ಗೆ ಹೀಗೆ ವಿವರಿಸಿದನು .



"ಮನೆಯಲ್ಲಿ ವಿನೋದ್ (ಪ್ರೆಷರ್ ಕುಕ್ಕರ್) ಚುಷ್ ಎಂದು ಕರ್ಕಶವಾಗಿ ಕೂಗಿದರೆ , ಮಲಗಿರುವ ಎಲ್ಲರಿಗು ಮತ್ತು ಅಕ್ಕ ಪಕ್ಕ ಇರುವವರಿಗೆಲ್ಲರಿಗೂ ಶಾಂತಿ ಭಂಗವಾಗುತ್ತದೆ, ಕೆಲವೊಮ್ಮೆ ಮತ್ತೆ ಮತ್ತೆ ಪ್ರೆಸ್ಟೀಜ್ ಪ್ರೆಷರ್ ಕುಕ್ಕರ್ ವಿಸ್ಲ್ಸ್ ಅಂತ ಕೂಗಿ ಕೂಗಿ ನಮ್ಮ ಪ್ರೆಸ್ಟೀಜ್ ಕಡಿಮೆ ಯಾಗುತ್ತದೆ . ತಂಗಿ , ಈ IP ಇಷ್ಟು ಪುಟ್ಟದಾದರೂ ಇದರ ಕೀರ್ತಿ ಬಹಳ ದೊಡ್ಡದು. ತುಂಬಿದ ಕೊಡದಂತೆ ಗಲಾಟೆ ಮಾಡದೆ ತನಗೆ ಕೊಟ್ಟ ಕೆಲಸವನ್ನು ನಿಶಬ್ದವಾಗಿ ಸಮಾಧಾನದಿಂದ ಮಾಡುತ್ತಾಳೆ . ಒಬ್ಬ ಸಶಕ್ತ ಹೆಣ್ಣಿನಂತೆ ಹೇಳಿದ ಸೂಚನೆ ಗಳನ್ನೂ ಸುಂದರವಾಗಿ ಕಾರ್ಯಗತಗೊಳಿಸಿ ರುಚಿ ರುಚಿ ಯಾದ ಹಾಗು ಸ್ವಾದಿಷ್ಟವಾದ ಆಹಾರ ವನ್ನು ತಯಾರಿಸುತ್ತಾಳೆ . ನಮ್ಮ BBB (ಬೃಂದಾವನ ಬಂದು ಬಳಗ) ದವರಿಗೆ ಇದರಲ್ಲೇ ಸ್ವಾದಿಷ್ಟವಾದ BBB (ಬಿಸಿ ಬೇಳೆ ಬಾತ್) ತಯಾರಿಸ ಬಹುದು.

ಪಟ್ಟಣದಲ್ಲಿ ಇದ್ದಾಗ ಚಲನಚಿತ್ರ ನೋಡುವ ಮೊದಲು ಬರುವ Honda ಬಂಡಿಯ ವಿಜ್ಞಾಪನೆ ನೆನಪಿದೆಯಾ ತಂಗಿ.. Fill it shut it forget it ಹಾಗೆಯೇ ಈ IP ಯಲ್ಲಿ ಅಕ್ಕಿ ಬೆಳೆ ತರಕಾರಿಯನ್ನು ತುಂಬಿಸಿ ಮುಚ್ಚಳವನ್ನು ಹಾಕಿದರೆ ಸಾಕು , ಕೆಲವೇ ನಿಮಿಷಗಳಲ್ಲಿ ಬಿಸಿ ಬಿಸಿ ಅಡುಗೆ ಸಿದ್ದವಾಗಿರುತ್ತದೆ.

ನನ್ನ ಪ್ರಿಯ ಪಾಂಡವರ ಎಲ್ಲ ಗುಣಗಳನ್ನು ಈಕೆ ಯಲ್ಲಿ ತುಂಬಿರುವೆ . ***ಧರ್ಮರಾಯನಂತೆ*** ಹೇಳಿದ ಮಾತು ತಪ್ಪುವುದಿಲ್ಲಾ. ಯೋಗರ್ಟ್ ಮೋಡಿ ನಲ್ಲಿ ಗಟ್ಟಿ ಮೊಸರು, ರೈಸ್ ಮೋಡಿನಲ್ಲಿ ಮೃದುವಾದ ಅನ್ನ ಸಾಟೆ ಮೋಡಿನಲ್ಲಿ ಗಮ ಗಮ ಒಗ್ಗರಣೆ. ***ಭೀಮನಂತೆ*** ಬಲಶಾಲಿ, ೮ qt ದೊಡ್ಡ ಹಂಡೆಯಲ್ಲಿ ಸುಮಾರು ೧೫ ಜನರು ತಿಂದು ತೇಗುವಷ್ಟು ಅಡುಗೆ ಮಾಡಬಹುದು. Over load ಆದರೂ ಸಹಿಸಿ ಕೊಂಡು ಕುಕ್ ಮಾಡುತ್ತಾಳೆ ಈ IP . ***ಅರ್ಜುನನಂತೆ*** ವೇಗ , ಹತ್ತು ನಿಮಿಷ ದಲ್ಲಿ ಕೊಟ್ಟ ಕಾರ್ಯ ಗುರಿ ತಪ್ಪದೆ ಮುಗಿಸುತ್ತಾಳೆ. ***ನಕುಲ ಸಹದೇವರಂತೆ*** ಕೌಂಟರ್ ಟಾಪ್ ಮೇಲೆ ಸುಂದರವಾಗಿ ಕಾಣುತ್ತದೆ ಈ IP. ಇನ್ಸ್ಟಂಟ್ ಪಾಟ್ ಅನ್ನು ಕೇವಲ ಕರೆಂಟ್ ಪ್ಲಗ್ ಗೆ ಪ್ಲಗ್ ಮಾಡಿದರೆ ಸಾಕು ಅಷ್ಟೇ ಬಗೆ ಬಗೆ ಯ ತಿಂಡಿ ತಿನಿಸುಗಳನ್ನು ಬೇಗ ಬೇಗ ಮಾಡಬಹುದು.

ದ್ರೌಪದಿ ಹೇಳಿದಳು : "ಕೃಷ್ಣ ಎಲ್ಲಾ ಓಕೆ .. ಇಲ್ಲಿ ಕರೆಂಟೇ ಇಲ್ಲವಲ್ಲ , IP ಯನ್ನು ಹೇಗೆ ಉಪಯೋಗಿಸಲಿ. ಅಯ್ಯೋ ನನ್ನ ಕಷ್ಟ ಗಳಿಗೆ ಕೊನೆಯೇ ಇಲ್ಲವೇ " ಎಂದು ಮತ್ತೆ ಅಳು ಶುರು ಮಾಡಲು

ಹೊರಟಾಗ ..
ಶ್ರೀ ಕೃಷ್ಣನು.  "ದ್ರೌಪದಿ ಸಾಕು ನಿಲ್ಲಿಸು, ಮಾತು ಮಾತಿಗೂ ಅಳುವುದು ತರವಲ್ಲ.  ಕಷ್ಟ ಬಂದಾಗ ಮನುಜರು ಅಳುವನ್ನು ನಿಲ್ಲಿಸಿ ಕಷ್ಟದಿಂದ ಪಾರಾಗುವ ಮಾರ್ಗವನ್ನು ಹುಡುಕಲು ಪ್ರಯತ್ನಿಸಬೇಕು. ನಾನಿರುವಾಗ ಚಿಂತೆಯೇಕೆ "  ಎಂದು  ಧರ್ಮರಾಜನನ್ನು ಕರೆದು ಹೀಗೆ ಹೇಳಿದನು  " ಎಲೈ ಧರ್ಮನಂದನನೇ  ನೀನು ಕೂಡಲೇ ಹೋಗಿ. ಸೂರ್ಯ ದೇವನಿಗೆ ಪ್ರಾರ್ಥಿಸಿ ವರವನ್ನು ಪಡೆ , ಸೂರ್ಯ ಶಕ್ತಿ ಇಂದ IP ಕೆಲಸ ಮಾಡುತ್ತದೆ ನಿಮ್ಮ ಎಲ್ಲ ಕಷ್ಟಗಳು ನಿವಾರಣೆಯಾಗುತ್ತದೆ"  ಎಂದು ಆಶೀರ್ವದಿಸಿದನು.



ಈ ಮಾತನ್ನು ಕೇಳಿ ಸಂತುಷ್ಟನಾದ ಧರ್ಮರಾಜನು ಘೋರ ತಪಸ್ಸನ್ನು ಮಾಡಿದನು. ಆಗ ಸೂರ್ಯದೇವನು ಅವನ ತಪಸ್ಸಿಗೆ ಮೆಚ್ಚಿ. ಧರ್ಮರಾಜನಿಗೆ ಎರಡು ಸೋಲಾರ್ ಪ್ಯಾನಲ್ ಗಳನ್ನೂ ವರವಾಗಿ ಕೊಟ್ಟನು.

ಆಗ ಪಾಂಡವರು ಕೃಷ್ಣ ನು ಸೂಚಿದ ಮಾರ್ಗವನ್ನು ಅನುಸರಿಸಿ ಅಡವಿಯಲ್ಲಿ  ಸೋಲಾರ್ ಪ್ಯಾನಲ್ ಗಳನ್ನೂ  ಸ್ಥಾಪಿಸಿದರು. ದ್ರೌಪದಿಯು ಸೋಲಾರ್ ಶಕ್ತಿಯನ್ನು ಉಪಯೋಗಿಸಿ   ಕೃಷ್ಣನು ಹೇಳಿಕೊಟ್ಟಂತೆ  IP ಯಲ್ಲಿ ಸುಲಭವಾಗಿ ಬಗೆ ಬಗೆಯ ಭಕ್ಷ್ಯ ಭೋಜ್ಯಗಳನ್ನೂ ತಯಾರಿಸಿ  ಪಾಂಡವರ ಜೊತೆ  ಸುಖವಾಗಿ ವನವಾಸ ವನ್ನು ಕಳೆದಳು.

ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು



*ಪಾಂಡವರ ಕುಟೀರಗಳು*







# ನನ್ನ ಸೌಭಾಗ್ಯ

ಕೆ ಎಂ ಕೊಪ್ಪದ್,

ದೇಶ ನೋಡು ಕೋಶ ಓದು ಎಂದು ಹಿರಿಯರು ಹೇಳುತ್ತಾರೆ. ಬೇರೆಬೇರೆ ದೇಶಗಳನ್ನು ನೋಡುವ ಬಯಕೆ ನನಗೆ ಮೊದಲಿನಿಂದಲೂ ಇತ್ತು. ಈ ಬೇಡಿಕೆ ಈಡೇರುವ ಅವಕಾಶ ನನ್ನ ಪಾಲಿಗೆ ಬಂದದ್ದು ಗರ್ಭವತಿಯಾದ ನನ್ನ ಮಗಳು ಅಮೇರಿಕಾದಲ್ಲೇ ಹೆರಿಗೆ ಮಾಡಿಸಿಕೊಳ್ಳಬೇಕೆಂದು ತೀರ್ಮಾನಿಸಿದಾಗ

ಡಾಕ್ಟರ್ ಮೇ ತಿಂಗಳ  ಮೊದಲವಾರ ಡೇಟ್ ಕೊಟ್ಟಿದ್ದರಿಂದ ನಮ್ಮ ಟಿಕೇಟನ್ನು ಏಪ್ರಿಲ್ ಎರಡನೇ ವಾರಕ್ಕೆ ಕಾಯ್ದಿರಿಸಿದ್ದೆವು. ಏಪ್ರಿಲ್ ಚಳಿಗಾಲ ಮುಗಿದು ಸ್ಪ್ರಿಂಗ್ ಪ್ರಾರಂಭವಾಗುವ ಸಮಯ..ಭಾರತದಿಂದ ಹೊರಟ ನನಗೆ ಹವಾಮಾನ ಹೇಗಿರುತ್ತದೋ ಎಂಬ ಭಯ..

ಇದರೊಂದಿಗೆ ನನ್ನ ಕಾಡುತ್ತಿದ್ದ ಮುಖ್ಯವಾದ ಭಯ ಪರದೇಶದಲ್ಲಿ ನಮ್ಮ ಭಾಷೆ ಮಾತನಾಡುವವರು ಸಿಗುತ್ತಾರೋ ಇಲ್ಲವೋ...ಸಿಕ್ಕರೂ ನಮ್ಮೊಂದಿಗೆ ಸಲುಗೆಯಿಂದ ಮಾತನಾಡುತ್ತಾರೋ ಇಲ್ಲವೋ? .ನಾಲ್ಕು ತಿಂಗಳು ಕಳೆಯುವುದು ಹೇಗೆ ಎಂದು.

ನ್ಯೂ ಜೆರ್ಸಿ ತಲುಪಿದಾಗ ಸಮಶೀತೋಷ್ಣ ಹವಾಮಾನವಿದ್ದು ವಸಂತದ ಹಸಿರು, ಚಿಗುರು ಹೂಗಳು ನಮಗಾಗಿ ಕಾಯುತ್ತಿದ್ದವು. ಇದರ ಖುಷಿ ಒಂದೆಡೆಯಾದರೆ, ಡಾಕ್ಟರ್  ಹೇಳಿಕೆಗಿಂತ ಎರಡು ವಾರ ಮೊದಲೇ ಹೆರಿಗೆಯಾಗಿ ನಮ್ಮ ಮನೆಯಲ್ಲಿ ಸಂಭ್ರಮ ತುಂಬಿತ್ತು. ಅಬ್ಬಾ.. ಹುಟ್ಟಿದ ಮಗುವನ್ನು ಮಾತನಾಡಿಸಲು ಬಂದ  ಕನ್ನಡಿಗರೆಷ್ಟು..ಅತೀ ಹೆಮ್ಮೆಯ ವಿಷಯವೆನಿಸಿದ್ದೆಂದರೆ ಕನ್ನಡಿಗರೆಲ್ಲಾ ೮೮೦೦ ಮೈಲು ದೂರವಿದ್ದರೂ ಕನ್ನಡದ ಪದ್ಧತಿಗಳ ಆಚರಿಸುತ್ತಾ ಬಂದಿದ್ದಾರೆ ಎಂದು.

ಒಂದು ವಾಕ್ಯ ನೆನಪಾಗುತ್ತದೆ "ಎತ್ತರದಲ್ಲಿ ಹಾರುತ್ತಾ ಸುಂದರವಾಗಿ ಕಾಣುವ ಗಾಳಿಪಟದ ಮೂಲ , ನೆಲದ ಮೇಲೆ ಸೂತ್ರ ಹಿಡಿದ ಕೈಗಳಲ್ಲಿದೆ.. ಮೂಲವನ್ನು ಮರೆಯದಿರೋಣ .. ನ್ಯೂ ಜೆರ್ಸಿಯ ಕನ್ನಡಿಗರು ತಮ್ಮ ಮೂಲವ ಮರೆಯದೇ, ತಮ್ಮ ಭಾಷೆಯ ಮರೆಯದೇ ಇರುವುದ ಕಂಡು ಆಶ್ಚರ್ಯವೂ ಆನಂದವೂ ಹೆಮ್ಮೆಯೂ ಆಯಿತು.

ಈ ಸಮಯದಲ್ಲೇ ನಾವು ಬೃಂದಾವನ ಕನ್ನಡ ಕೂಟದ ಬೇಸಿಗೆ ವನವಿಹಾರ ಕಾರ್ಯಕ್ರಮ್ದಲ್ಲಿ ಭಾಗವಹಿಸಿದೆವು. ಈ ಕನ್ನಡ ಕೂಟದ ಕಾರ್ಯಕ್ರಮ ಕೇವಲ ನಮ್ಮ ಭಾಷೆ ಅಷ್ಟೇ ಅಲ್ಲದೆ ವಿವಿಧ ಭಾಗಗಳ ಅಂದರೆ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಹಾಗೂ ಕರಾವಳಿ ಕರ್ನಾಟಕದ



ನೆನಪುಗಳನ್ನು ಸಿಹಿ ಸಿಹಿ ತಿಂಡಿ ತಿನಿಸುಗಳ ಮುಖಾಂತರ ನೆನಪು ಮಾಡಿ ಕೊಟ್ಟಿತು. ಸಮಾಜದಲ್ಲಿ ಎಲ್ಲ ವರ್ಗದವರನ್ನು ಎಲ್ಲ ವಯಸ್ಸಿನವರನ್ನು ಕಲೆ ಹಾಕಿಕೊಂಡು ವನವಿಹಾರ ಆಚರಿಸಿದ್ದು ಬಹಳ ಪ್ರಶಂಸನೀಯ. ನಿಮ್ಮ ಎಡಬಿಡದ ಕಾರ್ಯಕ್ರಮಗಳಲ್ಲಿ ಒಂದಿಷ್ಟು ಸಮಯವನ್ನು ಈ ವನವಿಹಾರಕ್ಕಾಗಿ ಉಪಯೋಗಿಸಿ ಕನ್ನಡ ಭಾಷೆಯವರನ್ನು ಒಂದುಗೂಡಿಸಿ ನಮ್ಮಂಥ ಅತಿಥಿಗಳನ್ನು ಸಂತೋಷಪಡಿಸುತ್ತೀರಲ್ಲಾಅದು ಅತೀ ಹೆಚ್ಚಿನ ನಿಮ್ಮಿಂದ ಬಂದ ಕಾಣಿಕೆ.

ಅಲ್ಲಿದ್ದ ಸಮಯದಲ್ಲಿ ಈ ಕಾರ್ಯಕ್ರಮಗಳು ನಮ್ಮನ್ನು ಬೇಜಾರು ಆಗದಂತೆ ನೋಡಿಕೊಳ್ಳುತ್ತವೆ . ಅದೇ ಬಹು ಮುಖ್ಯ.
ಕ್ರೀಡೆಗಳನ್ನು ಏರ್ಪಡಿಸಿದ್ದು ಕೂಡ ಒಳ್ಳೆಯ ರೀತಿಯಾಗಿತ್ತು. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯ ನಾಗರಿಕರವರೆಗೆ ಯಾರು ಬೇಸರ ಪಟ್ಟುಕೊಳ್ಳದೇ ಎಲ್ಲರೂ ಲವಲವಿಕೆಯಿಂದ ಭಾಗವಹಿಸಿ ಆನಂದಪಟ್ಟಿದ್ದು ಒಳ್ಳೆಯ ಸಂಗತಿ.

ಇನ್ನು ಕೂಟದ ಹೆಸರೂ ಕೂಡ ನಮ್ಮ ಕರ್ನಾಟಕದವರು ಪ್ರತಿ ದಿನ ನೆನೆಯುವ ಹೆಸರು "ಬೃಂದಾವನ" ಈ ಹೆಸರಿಟ್ಟು ಜಗತ್ತಿನ ತುಂಬೆಲ್ಲಾ ಪಸರಿಸುತ್ತಿರುವುದು ಹೆಮ್ಮೆಯ ವಿಷಯ. ಒಟ್ಟಾರೆ ೨೦೧೯ ನನ್ನ ಪಾಲಿಗೆ ಅತೀ ಮಹತ್ವದ ಮತ್ತು ನೆನಪಿಡುವ ವರ್ಷವಾಗಿತ್ತು ಅಂತಾ ನನ್ನ ಬರಹಕ್ಕೆ ವಿರಾಮ ಹೇಳುತ್ತೇನೆ.

"ಕನ್ನಡವೇ ಸತ್ಯ ಕನ್ನಡವೇ ನಿತ್ಯ,
ವಂದೇ ಮಾತರಂ, ಭಾರತ ಮಾತಾಕೀ ಜೈ"





# ರವೆ ಉಂಡೆ

ಉಮಾ ರಾಯಸಂ

ನನ್ನ ಅತ್ತೆ ಹೇಳಿಕೊಟ್ಟ , ಸುಲಭ ಹಾಗು ಬೇಗ ಮಾಡ ಬಹುದಾದ ರವೇ ಉಂಡೆ ಮಾಡುವ ವಿಧಾನ:

ಬೇಕಾಗುವ ಸಾಮಗ್ರಿಗಳು :

1 ಕಪ್ ರವೆ ( ಚಿರೋಟೀ / ಅಥವಾ ಬಿಳಿ ರವೇ )
1 ಕಪ್ ಸಕ್ಕರೆ
1/2 ಕಪ್ ಒಣ ಕೊಬ್ಬರಿ ಪುಡಿ .
1/4 tsp ಏಲಕ್ಕಿ ಪುಡಿ
1/4 ಕಪ್ ಗೋಡಂಬಿ
1/4 ಕಪ್ ಒಣ ದ್ರಾಕ್ಷಿ .
1/2 ಕಪ್ ತುಪ್ಪ
1/2 ಹಾಲು

ವಿಧಾನ :

- ಪ್ಯಾನ್ ಅನ್ನು ಒಲೆಯ ಮೇಲೆ ಇರಿಸಿ. 1/4 ತುಪ್ಪ ಸೇರಿಸಿ ಮತ್ತು ಗೋಡಂಬಿ ಮತ್ತು ಒಣದ್ರಾಕ್ಷಿ ಹುರಿದು ಪಕ್ಕಕ್ಕೆ ಇರಿಸಿ.
- ಅದೇ ಪ್ಯಾನ್ ನಲ್ಲಿ 1/4 ಕಪ್ ತುಪ್ಪ ವನ್ನು ಹಾಕಿ ಉತ್ತಮ ಸುವಾಸನೆಯನ್ನು (ಅರೋಮಾ) ಬರುವವವರೆಗೆ ರವೆಯನ್ನು ಮಧ್ಯಮ ಉರಿಯಲ್ಲಿ ಹುರಿಯಿಸಿ.
- ಹುರಿದ ರವೆಯ ಜೊತೆ ಒಣ ಕೊಬ್ಬರಿ ಪುಡಿ, ಸಕ್ಕರೆ, ಏಲಕ್ಕಿ ಪುಡಿ, ಹುರಿದ ಗೋಡಂಬಿ, ಹುರಿದ ಒಣದ್ರಾಕ್ಷಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.
- ಹಾಲನ್ನು ಕುದಿಸಿ ಮತ್ತು ಬಿಸಿ ಹಾಲನ್ನು ರವೆಯ ಮಿಶ್ರಣಕ್ಕೆ ಸ್ವಲ್ಪ ಸ್ವಲ್ಪ ಸೇರಿಸಿ ಮತ್ತು ನಿಮ್ಮ ಕೈಗಳನ್ನು ಬಳಸಿ ವುಂಡೇಗಳನ್ನು ತಯಾರಿಸಲು ಪ್ರಾರಂಭಿಸಿ.

ಅಡುಗೆ ಸಮಯ: 15 ನಿಮಿಷಗಳು.

ಟಿಪ್ಸ್ :

- ರವೇ ಉಂಡೆ ಮಾಡುವ ಮೊದಲು ನಿಮ್ಮ ಕೈಗಳನ್ನು ಟವೆಲ್ ಉಪಯೋಗಿಸಿ ಒಣಗಿಸಿಕೊಳ್ಳಿ .

- ರವೇ ಉಂಡೆ ಮಾಡಿದ ತಕ್ಷಣ ಅದರ ರುಚಿ ಬೇರೆ ಇರುತ್ತದೆ.. ಸ್ವಲ್ಪ ಸಮಯದ ನಂತರ ಅದರ ರುಚಿ ಇನ್ನು ಚೆನ್ನಾಗಿ ಇರುತ್ತದೆ..



# ವೆನಿಲಾ ಕಪ್ ಕೇಕ್

*ಅಮೃತ ಲಕ್ಷ್ಮೀಶನ್*

*ಅನುವಾದ : ರಘುರಾಂ ರಾಯಸಂ*

ವೆನಿಲಾ ಕಪ್ ಕೇಕ್ :

ಬೇಕಾಗುವ ಸಾಮಗ್ರಿಗಳು :

1 ಕಪ್ - ಹಾಲು

1 tsp - ಆಪಲ್ ಸೀಡರ್ ವಿನೆಗರ್

1 ಕಪ್ ಸಕ್ಕರೆ

1/3 ಕಪ್ ಎಣ್ಣೆ

1 1/4 tsp ಬೇಕಿಂಗ್ ಪೌಡರ್

1/2 tsp ಬೇಕಿಂಗ್ ಸೋಡಾ

1 1/3 ಕಪ್ ಮೈದಾ.

2 tbsp ವೆನಿಲಾ ಎಸೆನ್ಸ್

ವಿಧಾನ :-

- ಓವನ್ ಅನ್ನು 350 F ಗೆ ಇಟ್ಟು ಪ್ರಿ ಹೀಟ್ ಮಾಡಿಕೊಳ್ಳಿ.
- ಕಪ್ ಕೇಕ್ ಪ್ಯಾನ್ ನಲ್ಲಿ ಕಪ್ ಕೇಕ್ ಲೈನರ್ಗಳನ್ನು ಇರಿಸಿ.
- ಒಂದು ದೊಡ್ಡ ಬೌಲ್ ತೆಗೆದುಕೊಳ್ಳಿ. ಅದರಲ್ಲಿ ಹಾಲು , ಆಪಲ್ ಸೈಡರ್ ವಿನೆಗರ್ ಹಾಕಿ ಚೆನ್ನಾಗಿ ಕಲಸಿ , 5 ನಿಮಿಷ ಪಕ್ಕದಲ್ಲಿ ಇಡಿ.
- ಮೇಲಿನ ಮಿಶ್ರಣಕ್ಕೆ, ಸಕ್ಕರೆ , ಎಣ್ಣೆ , ವೆನಿಲಾ ಎಸೆನ್ಸನ್ನು ಬೆರೆಸಿ ಚೆನ್ನಾಗಿ ಮಿಶ್ರಣ ತಯಾರಿಸಿಕೊಳ್ಳಿ . ಇದು ಹಾಲಿನ ಮಿಶ್ರಣ.
- ಬೇರೆ ಬೌಲ್ನಲ್ಲಿ ಒಂದು ಜರಡಿ ಇರಿಸಿ ಅದರಲ್ಲಿ ಮೈದಾ , ಬೇಕಿಂಗ್ ಪೌಡರ್ ಮತ್ತು ಬೇಕಿಂಗ್ ಸೋಡಾವನ್ನು ಜರಡಿಸಿ. ಇದು ಹಿಟ್ಟಿನ ಮಿಶ್ರಣ.
- ಹಿಟ್ಟಿನ ಮಿಶ್ರಣವನ್ನು ಹಾಲಿನ ಮಿಶ್ರಣದಲ್ಲಿ ಬೆರೆಸಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ.
- ಈಗ ಕಪ್ ಕೇಕ್ ಹಿಟ್ಟು ಸಿದ್ದ .
- ಐಸ್ ಕ್ರೀಮ್ ಸ್ಕೂಪ್ ಬಳಸಿ ಕಪ್ಕೇಕ್ ಲೈನರ್ಗಳನ್ನು ಕಪ್ ಕೇಕ್ ಹಿಟ್ಟಿನಿಂದ 3/4 ಷ್ಟು ತುಂಬಿಸಿ.
- 18-20 ನಿಮಿಷ ಬೇಕ್ ಮಾಡಿ. ಕಪ್ಕೇಕ್ ಪೂರ್ತಿಯಾಗಿ ಬೇಕ್ ಆಗಿದೆಯಾ ಎಂದು ಟೂತ್ ಪಿಕ್ ಅನ್ನು ಕೇಕ್ ಮಧ್ಯದಲ್ಲಿ ಚುಚ್ಚಿ ನೋಡಿ. ಟೂತ್ ಪಿಕ್ ಗೆ ಏನು ಅಂಟದೆ ಹೊರಬಂದರೆ, ಓವನ್ನಲ್ಲಿನ ಕೇಕುಗಳನ್ನು ಹೊರತೆಗೆಯಿರಿ. ಬ್ಯಾಟರ್ ಟೂತ್ಪಿಕ್ನಲ್ಲಿ ಅಂಟಿಕೊಂಡರೆ ಇನ್ನೊಂದು 2 ನಿಮಿಷ ಬೇಯಿಸಿದ ನಂತರ ಮತ್ತೆ ಪರಿಶೀಲಿಸಿ.
- ಈಗ ಯಮ್ಮಿ ವೆನಿಲಾ ಕಪ್ ಕೇಕ್ ಸವಿಯಲು ಸಿದ್ಧ.

ಬಟರ್ ಕ್ರೀಮ್ ಟಾಪಿಂಗ್ ಮಾಡುವ ವಿಧಾನ

ಬೇಕಾಗುವ ಸಾಮಗ್ರಿಗಳು :

1 ಕಪ್ ಬೆಣ್ಣೆ

2 ಕಪ್ ಪುಡಿ ಸಕ್ಕರೆ

1 tbsp ನೀರು

1 tsp ವೆನಿಲಾ ಎಸೆನ್ಸ್

ವಿಧಾನ :-

- ಬೆಣ್ಣೆ ಯನ್ನು ರೂಮ್ temp ನಲ್ಲಿ ಇಡಿ .
- ಬೆಣ್ಣೆ ಯನ್ನು ಒಂದು ಬೌಲ್ ನಲ್ಲಿ ಹಾಕಿ . hand mixture ಅಥವಾ stand mixture ಬಳಸಿ ಬೆಣ್ಣೆ ಯನ್ನು ಮೃದುವಾಗಿ ಮಾಡಿ.
- ಬೇರೆ ಎಲ್ಲಾ ಸಾಮಾಗ್ರಿ ಗಳನ್ನೂ ಬೌಲ್ ನಲ್ಲಿ ಹಾಕಿ ಮೃದುವಾಗುವ ವರೆಗೂ ಕಲೆಸಿ .
- ಯಾವುದೇ ಡಿಸೈನರ್ ಟಿಪ್ ಬಳಸಿ. ಪೈಪಿಂಗ್ ಚೀಲದ ತುದಿಯನ್ನು ಕತ್ತರಿಸಿ, ಡಿಸೈನರ್ ಟಿಪ್ ಕತ್ತರಿಸಿದ ತುದಿಯಲ್ಲಿ ಇರಿಸಿ ಮತ್ತು ಚೀಲವನ್ನು ಬಟರ್ಕ್ರೀಮ್ನಿಂದ ತುಂಬಿಸಿ.
- ನಿಮ್ಮ ಇಮ್ಯಾಜಿನೇಷನನ್ನು ಬಳಸಿಕೊಂಡು ಕಪ್ ಕೇಕ್ನ ಮೇಲ್ಭಾಗವನ್ನು ಚೆನ್ನಾಗಿ ವಿನ್ಯಾಸಗೊಳಿಸಿ





# ತೂಕ ಇಳಿಸುವಿಕೆ-ನನ್ನ ಅನುಭವ

*ರಾಮು ಚಂದ್ರ (ರಾಮಚಂದ್ರ)*

*ಅನುವಾದ : ದಾಶರಥಿ ಘಟ್ಟು*

ನನ್ನ ಹೆಸರು ರಾಮು ಚಂದ್ರ (ರಾಮಚಂದ್ರ). ನಾನು ಮೂಲತಃ ಮೈಸೂರು-ಬೆಂಗಳೂರು ಕಡೆಯವನು. ಅಮೇರಿಕ ದೇಶದಲ್ಲಿ ೧೯೯೧ ರಿಂದ ನೆಲೆಸಿದ್ದೇನೆ. ನಾನು ನ್ಯೂಜರ್ಸಿಗೆ ೨೦೦೦ ದಲ್ಲಿ ಬಂದೆ.

ನಾನು ಬಾಲ್ಯದಲ್ಲಿ ಸಾಧಾರಣ ತೂಕದ ಸಣಕಲು ಹುಡುಗನಾಗಿದ್ದೆ. ಹಾಗೆ ನೋಡಿದರೆ ನನ್ನ ೩೫ನೇ ವಯಸ್ಸಿನವರೆಗೂ ನಾನು ಹಾಗೆ ಸಣಕಲನಾಗಿಯೇ ಇದ್ದೆ. ನಂತರ ನನ್ನ ಶರೀರದ ತೂಕ ನಿಧಾನವಾಗಿ ಏರತೊಡಗಿ, ಸ್ಥೂಲಕಾಯದ ಗುಂಪಿಗೆ ಸೇರ್ಪಡೆಯಾದೆ. ಅದೃಷ್ಟವಶಾತ್ ರಕ್ತದೊತ್ತಡ, ಮಧುಮೇಹದಂತಹ ಖಾಯಿಲೆಗಳು ಅಂಟಿಕೊಳ್ಳಲಿಲ್ಲ. ಆದರೆ ೨೦೧೫ರಲ್ಲಿ ನನ್ನ ಎಡ ಮೊಣಕಾಲಿನ meniscus ಟೇರ್ ಆಯಿತು. ಶಸ್ತ್ರಚಿಕಿತ್ಸೆ ಮಾಡಿಸಬೇಕೆಂದು ಹೇಳಿದರೂ, ನಾನು ಸ್ವಲ್ಪ ತಡೆದೆ. ಆ ಸಮಯದಲ್ಲಿ ನಾನು, ಶರೀರದ ಅಧಿಕ ತೂಕ ಮೊಣಕಾಲುಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ಓದಿದೆ. ಅದರ ಪ್ರಕಾರ, ಪ್ರತಿಯೊಂದು ಪೌಂಡ್ ಹೆಚ್ಚಿನ ಶರೀರದ ತೂಕವೂ ಮೊಣಕಾಲುಗಳ ಮೇಲೆ ನಾಲ್ಕು ಪೌಂಡುಗಳಷ್ಟು ಹೆಚ್ಚು ಒತ್ತಡ ಹಾಕುತ್ತದೆ. ನಾನು ನನ್ನ ತೂಕವನ್ನು ತಕ್ಷಣವೇ



ಇಳಿಸಿಕೊಳ್ಳಬೇಕೆಂದುಕೊಂಡೆ.

ಎರಡು ವಾರಗಳ ಸಮಯದಲ್ಲಿ ನನ್ನ ಮಗಳ ಸ್ವೀಟ್ ಸಿಕ್ಸ್ಟೀನ್ ಹೊತ್ತಿಗೆ, ನನ್ನ ಹಳೆಯ ಸೂಟ್ ಅಳತೆಗೆ ತೂಕ ಇಳಿಸಬೇಕೆಂದು, ೨೦೧೫ರ ಡಿಸೆಂಬರ್ ನಲ್ಲಿ ನಾನು ಸಂಕಲ್ಪ ಮಾಡಿದೆ. ನನ್ನ ಸೂಟ್ ಅಷ್ಟೇನೂ ಬಿಗಿಯಾಗಿರಲಿಲ್ಲ. ಆದುದರಿಂದ ಇದು ದೊಡ್ಡ ಗುರಿ ಏನಾಗಿರಲಿಲ್ಲ. ನಾನು ಯಾರ ಉಪದೇಶಗಳನ್ನೂ ಕೇಳದೆ, ನನ್ನದೇ ಯೋಜನೆಯನ್ನು ಕಾರ್ಯಗತ ಮಾಡಲು ನಿರ್ಧರಿಸಿದೆ. ಈ ಯೋಜನೆಯಂತೆ, ಹಗಲಿನಲ್ಲಿ ಬರೀ ನಾಲ್ಕೈದು ಕಪ್ ಕಾಫಿ ಕುಡಿಯುವುದು, ರಾತ್ರಿ ಊಟ ಮಾಡುವುದು ಮಾಡತೊಡಗಿದೆ. ಇದರಂತೆ ದಿನಕ್ಕೆ ಬರೀ ೮೦೦-೯೦೦ ಕ್ಯಾಲರಿಗಳನ್ನು ಸೇವಿಸುತ್ತಿದ್ದೆ. ೨ ವಾರಗಳ ನಂತರ ನೋಡಿದಾಗ ನನ್ನ ಗುರಿ ಮುಟ್ಟಿದ್ದೆ. ಇದರಿಂದ ನನಗೆ ತುಂಬಾ ಸಂತೋಷವಾಯಿತು. ಸಂಭ್ರಮದಿಂದ ನಾನು ಒಂದು ಹೊಸ ಸೂಟನ್ನೇ ಖರೀದಿಸಿದೆ.

ಇದರಿಂದ ತುಂಬಾ ಉತ್ಸಾಹಿತನಾದ ನಾನು ಮುಂದಕ್ಕೂ ಕೆಲವು ದಿನ ತೂಕ ಇಳಿಸಿಕೊಳ್ಳುವುದನ್ನು ಮುಂದುವರಿಸಿದೆ. ಯಾವುದೇ ನಿರ್ದಿಷ್ಟ ಗುರಿಯನ್ನು ಇಟ್ಟುಕೊಳ್ಳದೆ, ನನ್ನ ಕಾರ್ಯಕ್ರಮ ಹೇಗೆ ಕೆಲಸ ಮಾಡಬಹುದೆಂಬ ಕುತೂಹಲದಿಂದ ಮುಂದುವರಿದೆ. ಎರಡು ಹಂತಗಳಲ್ಲಿ ನಾಲ್ಕೈದು ತಿಂಗಳ ಕಾಲ ಇದನ್ನು ಯೋಜಿಸಿದೆ.


ಹಂತ ೧: ಸುಮಾರು ಒಂದು ತಿಂಗಳ ಕಾಲ ಡಯಟ್ ಮಾಡಿದೆ. ಇದರಿಂದ ಸುಮಾರು ೧೫ ಪೌಂಡ್ ತೂಕ ಕಡಿಮೆ ಮಾಡಿಕೊಂಡೆ. ಹುರ್ರೇ! ಇದು ಕೆಲಸ ಮಾಡುತ್ತಿದೆ ಎಂದು ಗೊತ್ತಾಗಿ, ಮುಂದಿನ ಹಂತಕ್ಕೆ ಹೋದೆ.

ಹಂತ ೨: ದಿನದ ಸಮಯದಲ್ಲಿ ತುಂಬಾ ಲಘು ಆಹಾರ ಅಥವಾ ಒಂದು ಬಾಳೆ ಹಣ್ಣು ತಿನ್ನತೊಡಗಿದೆ. ಇದರ ಜೊತೆ ಟ್ರೆಡ್ ಮಿಲ್ ಮೇಲೆ ವ್ಯಾಯಾಮ ಮಾಡುವುದು. ವ್ಯಾಯಾಮದ ಗುರಿ, ನಾನು ತೆಗೆದುಕೊಂಡಷ್ಟು ಕ್ಯಾಲೋರಿಗಳನ್ನು ಕರಗಿಸುವುದು. ಇದು ದೊಡ್ಡ ಸವಾಲಾಗಿತ್ತು. ನಾನು ನನ್ನ ಜೀವನದಲ್ಲಿ ಎಂದೂ ವ್ಯಾಯಾಮ ಮಾಡಿದವನೇ ಅಲ್ಲ. ಜೀವ ಉಳಿಸಿಕೊಳ್ಳಲೂ ೧೦೦ ಅಡಿ ಓಡುವ ಉಮೇದಿಲ್ಲದವನು ನಾನು. ಮೇಲಾಗಿ ಮೊಣಕಾಲಿನ ಪೆಟ್ಟು ಬೇರೆ ಭಾದಿಸುತ್ತಿತ್ತು. ಇವೆಲ್ಲಾ ಕಾರಣಗಳೂ ನನಗೆ ಪ್ರತಿಕೂಲವಾಗೇ ಇತ್ತು. ಆದರೂ, ನಾನು ಇಳಿಸಿಕೊಂಡ ತೂಕದ ನೆನಪು ನನ್ನ ಪ್ರೇರಣೆಯಾಗಿತ್ತು. ಮೇಲುಸಿರು ಬಿಟ್ಟುಕೊಂಡು ಒದ್ದಾಡುತ್ತಾ ಟ್ರೆಡ್ ಮಿಲ್ ಮೇಲೆ ನಿಧಾನವಾಗಿ ಒಂದು ಮೈಲಿ ಓಡಲು ತೊಡಗಿದೆ. ದಿನೇ ದಿನೇ ನನ್ನ ಸಾಮರ್ಥ್ಯವನ್ನು ಉತ್ತಮ ಪಡಿಸಿಕೊಳ್ಳುತ್ತಾ, ೭ ಮೈಲಿಗೂ ಹೆಚ್ಚು ಟ್ರೆಡ್ ಮಿಲ್ ಮಾಡತೊಡಗಿದೆ. ಟ್ರೆಡ್ ಮಿಲ್ ಮುಂದೆ ಟಿವಿಯಂತೂ ಇರಲೇಬೇಕು ನೋಡಿ. ಹೀಗೆ ಮುಂದುವರೆದು, ಮೇ ಮಧ್ಯದ ಹೊತ್ತಿಗೆ ೫೦ ಪೌಂಡ್ ತೂಕ ಇಳಿಸಿದೆ.

ಕುಟುಂಬದವರ ಮತ್ತು ಗೆಳೆಯರ ಒತ್ತಡದಿಂದ ೧೦ ಪೌಂಡ್ ತೂಕ ಮತ್ತೆ ಹೆಚ್ಚಿಸಿಕೊಳ್ಳಬೇಕಾಯಿತು. ಹೀಗಾಗಿ ಒಟ್ಟು ೪೦ ಪೌಂಡ್ ತೂಕ ಕಳೆದುಕೊಂಡೆ. ಇದರಿಂದಾದ ತುಂಬಾ ಒಳ್ಳೆಯ ಫಲವೆಂದರೆ, ನನ್ನ ಹಳೇ

ಉಡುಪುಗಳನ್ನೆಲ್ಲಾ ಎಸೆದು ಹೊಸ ಪ್ಯಾಂಟ್, ಷರ್ಟ್ ಮತ್ತು ಒಳ ಉಡುಪುಗಳನ್ನು ಕೊಂಡಿದ್ದು.

ಮತ್ತೇನೆಂದರೆ, ನನ್ನ ಮೊಣಕಾಲ ಮಿನಿಸ್ಕಸ್ ಟೇರ್ ನ ಭಾದೆ ನಿಂತೇ ಹೋಯಿತು. ಅದಕ್ಕೆ ಕಾರಣವೆಂದರೆ, ಮೊಣಕಾಲುಗಳ ಮೇಲೆ ೪X೪೦ =೧೬೦ ಪೌಂಡ್ ಗಳ ಒತ್ತಡ ಕಡಿಮೆಯಾಗಿದ್ದು.



ನನ್ನ ಈ ಸಾಧನೆಯಿಂದ ನನಗೆ ತುಂಬಾ ಹೆಮ್ಮೆಯೆನಿಸತೊಡಗಿತು. ಅದೇನೂ ಸುಲಭದ ಸಾಧನೆಯಲ್ಲ. ನಾನು ಅದಕ್ಕಾಗಿ ತುಂಬಾ ಶ್ರಮ ವಹಿಸಿದ್ದೆ. ನಾನು ಹೋದೆಡೆಯೆಲ್ಲಾ ನನ್ನನ್ನು ಎಲ್ಲರೂ ಕೇಳತೊಡಗಿದ್ದು ಒಂದೇ ಪ್ರಶ್ನೆ-"ಇದನ್ನು ಹೇಗೆ ಮಾಡಿದಿರಿ?" ಗೆಳೆಯರೇ, ಇದಕ್ಕೆ ನನ್ನ ಉತ್ತರ - ೧) ಮೋಟಿವೇಷನ್, ೨) ದೃಢ ನಿಶ್ಚಯ,  ಮತ್ತು ಆಹಾರದ ಮೇಲಿನ ಕಾಂಕ್ಷೆಯನ್ನು ನಿಯಂತ್ರಿಸುವುದು.

ಮೋಟಿವೇಷನ್ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಸ್ವಲ್ಪ ತೂಕ ಇಳಿಯುವುದನ್ನು ನೋಡುವವರೆಗೂ ಅದಕ್ಕೆ ಕಾಯಬೇಕು. ಆಹಾರದ ಮೇಲಿನ ಕಾಂಕ್ಷೆ ನಿಯಂತ್ರಿಸುವುದು ತುಂಬಾ ಮುಖ್ಯವಾದುದು. ಯಾವುದನ್ನೂ ತಿನ್ನುವುದನ್ನು ನಿಲ್ಲಿಸಬೇಡಿ. ಯಾವುದಾದರೂ ಪಾರ್ಟಿಗಳಿಗೆ ಹೋದರೆ, ನಿಮಗೆ ಇಷ್ಟವಾದ್ದನ್ನು ಮಾತ್ರ ತಿನ್ನಿ. ಅಲ್ಲಿರುವ ಎಲ್ಲವನ್ನೂ ಅಲ್ಲ. ನೀವು ನಿಮ್ಮ ಆಹಾರದ ಮೇಲಿನ ವಾಂಛೆಯನ್ನು ದಮನ ಮಾಡಿದರೆ, ಅದು ನಿಜವಾಗಿಯೂ ಶಿಕ್ಷೆಯೇ. ಸ್ವಯಂ ಶಿಕ್ಷೆಯ ಯಾವ ಗುರಿಯೂ ಸಫಲವಾಗುವುದಿಲ್ಲ. ಆದುದರಿಂದ ಆಹಾರದ ಬಗೆಗಿನ ಆಸೆಯನ್ನು ದಮನಮಾಡದೆ ನಿಮಗೆ ಇಷ್ಟವಾದುದನ್ನು ಸಂತೋಷದಿಂದ ತಿನ್ನಿ. ಹಾಗೆ ನೋಡಿದರೆ, ಶ್ರೇಷ್ಠ ಆಹಾರ ಎನ್ನುವುದೇ ಇಲ್ಲ. ಎಲ್ಲಾ ಒಳ್ಳೆಯ ಆಹಾರವೇ. ಉತ್ತಮ, ಮಧ್ಯಮ ಎಲ್ಲವೂ ರಿಲೇಟಿವ್. ಅನ್ನ ಹುಳಿಯ ಬದಲು, ಮಧ್ಯಾಹ್ನದ ಊಟಕ್ಕೆ ಸಲಾಡ್ ತಿನ್ನುವುದು ಉತ್ತಮವೇ. ಆದರೆ ಎರಡನ್ನೂ ಬಿಡುವುದು ಇನ್ನೂ ಒಳ್ಳೆಯದು.

೬ ತಿಂಗಳ ತೀವ್ರ ಡಯಟ್ ಮತ್ತು ನಾನು ಅಂದುಕೊಂಡಷ್ಟು ತೂಕ ಇಳಿಸಿಕೊಂಡ ನಂತರ ನಾನು ಮಾಮೂಲಾಗಿ ಎಲ್ಲರಂತೆ ಆಹಾರ ತೆಗೆದುಕೊಳ್ಳತೊಡಗಿದೆ. ನಿಯಮಿತ ವ್ಯಾಯಾಮವನ್ನು ಮಾಡತೊಡಗಿದೆ. ಪಾರ್ಟಿಗಳು ಮತ್ತು ಹಬ್ಬಗಳ ನಂತರ ನನ್ನ ತೂಕ ಹೆಚ್ಚುವುದುಂಟು. ಆದರೆ ಡಯಟ್ ಮತ್ತು ವ್ಯಾಯಾಮಗಳಿಂದ ಅದನ್ನು ನಿಯಂತ್ರಿಸಿಬಿಡುತ್ತೇನೆ.

ನನ್ನ ವೈಯುಕ್ತಿಕ ಅನುಭವದ ಪ್ರಕಾರ, ತೂಕ ಕಡಿಮೆ ಮಾಡಿಕೊಳ್ಳುವುದರಿಂದ ಆಗುವ ಲಾಭಗಳೆಂದರೆ,

೧) ಆರೋಗ್ಯ, ನಾನು ೧೦ ವರ್ಷ ಚಿಕ್ಕವನಾದಂತೆ ಅನ್ನಿಸುತ್ತದೆ.

೨) ಆತ್ಮವಿಶ್ವಾಸ

೩) ಹೆಚ್ಚಿದ ಹುರುಪು

೪) ಫ್ಲೆಕ್ಸಿಬಿಲಿಟಿ

ತೂಕ ಇಳಿಸುವುದು ಅಷ್ಟೇನೂ ಕಷ್ಟವಲ್ಲ. ಬಹಳಷ್ಟು ಜನರಿಗೆ ಪ್ರಾರಂಭಿಸುವುದು ಕಷ್ಟ ಅಷ್ಟೇ. ಮೊದಲ ಒಂದು ಪೌಂಡ್ ಕಡಿಮೆಯಾದುದನ್ನು ನೋಡಿದರೆ, ನಿಮ್ಮ ಹುರುಪು ಹೆಚ್ಚುತ್ತದೆ ಮತ್ತು ಇನ್ನೂ ಹೆಚ್ಚು ಪೌಂಡ್ ಗಳನ್ನು ಇಳಿಸಲು ನೀವು ಶ್ರಮ ವಹಿಸುತ್ತೀರಿ. ಆದರೆ ಕಳೆದುಕೊಂಡ ತೂಕವನ್ನು ಅದೇ ಮಟ್ಟದಲ್ಲಿಟ್ಟುಕೊಳ್ಳಲು, ಲೈಫ್ ಸ್ಟೈಲ್ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ನೀವು ತೂಕ ಕಡಿಮೆ ಮಾಡಬೇಕೆಂದಾದರೆ, ತಕ್ಷಣ ಕಾರ್ಯಪ್ರವೃತ್ತರಾಗಿರಿ. ನೀವು ತುಂಬಾ ಖುಷಿ ಪಡುತ್ತೀರಿ. ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಕೊಡುವ ದೊಡ್ಡ ಕೊಡುಗೆ ಇದಾಗುತ್ತದೆ. ನನ್ನನ್ನು ನಂಬಿ. ತೂಕ ಇಳಿಸುವುದು ನಿಜವಾಗಿಯೂ ಸಾಧ್ಯ. ನಾನೇ ಮಾಡಿದ ಮೇಲೆ, ನೀವೂ ಮಾಡೇ ಮಾಡುತ್ತೀರಿ. ವಯಸ್ಸು ಮತ್ತು ಅನಾರೋಗ್ಯಗಳು ಇದಕ್ಕೆ ತಡೆಯಾಗುವುದಿಲ್ಲ.

